ಮೇಘನಾದ ಸಹಾ

ಯತಿರಾಜು



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಮೇಘನಾದ ಸಹಾ

ಸಿ. ಯತಿರಾಜು

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು–೫೬೦೦೦೨

MEGHANADA SAHA—Written by C. Yathiraju
and Published by Karnataka Sahitya Akademy,
Nrupatunga Road, Bangalore-560002.

First Publication 1994   Pages : viii+80

ಮೊದಲನೇ ಮುದ್ರಣ ೧೯೯೪

ನೆರವು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ಮೂರು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು–೫೬೦ ೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದ್ದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ-ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು

ಒಪ್ಪುವುದಿಲ್ಲ ; ಅಮಾನವೀಯತೆಯನ್ನು ಘೋಷಿಸುವುದಿಲ್ಲ. ಅದರ ಆದ್ಯತೆಗಳಲ್ಲಿ ಅಂತರವಿರಬಹುದು ; ಚಿಂತನೆಯಲ್ಲಿ ವೈರುಧ್ಯಗಳಿರಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯುವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕ ಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪
ಬೆಂಗಳೂರು

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ಸಿ. ಯತಿರಾಜು

ಮೇಘನಾದ ಸಹಾ

ಅಧ್ಯಾಯ ೧

ಕಾಡ ಕುಸುಮ

ಅಂದು ಶಾಲೆಯಲ್ಲಿ ಸಂಭ್ರಮವೋ ಸಂಭ್ರಮ. ಎಲ್ಲಾ ಹುಡುಗರು ವಿದ್ಯಾರ್ಥಿದೇವತೆ "ಸರಸ್ವತಿ"ಯನ್ನು ಆರಾಧಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಎಲ್ಲಾ ಹುಡುಗರಲ್ಲಿ ಎಲ್ಲಿಲ್ಲದ ಉತ್ಸಾಹ. ಆ ಗುಂಪಿನಲ್ಲಿ ಒರಟು ಒರಟಾಗಿ ಕಾಣುತ್ತಿದ್ದ ಹಳ್ಳಿಯ ಹುಡುಗನೂ ಸೇರಿದ್ದ. ನಯನಾಜೂಕಿನ ಯಾವ ಗಂಧವಿಲ್ಲದ ಕೆಳಜಾತಿಗೆ ಸೇರಿದ ಹುಡುಗನ ಉತ್ಸಾಹ, ಪೂಜಾವೇದಿಕೆ ಸಿದ್ಧಗೊಳಿಸುತ್ತಿದ್ದ ಅರ್ಚಕನಿಗೆ ಸ್ವಲ್ಪವೂ ಹಿಡಿಸಲಿಲ್ಲ. ಆ ಅರ್ಚಕ ಈ ಹಳ್ಳಿಯ ಒಡ್ಡ ಹುಡುಗನನ್ನು ಜಾತಿಯ ಹೆಸರು ಹಿಡಿದು ಹೀಯಾಳಿಸಿ ಕೆಳಗಿಳಿಯುವಂತೆ ಮಾಡಿದ. "ನಿನ್ನಂತಹ ಹೀನ ಜಾತಿಯವರು ವಿದ್ಯಾಧಿದೇವತೆಯನ್ನು ಪೂಜಿಸುವುದೆಂದರೇನು ? ಇಳಿ ಕೆಳಗೆ" ಎಂದು ಗದರಿಸಿದ. ಆ ಬಡ ವಿದ್ಯಾರ್ಥಿಗೆ ಸರಸ್ವತಿದೇವಿಯ ಧಾರಾಳ ಕೃಪೆಯಿದ್ದರೂ ಮೇಲ್ಜಾತಿಯಲ್ಲಿ ಹುಟ್ಟಿದ ಜನರ ಕೃಪೆಯಿರಲಿಲ್ಲ ಎಂಬುದೇ ಒಂದು ದೊಡ್ಡ ಶಾಪವಾಗಿತ್ತು. ಆತ ಅತ್ಯಂತ ಪ್ರತಿಭಾನ್ವಿತನಾಗಿದ್ದರೂ ಕೆಳಜಾತಿಯಲ್ಲಿ

ಹುಟ್ಟಿದ ತಪ್ಪಿಗಾಗಿ ಈ ಅವಮಾನವನ್ನನುಭವಿಸಿ ನೊಂದು ಕೆಳಗಿಳಿದ. ಮುಂದೆಂದೂ ದೇವತೆಗಳನ್ನು ಪೂಜಿಸುವ ಉಸಾಬರಿಯೇ ತನಗೆ ಬೇಡವೆಂದು ಜೀವನಪರ್ಯಂತ ಅಂತಹ ಅರ್ಥಹೀನ ಕಳಪೆಗೊಡ್ಡು ಆಚರಣೆಯಿಂದ ತನ್ನನ್ನು ದೂರವಿಟ್ಟುಕೊಳ್ಳಲು ತೀರ್ಮಾನಿಸಿದ. ವಿಚಾರವಾದಿಯಾಗಿ ಎಲ್ಲಾ ಮತೀಯ ಮೂಢಆಚರಣೆಗಳನ್ನು ಧಿಕ್ಕರಿಸಿ ಜನ ನಾಸ್ತಿಕನೆಂದು ಜರಿದರೂ ಜಗ್ಗದೆ ತನ್ನ ತಂದೆ ತಾಯಿ ತೀರಿಕೊಂಡಾಗಲೂ ಸಹಾ ಸಾಂಪ್ರದಾಯಿಕ ಆಚರಣೆಗಳನ್ನು ಮಾಡದೆ ಕೆಲ ಬಡವರಿಗೆ ಊಟ ಹಾಕಿ ವಿನೂತನ ರೀತಿಯಲ್ಲಿ ತನ್ನ ತಂದೆ ತಾಯಿಗೆ ಶ್ರದ್ಧಾಂಜಲಿ ಅರ್ಪಿಸಿದ. ಇಂತಹ ವಿಚಿತ್ರ ನಡತೆಯನ್ನು ತೋರಿದ ಬಾಲಕ ಮತ್ತಾರು ಅಲ್ಲದೇ ಮುಂದೆ ಜಗದ್ವಿಖ್ಯಾತಿಯನ್ನು ಪಡೆದ ಅತ್ಯಂತ ಪ್ರತಿಭಾಸ್ವಿತ ವಿಜ್ಞಾನಿ "ಮೇಘನಾದ ಸಹಾ".

ಮೇಘನಾದ ಸಹಾ ಹುಟ್ಟಿದ್ದು ಈಗಿನ ಬಾಂಗ್ಲಾದೇಶದ ರಾಜಧಾನಿಯಾದ ಢಾಕಾನಿಂದ ೪೫ ಕಿ.ಮೀ. ದೂರದಲ್ಲಿರುವ ಸಿಓಯೋರ್‌ತಲಿ ಎಂಬ ಹಳ್ಳಿಯಲ್ಲಿ. ಕುಟುಂಬಯೋಜನೆಯ ಗಾಳಿಯೇ ಬೀಸದಿದ್ದ ಆ ಕಾಲದ ಹಳ್ಳಿಯ ಬಡ ಕಿರಾಣಿ ವ್ಯಾಪಾರಿಯ ದೊಡ್ಡ ಕುಟುಂಬದ ಐದನೆಯ ಮಗನಾಗಿ ಸಹಾ ೧೮೯೩ರ ಅಕ್ಟೋಬರ್ ೬ ರಂದು ಹುಟ್ಟಿದರು. ಇವರು ಹುಟ್ಟುವ ದಿನ ವಿಪರೀತ ಮಳೆ ಗಾಳಿ. ಇದರಿಂದಾಗಿ ಬಡವ್ಯಾಪಾರಿಯ ಮನೆಯ ಛಾವಣಿ ಗಾಳಿಯಲ್ಲಿ ಹಾರಿ ಹೋಗಿ ಎಳೆಯ ಮಗು ತನ್ನ ತಾಯಿಯ ಮಮತೆಯ ಎದೆಯಲ್ಲೇ ಆಶ್ರಯ ಪಡೆಯಬೇಕಾಯಿತು. ಇದರಿಂದಾಗಿ ಈ ಬಾಲಕನಿಗೆ ಅಜ್ಜಿ "ಮೇಘನಾದಾ" ಎಂದು ಹೆಸರಿಟ್ಟರು. ಸಹಾ ಎಂಬುದು ಅವರ ಹುಟ್ಟಿನೊಂದಿಗೆ ಅವರಿಗೆ ಅನಿವಾರ್ಯವಾಗಿ ಅಂಟಿದ ಜಾತಿ ಸೂಚಕ ಪದ. ವ್ಯವಸಾಯ ವ್ಯಾಪಾರ ಮತ್ತು ಹೀತೋಪಕರಣದಿಂದ ಹಿಡಿದು ಹೆಂಡ ತಯಾರು ಮಾಡುವವರೆಗಿನ ಕೀಳ್ದರ್ಜೆಯ ಕೆಲಸಗಳೆಂದು ಪರಿಗಣಿಸಲ್ಪಟ್ಟ ಕೆಲಸಗಳನ್ನು ಈ ಜಾತಿಯ ಜನ ಮಾಡುತ್ತಿದ್ದರು. ಈ

ಜಾತಿಗೆ ಸೇರಿದ ಮೇಘನಾದರ ತಂದೆ ಜಗನ್ನಾಥ, ಆ ಊರಿನ ಬಲಿಯಾದ ಮಾರುಕಟ್ಟೆ ಪ್ರದೇಶದಲ್ಲಿ ಒಂದು ಕಿರಾಣಿ ಅಂಗಡಿಯನ್ನಿಟ್ಟು ಅದರಿಂದ ಕಷ್ಟಪಟ್ಟು ೮ ಜನರ ಕುಟುಂಬವನ್ನು ಸಾಕಬೇಕಾಗಿತ್ತು.

ಕಡುಬಡತನದ ಉರಿಯಲ್ಲಿ ಸುಟ್ಟು ಸುಣ್ಣವಾಗಿದ್ದ ಜಗನ್ನಾಥನಿಗೆ ತನ್ನ ಮಕ್ಕಳನ್ನು ಓದಿಸಿ ವಿದ್ಯಾವಂತರನ್ನಾಗಿ ಮಾಡಬೇಕೆಂದು ತೋರಲೇ ಇಲ್ಲ. ಇದಕ್ಕೆ ಕಾರಣವೂ ಇತ್ತು. ಇವನ ಅಣ್ಣ ಜಯನಾಥ ಶಾಲೆ ಕಲಿಯಲು ಹೋಗಿ ಫೇಲಾಗಿ ಹಿಂದಿರುಗಿದ್ದ. ಈ ಕಾರಣದಿಂದ ಜಗನಾಥ ತನ್ನ ಮಕ್ಕಳಿಗೆ ಓದು ಒಂದು ಹೊರೆಯೆಂದು ಭಾವಿಸಿ ಯಾವ ಮಕ್ಕಳನ್ನೂ ಶಾಲೆಗೆ ಕಳುಹಿಸದೇ ತನ್ನ ವೃತ್ತಿಯಲ್ಲಿ ಸಹಾಯಕರನ್ನಾಗಿ ನೇಮಿಸಿಕೊಳ್ಳುತ್ತಿದ್ದ. ಅದೇ ರೀತಿ ಮೇಘನಾದನನ್ನು ತನ್ನ ಕಿರಾಣಿ ಅಂಗಡಿಯಲ್ಲಿ ಕೆಲಸಕ್ಕೆ ಹಚ್ಚಿ ವಂಶಪಾರಂಪರ್ಯ ಕೆಲಸದಲ್ಲಿ ತರಬೇತಿ ನೀಡಲು ತೀರ್ಮಾನಿಸಿದ್ದ. ಆದರೆ ಅವನ ಅಣ್ಣಂದಿರ ಒತ್ತಾಯಕ್ಕೆ ಮಣಿದು ೭ ವರ್ಷದ ಬಾಲಕ ಮೇಘನಾದನನ್ನು ಹಳ್ಳಿಯ ಪ್ರಾಥಮಿಕ ಶಾಲೆಗೆ ಕಳುಹಿಸಿದ. ಆ ಹೊತ್ತಿಗಾಗಲೇ ಜಯನಾಥ ಸೆಣಬಿನ ಕಾರ್ಖಾನೆಯಲ್ಲಿ ತಿಂಗಳಿಗೆ ೨೦ ರೂಪಾಯಿ ಸಂಬಳದ ಕೆಲಸಕ್ಕೆ ಸೇರಿದ್ದ. ಇನ್ನೊಬ್ಬ ಅಣ್ಣ ತಂದೆಗೆ ಸಹಾಯಕನಾಗಿ ಅಂಗಡಿಯಲ್ಲಿ ದುಡಿಯುತ್ತಿದ್ದುದರಿಂದ ಮೇಘನಾದನನ್ನು ಶಾಲೆಗೆ ಕಳುಹಿಸಲು ಸಾಧ್ಯವಾಯಿತು.

ಚಿಕ್ಕವಯಸ್ಸಿನಿಂದಲೇ ಮೇಘನಾದ ಅತ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿ ಎಲ್ಲರ ಗಮನವನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಿದ್ದ. ಅತ್ಯಂತ ಪ್ರತಿಭಾನ್ವಿತನಾಗಿ ಓದುವುದರಲ್ಲಿ ಅತ್ಯಂತ ಹೆಚ್ಚಿನ ಶ್ರದ್ಧೆ ಮತ್ತು ಆಸಕ್ತಿ ಇದ್ದರೂ ಮನೆಯಲ್ಲಿ ಅದಕ್ಕೆ ಪೂರಕವಾದ ವಾತಾವರಣವಿರಲಿಲ್ಲ. ಮೇಘನಾದನಿಗಾದರೋ ಪುಸ್ತಕ ಬಿಟ್ಟು ಬೇರಾವುದರಲ್ಲೂ ಆಸಕ್ತಿಯಿರಲಿಲ್ಲ. ಅದಕ್ಕಾಗಿ ಅವನು ಯಾವ ಕಷ್ಟಕ್ಕಾದರೂ ತನ್ನನ್ನು ಒಡ್ಡಿಕೊಳ್ಳಲು ಸಿದ್ಧನಾಗಿರುತ್ತಿದ್ದ. ತನಗೆ ಓದಲು ಸೌಕರ್ಯ ಸಿಗದಿದ್ದಾಗ

ರಷ್ಟೆ ಹಿಡಿಯುತ್ತಿದ್ದ. ಆದ್ದರಿಂದ ಅವರ ಮನೆಯಲ್ಲಿ ಇವನನ್ನು "ಖಾನ್‌ಮನಾ" – "ಕರುಚೋಪಾತ" ಎಂದೇ ಕರೆಯುತ್ತಿದ್ದರು. ಕೆಲವೊಮ್ಮೆ ಮೇಘನಾದನ ಓದು ಅವನ ತಂದೆಯ ಸಿಟ್ಟಿಯನ್ನು ಕಡಿಸಿದರೆ ಅವನಿಗೆ ಬೆತ್ತಸೇವೆ ನಡೆಯುತ್ತಿತ್ತು. ಸಿಯೋರ್‌ತಲಿ, ಬಾಸ್‌ಸಾಯ್ ನದಿಯ ದಂಡೆಯಲ್ಲಿದ್ದುದರಿಂದ ಅದರ ಪ್ರವಾಹ ಹೊಲಗದ್ದೆಗಳಲ್ಲೇ ಅಲ್ಲದೆ ಮನೆಗಳಲ್ಲೂ ಆವರಿಸುತ್ತಿತ್ತು. ಪ್ರತಿಯೊಂದು ಮನೆಯವರು ದೋಣಿಯನ್ನು ಹೊಂದಿರುವುದು ಅಲ್ಲಿ ಸಾಮಾನ್ಯ ಸಂಗತಿಯಾಗಿತ್ತು. ಇದರಿಂದಾಗಿ ಮೇಘನಾದನಿಗೆ ಬಾಲ್ಯದಿಂದಲೇ ದೋಣಿ ನಡೆಸುವ ಹಾಗೂ ಈಜುವ ಕಲೆ ಲೀಲಾಜಾಲವಾಗಿ ಸ್ವಾಭಾವಿಕವಾಗೇ ಕರಗತವಾಯಿತು. ಈ ಪ್ರವಾಹಗಳು ಜನರಿಗೆ ಉಂಟುಮಾಡುತ್ತಿದ್ದ ತೊಂದರೆ ತಾಪತ್ರಯಗಳು ಎಳೆಯ ಹುಡುಗನ ಮನಸ್ಸಿನ ಮೇಲೆ ತುಂಬಾ ಪರಿಣಾಮವನ್ನುಂಟು ಮಾಡಿದವು. ಆದ್ದರಿಂದ ಮುಂದೆ ಈತ ದೊಡ್ಡ ವಿಜ್ಞಾನಿಯಾದಾಗ, ವಿಜ್ಞಾನ ತಂತ್ರಜ್ಞಾನ ಬಳಸಿ ಇಂತಹ ಕಷ್ಟಗಳನ್ನು ಕಡಿಮೆ ಮಾಡಲು ಪ್ರಯತ್ನಿಸಿದ.

ಕಲಿಕೆಯಲ್ಲಿ ಮೇಘನಾದ ತೋರಿಸುತ್ತಿದ್ದ ಶ್ರದ್ಧೆ, ಆಸಕ್ತಿ ಮತ್ತು ಏಕಾಗ್ರತೆ ತನ್ನ ಸಹಪಾಠಿಗಳ ಗಮನವನ್ನಲ್ಲದೆ ಉಪಾಧ್ಯಾಯರ ಗಮನವನ್ನೂ ಸೆಳೆಯುತ್ತಿತ್ತು. ಬೆಳೆಯುವ ಪೈರು ಮೊಳಕೆಯಲ್ಲಿ ಎಂಬ ನಾಣ್ಣುಡಿಯಂತೆ ಉಪಾಧ್ಯಾಯರು ತುಂಬಾ ಸ್ವಾಭಾವಿಕವಾಗಿ ಅಸಾಧಾರಣ ವೈಜ್ಞಾನಿಕ ಪ್ರತಿಭೆ ಅರಳುತ್ತಿರುವುದನ್ನು ಈ ಬಾಲಕನಲ್ಲಿ ಕಂಡರು. ಇವನ ನೆಚ್ಚಿನ ಉಪಾಧ್ಯಾಯರಾದ ಶಶಿಭೂಷಣ್ ಚಕ್ರವರ್ತಿ ಮತ್ತು ಜತಿನ್ ಚಕ್ರವರ್ತಿ ಅವನನ್ನೇ ನೇರವಾಗಿ ಪ್ರೋತ್ಸಾಹಿಸಿದ್ದೇ ಅಲ್ಲದೆ ಮನೆಗೂ ಹೋಗಿ ಅವನ ತಂದೆ ಜಗನ್ನಾಥ, ತಾಯಿ ಭುವನೇಶ್ವರಿ ಹಾಗೂ ಅಣ್ಣ ಸಾಯಿನಾಥರನ್ನು ಕಂಡು ಹುಡುಗನ ಓದನ್ನು ಮುಂದುವರಿಸಲು ಸತತ ಒತ್ತಾಯ ಮಾಡುತ್ತಿದ್ದರು. ಬಹುಶಃ ಇದು

ಒತ್ತಾಯವಿಲ್ಲದಿದ್ದರೆ ಮೇಘನಾದ ಒಂದು ಕಾಡು ಹೂವಾಗಿ ಹಳ್ಳಿಯಲ್ಲಿ ಅರಳಿ ಬಾಡಿ ಹೋಗಬಹುದಿತ್ತು. ಜಯನಾಥನಿಗೆ ತಾನು ಓದಲಾಗದಿದ್ದ ಕೊರತೆಯನ್ನು ತನ್ನ ತಮ್ಮನ ಓದಿನಲ್ಲಿ ತುಂಬಿಕೊಳ್ಳಲು ತೀರ್ಮಾನಿಸಿದ. ತಾನು ಓದಲಾಗದಿದ್ದರೂ ತನ್ನ ತಮ್ಮನನ್ನು ಓದಿಸಲೇಬೇಕೆಂಬ ಹಠ. ಇದಕ್ಕಾಗಿ ತಂದೆಯ ಜೊತೆ ಮಾತನಾಡಿ ತಮ್ಮನ ಓದಿಗೆ ವ್ಯವಸ್ಥೆ ಮಾಡಲು ತುಂಬಾ ಹೆಣಗಾಡಿದ.

ಶಿಯೋರ್‌ತಲಿಯಲ್ಲಿ ಇದ್ದದ್ದು ಪ್ರಾಥಮಿಕ ಶಾಲೆ ಮಾತ್ರ. ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಣವನ್ನು ಮುಂದುವರಿಸಬೇಕೆಂದರೆ ೧೦ ಕಿ.ಮೀ. ದೂರದಲ್ಲಿದ್ದ 'ಸಿಮುಲಿ' ಎಂಬ ಹಳ್ಳಿಗೆ ಹೋಗಬೇಕಾಗಿತ್ತು. ಅಲ್ಲಿ ಯಾರ ಮನೆಯಲ್ಲಾದರೂ ಇದ್ದರೆ ಮಾತ್ರ ಓದನ್ನು ಮುಂದುವರಿಸಬಹುದಿತ್ತು. ಆಗ ಮೇಘನಾದನ ಓದಿನ ಸಹಾಯಕ್ಕೆ ಬಂದವರು ಸ್ಥಳೀಯ ವೈದ್ಯರಾದ ಅನಂತಕುಮಾರ್‌ದಾಸ್‌ರವರು. ಜಯನಾಥ ತನ್ನ ತಮ್ಮನ ಓದಿಗಾಗಿ ಈ ವೈದ್ಯರನ್ನು ಕೇಳಿಕೊಂಡ. ಅತ್ಯಂತ ದಯಾಳುವೂ ವಿದ್ಯಾಪ್ರೋತ್ಸಾಹಕರೂ ಆಗಿದ್ದ ದಾಸ್‌ರವರು ಮೇಘನಾದನನ್ನು ಉಚಿತವಾಗಿ ತಮ್ಮ ಮನೆಯಲ್ಲಿಟ್ಟುಕೊಂಡು ಓದಲು ಅವಕಾಶ ಕಲ್ಪಿಸಿದರು. ದಾಸ್‌ರವರು ದಯಾಳುಗಳಾಗಿದ್ದರೂ ಆಗ ಪ್ರಚಲಿದ್ದ ಜಾತಿ ಕಟ್ಟುಪಾಡುಗಳಿಂದ ಹೊರತಾಗಿರಲಿಲ್ಲ. ಇಲ್ಲಿಯೂ ಜಾತಿಯ ಭೂತ ಮೇಘನಾದನನ್ನು ಕಾಡದೇ ಬಿಡಲಿಲ್ಲ. ಪುಟ್ಟಬಾಲಕ ಮೇಘನಾದ ತನ್ನ ಪಾತ್ರೆಗಳನ್ನು ತಾನೇ ತೊಳೆದುಕೊಳ್ಳಬೇಕಾಗಿತ್ತು. ಮನೆಯ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡು ದನಕರುಗಳನ್ನು ಆಗಾಗ್ಗೆ ಮೇಯಿಸಿ ಕೊಂಡು ಓದನ್ನು ಮುಂದುವರಿಸಬೇಕಾಗಿತ್ತು. ಓದಲೇಬೇಕೆಂದು ದೃಢ ನಿಶ್ಚಯ ಮಾಡಿಕೊಂಡಿದ್ದ ಮೇಘನಾದನಿಗೆ ಇದಾವೂ ಕಷ್ಟಗಳಾಗಿ ಕಾಡಲೇ ಇಲ್ಲ. ಆತ ಪ್ರತಿವಾರವು ತಪ್ಪದೆ ಮನೆಗೆ ನಡೆದೇ ಹೋಗುತ್ತಿದ್ದ. ಪ್ರವಾಹ ಬಂದಾಗ ದೋಣಿ ನಡೆಸಿಕೊಂಡು ಹೋಗಿ ಬರುತ್ತಿದ್ದ. ಮೇಘನಾದನ ಓದಿನ ಆಸಕ್ತಿಯನ್ನು ಗಣಿತಶಾಸ್ತ್ರದ

ಕಡೆ ತಿರುಗಿಸಿದವರು ಅವನ ಮಾಧ್ಯಮಿಕ ಶಾಲೆಯ ಉಪಾಧ್ಯಾಯರಾದ ಪ್ರಸನ್ನಕುಮಾರ್ ಚಕ್ರವರ್ತಿಯವರು. ಈ ತಿರುವಿನಿಂದಾಗ ಆತ ಮುಂದೆ ಗಣಿತಶಾಸ್ತ್ರದಲ್ಲಿ ಬಿಎಸ್ಸಿ, ಮತ್ತು ಎಂಎಸ್ಸಿ ಪದವಿ ಪಡೆಯುವುದು ಸಾಧ್ಯವಾಯಿತು. ಈ ನೆಚ್ಚಿನ ಗುರು, ಅಣ್ಣ ಜಯನಾಥ ಮತ್ತು ಆಶ್ರಯದಾತ ಎ.ಕೆ. ದಾಸ್‌ರ ಒತ್ತಾಸೆಯಿಂದ ಇಡೀ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸುವುದರೊಂದಿಗೆ ಮೇಘನಾದ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಪೂರೈಸಿದ. ಈ ಯಶಸ್ಸು ಅವನ ಜೀವನದ ದಿಕ್ಕನ್ನೇ ಬದಲಿಸಿತು.

ಈ ಸಾಧನೆಯಿಂದಾಗಿ ಮೇಘನಾದ ತನ್ನ ಓದನ್ನು ಮುಂದುವರಿಸಲು ಢಾಕಾಕ್ಕೆ ಬರಲು ಸಾಧ್ಯವಾಯಿತು. ಈತನಿಗೆ ತಿಂಗಳಿಗೆ ೪ ರೂ. ವಿದ್ಯಾರ್ಥಿವೇತನ ದೊರೆಯಿತು. ಪೂರ್ವ ಬಯಸ್ ಸಮಿತಿ ತಿಂಗಳಿ ೨ ರೂ. ನೀಡುತ್ತಿತ್ತು. ಅಣ್ಣ ತನ್ನ ಕಡಿಮೆ ಸಂಬಳದಲ್ಲೂ ತಮ್ಮನ ಓದಿಗಾಗಿ ಪ್ರತಿ ತಿಂಗಳೂ ೫ ರೂವನ್ನು ಉಳಿಸಿ ಕಳುಹಿಸುತ್ತಿದ್ದ. ಈ ಹನ್ನೊಂದು ರೂಪಾಯಿಗಳಲ್ಲೇ ಊಟ ವಸತಿ ನಿರ್ವಹಣೆ ಮಾಡಿಕೊಂಡು ಢಾಕಾದ ಕೊಲಿಜಿಯೇಟ್ ಶಾಲೆಯಲ್ಲಿ ಓದನ್ನು ಮುಂದುವರಿಸಿದ.

೧೯೦೫ರಲ್ಲಿ ಮೇಘನಾದ ಸಹಾ ತನ್ನ ಓದನ್ನು ಮುಂದುವರಿಸುವ ಮಹಾತ್ವಾಕಾಂಕ್ಷೆಯೊಂದಿಗೆ ಢಾಕಾಕ್ಕೆ ಬಂದಾಗ ವಿಚಿತ್ರ ಹಾಗೂ ವಿನೂತನ ಪರಿಸ್ಥಿತಿಯನ್ನೆದುರಿಸಬೇಕಾಯಿತು. ಹಳ್ಳಿಯ ಒರಟು ಬಾಲಕನಿಗೆ ಪೇಟೆ ಪಟ್ಟಣದ ನಯ ನಾಜೂಕು ಥಳುಕು ಬಳಕುಗಳು ಅತ್ಯಂತ ಹೊಸದು. ಕಾಲಿಗೆ ಚಪ್ಪಲಿಯನ್ನೂ ಸಹಾ ಕಾಣದ ಬಾಲಕ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳಲು ಹೆಣಗಾಡಬೇಕಾಯಿತು. ಅದೇ ಸಂದರ್ಭದಲ್ಲಿ ಬಂಗಾಳದಲ್ಲಿ ವಿಶೇಷ ರಾಜಕೀಯ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ಲಾರ್ಡ್ ಕರ್ಜನ್ ಬಂಗಾಳ ವಿಭಜನೆ ಮಾಡಿದ್ದ. ಬ್ರಿಟಿಷರ ಈ ಕುತಂತ್ರದ ವಿರುದ್ಧ ಬಂಗಾಳ ಮಾತ್ರವಲ್ಲದೇ ಇಡೀ ದೇಶ

ಸೆಟೆದು ನಿಂತಿತ್ತು. ಎಲ್ಲೆಲ್ಲೂ ವಿದೇಶೀ ವಸ್ತುಗಳ ಬಹಿಷ್ಕಾರ ಮತ್ತು ದಹನ ನಡೆಯುತ್ತಿತ್ತು. ವಿದ್ಯಾರ್ಥಿಗಳು, ಯುವ ಜನರು, ಬೀದಿಗಿಳಿದು ತಮ್ಮ ಜೀವವನ್ನು ಪಣಕ್ಕಿಟ್ಟು ಹೋರಾಟ ಮಾಡುತ್ತಿದ್ದರು. ಹಳ್ಳಿಯಿಂದ ಆಗ ತಾನೆ ಬಂದ ಮುಗ್ಧ ಬಾಲಕನನ್ನು ಇಂತಹ ರಾಜಕೀಯ ಬಿರುಗಾಳಿ ಘಾಕಾದಲ್ಲಿ ಸ್ವಾಗತಿಸಿತು. ಅನೇಕ ರಾಷ್ಟ್ರಪ್ರೇಮಿ ವಿದ್ಯಾರ್ಥಿಗಳಂತೆ ತಾನೂ ಇವರಲ್ಲಿ ಪಾಲ್ಗೊಳ್ಳಬೇಕೇ ಬೇಡವೆ ? ಎಂಬ ಗೊಂದಲ ಈ ಬಡ ಹುಡುಗನನ್ನು ಆಳವಾಗಿ ಕಲಕಿತು. ಚಳುವಳಿಯಲ್ಲಿ ಪಾಲ್ಗೊಂಡರೆ ಶಾಲೆಯ ಆಡಳಿತದ ಅವಕೃಪೆಗೆ ಗುರಿಯಾಗಿ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಂಚಕಾರ ಬೀಳುತ್ತಿತ್ತು. ಅದು ಜೀವನದ ಮುಖ್ಯ ಗುರಿಯನ್ನು ಈಡೇರಿಸಿಕೊಳ್ಳುವಲ್ಲಿ ಬಲವಾದ ಹಿನ್ನಡೆಯಾಗುತ್ತಿತ್ತು. ಇಂತಹ ಪರಿಸ್ಥಿತಿಗೆ ತಲುಪಲು ಅವನ ಮನಸ್ಸು ಒಪ್ಪುತ್ತಿರಲಿಲ್ಲ. ಹೇಗಾದರೂ ಮಾಡಿ ಉನ್ನತ ಶಿಕ್ಷಣ ಪಡೆದು ಜೀವನದಲ್ಲಿ ಮೇಲೆ ಬರಬೇಕೆಂಬ ಅದಮ್ಯ ಆಸೆ. ಅದಕ್ಕಾಗಿ ಅವನು ಏನೆಲ್ಲಾ ಕಷ್ಟ ನಷ್ಟಗಳನ್ನೆದುರಿಸಲು ಸದಾ ಸಿದ್ಧನಾಗಿರುತ್ತಿದ್ದ. ಅದೇ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಜ್ಞೆ ಜಾಗೃತಗೊಂಡು ತನ್ನ ಪರಿಸ್ಥಿತಿಯನ್ನು ಮರೆತು ಸ್ವಾತಂತ್ರ್ಯ ಹೋರಾಟದಲ್ಲೆ ಇತರ ಅನೇಕ ವಿದ್ಯಾರ್ಥಿಗಳಂತೆ ತಾನೂ ಪಾಲ್ಗೊಳ್ಳಬೇಕೆಂಬ ಹಂಬಲ. ಇವೆರಡರ ನಡುವಿನ ತೊಳಲಾಟದಲ್ಲಿ ಮತ್ತೊಂದು ಬರಸಿಡಿಲು ಮೇಘನಾದರನ್ನು ಬಂದೆರಗಿತು.

ಬಂಗಾಳದ ರಾಜ್ಯಪಾಲ ಸರ್ ಬ್ಯಾಂಫೀಲ್ಡ್ ಫುಲ್ಲರ್ ಶಾಲೆಗೆ ಅತಿಥಿಗಳಾಗಿ ಬರುವ ಕಾರ್ಯಕ್ರಮವಿತ್ತು. ಇವರನ್ನು ಸ್ವಾಗತಿಸಲು ಒಂದು ಕಡೆ ಸಿದ್ಧತೆಗಳಾಗುತ್ತಿದ್ದರೆ, ಮತ್ತೊಂದು ಕಡೆ ಅವರ ಭೇಟಿಗೆ ಪ್ರತಿಭಟನೆ ಸೂಚಿಸಲು ಒಂದು ವಿದ್ಯಾರ್ಥಿಗಳ ಗುಂಪು ಸಿದ್ಧತೆ ನಡೆಸಿತ್ತು. ಈ ಎರಡೂ ಕೆಲಸಗಳು ಆಯಾ ಗುಂಪುಗಳ ಇಚ್ಛೆಯಂತೆ ನಡೆದವು. ರಾಜ್ಯಪಾಲರ ಸ್ವಾಗತದೊಡನೆ ವಿದ್ಯಾರ್ಥಿಗಳ ಪ್ರತಿ

ಘಟನೆಯೂ ನಡೆಯಿತು. ಇದರಲ್ಲಿ ಸಹಾ ಕೂಡಾ ಪಾಲ್ಗೊಂಡಿದ್ದರೆಂದು ಅವರನ್ನು ಶಾಲೆಯಿಂದ ಹೊರಹಾಕಲಾಯಿತೆಂದು ಕೆಲವು ಮೂಲಗಳು ತಿಳಿಸುತ್ತವೆ. ಆದರೆ ಮತ್ತು ಕೆಲವು ಮೂಲಗಳು ಸಹಾ ಅದರಲ್ಲಿ ಪಾಲ್ಗೊಳ್ಳಲಿಲ್ಲ, ಆದರೆ ಅಂದು ಅವರು ಶಾಲೆಗೆ ರಾಜ್ಯಪಾಲರನ್ನು ಸ್ವಾಗತಿಸಲು ಯೋಗ್ಯವಾದ ಬಟ್ಟೆ ಹಾಗೂ ಬೂಟುಗಳನ್ನು ಧರಿಸಿ ಬಂದಿರಲಿಲ್ಲ, ಅದನ್ನೇ ರಾಜ್ಯಪಾಲರಿಗೆ ತೋರಿದ ಅಗೌರವವೆಂದು ತೀರ್ಮಾನಿಸಿ ಸಹಾ ಅವರನ್ನು ಇತರ ವಿದ್ಯಾರ್ಥಿಗಳೊಂದಿಗೆ ಶಿಕ್ಷಿಸಲಾಯಿತು ಎಂದು ಬೇರೊಂದು ಮೂಲ ತಿಳಿಸುತ್ತದೆ. ಅದು ಹೇಗಾದರೂ ಸಹಾ ಅವರ ಓದಿಗೆ ಇದರಿಂದ ಪೆಟ್ಟು ಬಿದ್ದುದ್ದೇ ಅಲ್ಲದೆ ವಿದ್ಯಾರ್ಥಿ ವೇತನವನ್ನೂ ಕಳೆದುಕೊಳ್ಳಬೇಕಾಯಿತು.

ಹುಟ್ಟಿನೊಂದಿಗೆ ಗುಡುಗು, ಮಿಂಚು, ಮಳೆಯನ್ನೆದುರಿಸಿ ಬದುಕುಳಿದ ಈ ಬಾಲಕ ಜೀವನದಲ್ಲಿ ತನ್ನ ಗುರಿಯನ್ನು ತಲುಪಲು ಎಂತಹ ಹೋರಾಟಕ್ಕಾದರೂ ಸಿದ್ಧನಿದ್ದ. ತನ್ನ ಓದನ್ನು ಮುಂದುವರಿಸಲು ಢಾಕಾದಲ್ಲಿದ್ದ "ಕಿಶೋರಿಲಾಲ್ ಜ್ಯುಬಿಲಿ ಶಾಲೆ"ಯನ್ನು ಸಂಪರ್ಕಿಸಿದ. ಹಳ್ಳಿಯ ಹುಡುಗನ ಪ್ರತಿಭೆಯನ್ನು ಗುರ್ತಿಸಿದ ಈ ಶಾಲೆಯನ್ನು ಆಡಳಿತ ಮಂಡಳಿ ಅದೇ ಸೌಲಭ್ಯಗಳನ್ನಿತ್ತು ಓದನ್ನು ಮುಂದುವರಿಸಲು ಸಹಾಯ ಮಾಡಿತು. ಆದರೆ ಮುಂದೊಂದು ದಿನ ಯಾವ ಶಾಲೆ ಸಹಾ ಅವರ ನಡತೆ ಸರಿಯಿಲ್ಲವೆಂದು ಅವರನ್ನು ಹೊರಹಾಕಿತ್ತೋ ಅದೇ ಶಾಲೆ ಅವರನ್ನೇ ಸ್ವಾಗತಿಸಬೇಕಾಯಿತು.

ಕೇವಲ ಹನ್ನೊಂದು ರೂಪಾಯಿಗಳಲ್ಲಿ ಸಹಾ ತನ್ನೆಲ್ಲಾ ಖರ್ಚುಗಳನ್ನು ನಿಭಾಯಿಸಿಕೊಂಡು ಹೋಗುತ್ತಿದ್ದರು. ಮೊದಲು ಆರ್‌ಮನಿತೋಲಾದ ಒಂದು ಮುರುಕಲು ಮನೆಯಲ್ಲಿ, ಅನಂತರ ವಕೀಲರಾದ ನಲಗೋಲರ ಮನೆಯಲ್ಲಿ ಓದನ್ನು ಮುಂದುವರಿಸಿದರು. ಬೇಸಿಗೆ ಹಾಗು 'ಪೂಜಾ' ರಜಾದಿನಗಳಲ್ಲಿ ಸಹಾ ಊರಿಗೆ ಹಿಂದಿರುಗಿ

ತನ್ನ ತಂದೆಗೆ ಹಾಗು ಅಣ್ಣತಮ್ಮಂದಿರಿಗೆ ತಮ್ಮ ಕೈಲಾದ ಸಹಾಯ ಮಾಡುತ್ತಿದ್ದರು. ಹೀಗೆ ಪಟ್ಟಣಕ್ಕೆ ಓದಿಗಾಗಿ ಬಂದವರು ಎಂದೂ ತಮ್ಮ ಹಳ್ಳಿಯನ್ನು ಮರೆಯದೇ ಆ ಜೀವನದೊಂದಿಗೆ ತಮ್ಮ ನಿಕಟ ಬಾಂಧವ್ಯವನ್ನು ಮುಂದುವರಿಸಿದರು. ವಿದ್ಯಾರ್ಥಿಯಾಗಿ ಗಣಿತ ಮತ್ತು ಇತಿಹಾಸವಲ್ಲಿ ಸಹಾರಿಗೆ ಅತಿ ಹೆಚ್ಚು ಆಸಕ್ತಿ. ರಜಪೂತರು ಮತ್ತು ಮರಾಠರ ಶೌರ್ಯ ಸಾಹಸದ ಕತೆಗಳು ಸಹಾರನ್ನು ರೋಮಾಂಚನಗೊಳಿಸುತ್ತಿದ್ದವು. ರಜಪೂತರು ಮತ್ತು ಮರಾಠರ ಶೌರ್ಯ ಸಾಹಸಗಳನ್ನು ವಿವರಿಸುವ ಟ್ಯಾಗೋರರ "ಕಥಾ ಓಕಹಾನಿ" ಅವರ ಮೆಚ್ಚಿನ ಪುಸ್ತಕವಾಗಿತ್ತು. ಮಧುಸೂದನ ದತ್ತರ "ಮೇಧನಾದ ಬಂದಾ" ಎಂಬ ಮತ್ತೊಂದು ಮಹಾಕಾವ್ಯ ಅವರನ್ನು ಆಕರ್ಷಿಸಿತ್ತು. ಹುಟ್ಟು ಹೋರಾಟಗಾರನಿಗೆ ಹೋರಾಟಗಾರರ ವೀರಕಥೆಗಳು ಮೆಚ್ಚುಗೆಯಾಗುತ್ತಿದ್ದುದು ತುಂಬಾ ಸ್ವಾಭಾವಿಕವೇ !

ಬಾಲಕ ಮೇಘನಾದನಿಗೆ ಕುರುಡು ಧಾರ್ಮಿಕ ಆಚರಣೆಗಳ ಬಗೆಗೆ ಅನಾದರವಿದ್ದರೂ ಧಾರ್ಮಿಕ ವಿಚಾರಧಾರೆಯ ಬಗೆಗೆ ಅಪಾರ ಆಸಕ್ತಿ. ಎಲ್ಲಾ ಧರ್ಮಗಳ ಮೂಲ ಮಾನವೀಯ ಮೌಲ್ಯಗಳನ್ನು ತಿಳಿದುಕೊಳ್ಳಲು ಅವರು ಯಾವುದೇ ಪ್ರಯತ್ನ ಮಾಡಲು ಸಿದ್ಧರಿದ್ದರು. ಈ ಆಸಕ್ತಿ ಅವರನ್ನು ಢಾಕಾ ಬ್ಯಾಪ್ಟಿಸ್ಟ್ ಮಿಷನ್‌ನವರು ನಡೆಸುತ್ತಿದ್ದ ಬೈಬಲ್ ತರಗತಿಗಳಿಗೆ ಹಾಜರಾಗುವಂತೆ ಮಾಡಿತು. ಈ ತರಗತಿಗಳ ಕೊನೆಯಲ್ಲಿ ನಡೆಸಿದ ಪರೀಕ್ಷೆಯಲ್ಲಿ ಕಾಲೇಜು ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಿ ಪ್ರಥಮ ಬಹುಮಾನ ಪಡೆಯುವಲ್ಲಿ ಯಶಸ್ವಿಯಾದರು. ಇಂತಹ ಬಹುಮುಖ ಆಸಕ್ತಿ ಹೊಂದಿದ್ದ ಸಹಾ ಇವೆಲ್ಲದರ ಜೊತೆಗೆ ಓದನ್ನು ಅಷ್ಟೇ ಶ್ರದ್ಧೆ ಹಾಗೂ ಆಸಕ್ತಿಯಿಂದ ಮುಂದುವರಿಸಿದರು. ಈಗಿನ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಸಮಾನವಾಗಿದ್ದ ಆಗಿನ "ಪ್ರವೇಶ" ಪರೀಕ್ಷೆಯಲ್ಲಿ ಇಡೀ ಪೂರ್ವ ಬಂಗಾಳಕ್ಕೇ ಪ್ರಥಮ

ಸ್ಥಾನಗಳಿಸಿದರು. ಗಣಿತ ಮತ್ತು ಭಾಷೆಗಳಲ್ಲಿ ಅತಿಹೆಚ್ಚಿನ ಅಂಕವನ್ನು ಗಳಿಸಿದರು.

೧೯೧೧ರಲ್ಲಿ ಸಹಾ ಇಂಟರ್‌ಮೀಡಿಯೆಟ್‌ನಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿ ಢಾಕಾ ಕಾಲೇಜನ್ನು ಸೇರಿದರು. ಢಾಕಾ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಜರ್ಮನ್ ಭಾಷೆಯನ್ನು ಪ್ರೊಫೆಸರ್ ನಾಗೇಂದ್ರನಾಥರಿಂದ ಖಾಸಗಿಯಾಗಿ ಕಲಿಯಲು ಪ್ರಾರಂಭಿಸಿದರು. ಆಗಿನ ಕಾಲದಲ್ಲಿ ವಿಜ್ಞಾನ ಪ್ರಪಂಚಕ್ಕೆ ಜರ್ಮನ್ ಭಾಷೆ ರಹದಾರಿಯೆಂದು ಭಾವಿಸಲ್ಪಟ್ಟಿತ್ತು. ವಿಜ್ಞಾನಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಬೇಕೆಂದು ಕನಸು ಕಾಣುತ್ತಿದ್ದ ಸಹಾ ಸ್ವಾಭಾವಿಕವಾಗಿ ಈ ಸಾಹಸಕ್ಕೆ ಕೈಹಾಕಿದರು. ಇಂಟರ್ ಸೈನ್ಸ್ ಪರೀಕ್ಷೆಯಲ್ಲಿ ಇವರು ವಿಶ್ವವಿದ್ಯಾಲಯಕ್ಕೆ ಮೂರನೆಯವರಾದರು. ಗಣಿತ ಮತ್ತು ರಸಾಯನ ಶಾಸ್ತ್ರದಲ್ಲಿ ಅತ್ಯಂತ ಹೆಚ್ಚು ಅಂಕ ಗಳಿಸಿದರು. ಢಾಕಾ ಕಾಲೇಜಿನಲ್ಲಿದ್ದ ಗಣಿತಜ್ಞ ಕೆ.ಪಿ. ಬಸು ಮತ್ತು ಪಿ.ಸಿ. ಸೇನ್‌ಗುಪ್ತ ಇವರ ಮೇಲೆ ತುಂಬಾ ಪ್ರಭಾವ ಬೀರಿದರು. ಪ್ರಾಂಶುಪಾಲರಾದ ಡಬ್ಲ್ಯು ಜೆ. ಆರ್ಕಿಬಾಲ್ಡರು ಕೂಡಾ ಸಹಾರ ಬಗೆಗೆ ಅಪಾರ ಪ್ರೀತಿಯನ್ನು ಹೊಂದಿದ್ದರು. ಆದುದರಿಂದಲೇ ಅವರು ಒಳ್ಳೆಯ ಮನಸ್ಸಿನಿಂದಲೇ ಈ ಪ್ರತಿಭಾನ್ವಿತ ವಿದ್ಯಾರ್ಥಿಯನ್ನು ಕಲ್ಕತ್ತಾಗೆ ಓದನ್ನು ಮುಂದುವರಿಸಲು ಕಳುಹಿಸಿದರು.

ಸಂಕಷ್ಟಗಳ ಸರಮಾಲೆಯೇ ಎದುರಾದರೂ ಸ್ವಲ್ಪವೂ ವಿಚಲಿತರಾಗದೆ, ಎದೆಗುಂದದೆ ಕಡಿವಾಣ ಧರಿಸಿದ ಕುದುರೆಯಂತೆ ಜೀವನದ ಗುರಿಯೆಡೆಗೆ ನಾಗಾಲೋಟ ನಡೆಸಿದವರು ಸಹಾ. ಇವರ ಈ ಪ್ರಯತ್ನದಲ್ಲಿ ಅವರಿಗೆ ಬೆನ್ನೆಲುಬಾಗಿ ನಿಂತವರು ಅವರ ಅಣ್ಣ ಜಯನಾಥಾ ಮತ್ತು ತಾಯಿ ಭುವನೇಶ್ವರಿ. ತಮ್ಮನ ಓದಿಗಾಗಿ ದುಡಿದು ಹಣ್ಣಾದ ಅಣ್ಣ ಮತ್ತು ಮಗನ ಓದಿಗಾಗಿ ತನ್ನ ಅಲ್ಪ ಒಡವೆಗಳನ್ನು ಅಡವಿಡಲು ಹಿಂದೆ ಮುಂದೆ ನೋಡದ ತಾಯಿ ಸಹಾರ ಜೀವನದ ಮೇಲೆ ಅತ್ಯಂತ ಗಾಢವಾದ ಪ್ರಭಾವ ಬೀರಿದರು. ಇವಲ್ಲದೆ ಆಶ್ರಯ

ನೀಡಿದ ಓದಲು ಸಹಾಯ ಮಾಡಿದ ಶಿಮಾಲಿಯ ವೈದ್ಯರು ಮತ್ತು ಶಾಲಾ ಕಾಲೇಜಿನ ಗುರುಗಳು ಈ ಪ್ರತಿಭಾನ್ವಿತ ಬಾಲಕನ ಪ್ರತಿಭೆಯನ್ನು ಶೀಘ್ರವಾಗಿ ಗುರುತಿಸಿ ಪ್ರೋತ್ಸಾಹಿಸಿದ್ದೇ ಅಲ್ಲದೆ ಅವರು ತಮ್ಮ ಬಾಲಕ ಗುರಿಯನ್ನು ತಲುಪಲು ಅಗತ್ಯವಾಗಿದ್ದ ಮಾರ್ಗದರ್ಶನ ಮಾಡಿದರು. ಇವರೆಲ್ಲರ ಹಂಬಲ ಹಾರೈಕೆ ಮತ್ತು ಸಹಕಾರದಿಂದ ಸಹಾ ತಮ್ಮ ಓದನ್ನು ಉತ್ತಮವಾಗಿ ಮುಂದುವರಿಸಲು ಸಾಧ್ಯವಾಯಿತು.

ಅಧ್ಯಾಯ ೨

ಆದರ್ಶ ಮತ್ತು ಜೀವನ

೧೯೧೧ರಲ್ಲಿ ಮೇಘನಾದ ಸಹಾ ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದು ಉತ್ತೀರ್ಣರಾದ ಮೇಲೆ ಕಲ್ಕತ್ತಾದಲ್ಲಿ "ಪ್ರೆಸಿಡೆನ್ಸಿ" ಕಾಲೇಜನ್ನು ಸೇರಿದರು. ಇವರೊಂದಿಗೆ ವಿಜ್ಞಾನದ ಪದವಿ ಪಡೆಯಲು ಕಾಲೇಜನ್ನು ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಸೇರಿದರು. ಅವರುಗಳಲ್ಲಿ ಬೋಸ್ - ಐನ್‌ಸ್ಟೈನ್ ಅಂಕಿ ಅಂಶಗಳ ಜನಕ ಸತ್ಯೇಂದ್ರನಾಥ ಬೋಸ್, ಪ್ರಬಲ ಎಲೆಕ್ಟ್ರೋಲೈಟ್‌ಗಳ ಕ್ಷೇತ್ರದಲ್ಲಿ ಅಪಾರ ಕೆಲಸ ಮಾಡಿ ಢಾಕಾ ಮತ್ತು ಬೆಂಗಳೂರುಗಳಲ್ಲಿ ಹೆಸರಾಂತ ಶಾಲೆಗಳನ್ನು ತೆರೆಯಲು ಕಾರಣರಾದ ಜೆ.ಸಿ. ಘೋಷ್, ಕಲಿಲ ರಸಾಯನ ಶಾಸ್ತ್ರದಲ್ಲಿ ಮಣ್ಣು ಮತ್ತು ಕೃಷಿ ರಸಾಯನ ಕ್ಷೇತ್ರದಲ್ಲಿ ಮುಖ್ಯ ಸಂಶೋಧನೆಗಳನ್ನು ನಡೆಸಿದ ಹೆಸರಾಂತ ಭೌತರಸಾಯನ ಶಾಸ್ತ್ರಜ್ಞ ಜೆ.ಎನ್. ಮುಖರ್ಜಿ - ಮುಂತಾದವರನ್ನು ಪ್ರಮುಖವಾಗಿ ಹೆಸರಿಸಬಹುದು. ಅತ್ಯಂತ ಪ್ರತಿಭಾನ್ವಿತ ಸಹಪಾಠಿಗಳ ಸಹಯೋಗವೇ ಅಲ್ಲದೆ ಪ್ರೆಸಿಡೆನ್ಸಿ ಕಾಲೇಜಿನ ವಾತಾವರಣವೇ ಬೌದ್ಧಿಕ ಚಟುವಟಿಕೆಗಳಿಗೆ ಪ್ರೋತ್ಸಾಹದಾಯಕ ವಾಗಿತ್ತು. ಅಂಕಿಅಂಶಗಳ ಕ್ಷೇತ್ರದ ಪಿ.ಸಿ. ಮಹಾಲನೋಬಿಸ್ ಪ್ರಸಿದ್ಧ ಭೌತ ರಸಾಯನ ಶಾಸ್ತ್ರಜ್ಞ ಎನ್.ಆರ್. ಧರ್, ಅನ್ವಯಿಕ ಗಣಿತದಲ್ಲಿ

ಹೆಸರುವಾಸಿಯಾದ ಎಸ್.ಆರ್. ಸೇನ್ ಮುಂತಾದವರು ಇದೇ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿಗಳಾಗಿ ಅಭ್ಯಾಸ ಮಾಡುತ್ತಿದ್ದರು. ಹೀಗೆ ಅತ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಗಳ ಒಂದು ದಂಡೇ ಆ ಸಂದರ್ಭದಲ್ಲಿ ಈ ಕಾಲೇಜಿನಲ್ಲಿ ಕಲಿಯುತ್ತಿದ್ದರು. ಜನ ವಿಜ್ಞಾನವನ್ನು ಬೆಳೆಸುತ್ತಾರೋ ಅಥವಾ ವಿಜ್ಞಾನವೇ ಜನರನ್ನು ಬೆಳೆಸುತ್ತದೋ ಎನ್ನುವ ಪ್ರಶ್ನೆ ಅನೇಕ ಬಾರಿ ಸಮಾಜಶಾಸ್ತ್ರಜ್ಞರನ್ನು ಕಾಡಿದೆ. ಆದರೆ ಸಹಾ ಅವರ ಜೀವನವನ್ನು ಅವಲೋಕಿಸಿದರೆ, ಇವೆರಡೂ ಪ್ರತ್ಯೇಕಿಸಲಾಗದ ಅಂಶಗಳೆಂಬುದು ಖಚಿತವಾಗುತ್ತದೆ. ಈ ಭಾರತೀಯ ವಿಜ್ಞಾನದ ಬೆಳವಣಿಗೆಯಲ್ಲಿ ಮುಂದೆ ಮಹತ್ತರ ಕೊಡುಗೆಗಳನ್ನು ನೀಡಬಲ್ಲ ವಿದ್ಯಾರ್ಥಿಗಳ ಹಿಂಡೇ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಒಗ್ಗೂಡಿದ್ದೂ ಕೇವಲ ಆಕಸ್ಮಿಕವಾದ ಘಟನೆಯೇನಲ್ಲ. ಇದನ್ನು ಅರ್ಥ ಮಾಡಿಕೊಳ್ಳಲು ನಾವು ಸ್ವಲ್ಪ ಬಂಗಾಳದ ಪುನರುಜ್ಜೀವನದ ಇತಿಹಾಸವನ್ನು ಮತ್ತು ಅದರಲ್ಲಿ ಪ್ರೆಸಿಡೆನ್ಸಿ ಕಾಲೇಜಿನ ಪಾತ್ರವನ್ನು ಗಮನಿಸುವುದು ಅತ್ಯಗತ್ಯ.

ಹಿಂದೂ ಕಾಲೇಜೆಂಬ ಹೆಸರಿನಲ್ಲಿ ಈ ಕಾಲೇಜನ್ನು ಬ್ರಿಟಿಷರ ದೃಷ್ಟಿಯಲ್ಲಿ ಭಾರತೀಯ ಸಂಸ್ಕೃತಿಯನ್ನು ಬೋಧಿಸಲು ಈಸ್ಟ್ ಇಂಡಿಯಾ ಕಂಪೆನಿ ಸ್ಥಾಪಿಸಿತು. ಆದರೆ ಬ್ರಿಟಿಷರ ಈ ಯೋಜನೆಗೆ ವಿರೋಧ ಬಂದದ್ದು ಬಂಗಾಳ ಪುನರುಜ್ಜೀವನ ಚಳುವಳಿಯ ನೇತಾರರಾಗಿದ್ದ ರಾಜಾರಾಮ ಮೋಹನರಾಯರಿಂದ. ಪಾಶ್ಚಿಮಾತ್ಯ ಪುನರುಜ್ಜೀವನ ಚಳುವಳಿಯಿಂದ ತುಂಬಾ ಪ್ರಭಾವಿತರಾಗಿದ್ದ ಇಸ್ಲಾಂ ಮತ್ತು ವೇದಗಳಲ್ಲಿ ಅಪಾರ ವಿದ್ವತ್ತನ್ನು ಪಡೆದಿದ್ದ ಮೋಹನರಾಯರು, ಬ್ರಿಟಿಷರ ಈ ಯೋಜನೆಯನ್ನು ಅತ್ಯಂತ ಬಲವಾಗಿ ವಿರೋಧಿಸಿದರು. ಭಾರತಕ್ಕೆ ಇಂದು ಅಗತ್ಯವಾಗಿರುವುದು ವೇದಗಳ ಪಠಣವಲ್ಲ, ನಮಗೆ ಇಂದು ಆಧುನಿಕ ವಿಜ್ಞಾನ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು. ಹೀಗೆ ಹಿಂದೂ ಪವಿತ್ರ ಗ್ರಂಥಗಳ ಬಗೆಗೆ ಬೋಧಿಸಲು ಪ್ರಾರಂಭಗೊಂಡ "ಹಿಂದೂ" ಕಾಲೇಜು ಶೀಘ್ರವಾಗಿ ಸುಧಾರಣಾ ಚಳುವಳಿಯ

ಕೇಂದ್ರವಾಗಿಯೂ ರೂಪುಗೊಂಡಿತು. ಯೂರೇಷ್ಯನ್ ವಿಷಯಗಳಲ್ಲಿ ಈ ಕಾಲೇಜಿನಲ್ಲಿ ಬೋಧಕರಾಗಿದ್ದ ಹೆಚ್.ಎಲ್.ವಿ. ಡೆರೋಗಿಯೋ ತಮ್ಮ ಸುತ್ತ ವಿದ್ಯಾರ್ಥಿಗಳ ಗುಂಪೊಂದನ್ನು ಕೂಡಿಹಾಕಿಕೊಂಡು ಅವನ್ನು ಪ್ರಶ್ನಿಸಲು ಪ್ರೇರೇಪಿಸಿದರು. ಹಿಂದೂ ಮತಾಂಧತೆಯನ್ನು ಪ್ರಶ್ನಿಸುವುದರ ಜೊತೆಗೆ, ಇವರು ಭಾರತ ರಾಷ್ಟ್ರಗಳ ಸಾಲಿನಲ್ಲಿ ಹೆಮ್ಮೆಯಿಂದ ಸಮಾನ ಗೌರವವನ್ನು ಪಡೆಯುವ ಕನಸನ್ನು ಹೊಂದಿದ್ದರು. ಹೀಗಾಗಿ "ಯುವ ಬಂಗಾಲ" ಎಂಬ ಹೆಸರಿನಿಂದ ಪ್ರಖ್ಯಾತವಾದ ಈ ಗುಂಪು ಮತಾಂಧರಿಗೂ ಹಾಗೂ ಬ್ರಿಟಿಷರಿಗೂ ಸಮಾನವಾಗಿ ವಿರೋಧಿಯಾಗಿತ್ತು. ಇವರು ಮತಾಂಧತೆಯನ್ನು ಪ್ರಶ್ನಿಸಿದ್ದೇ ಅಲ್ಲದೆ ಬ್ರಿಟಿಷರ ಆಳ್ವಿಕೆಯನ್ನೂ ಪ್ರಶ್ನಿಸುತ್ತಿದ್ದರು. ಹೀಗೆ "ಯುವ ಬಂಗಾಳ" ಗುಂಪು ಸಂಪ್ರದಾಯ ಪಾಲಕರ ಮೇಲೆ ಹೊರಗಿನಿಂದ ಧಾಳಿ ಮಾಡುತ್ತಿದ್ದರೆ ಬಂಗಾಳಿ ಸಮಾಜವನ್ನು ಒಳಗಿನಿಂದಲೇ ಅಲ್ಲಾಡಿಸಿದವರು ಈಶ್ವರ-ಚಂದ್ರ ವಿದ್ಯಾಸಾಗರರು. ಸ್ವತಃ ಸಂಸ್ಕೃತ ಕಾಲೇಜಿನ ಪ್ರಾಚಾರ್ಯರಾದ ಈಶ್ವರ ಚಂದ್ರರು ಕಾಲೇಜಿನ ವೇಳೆ ಮತ್ತು ಅಧ್ಯಯನ ಅವಧಿಗಳನ್ನು ಪಂಚಾಂಗದ ಆಧಾರದ ಮೇಲೆ ನಿರ್ಧರಿಸಬಾರದು, ಅದನ್ನು ಆಧುನಿಕ ವಿಜ್ಞಾನದ ತಳಹದಿಯ ಮೇಲೆ ನಿರ್ಧರಿಸಬೇಕೆಂದು ಪ್ರತಿಪಾದಿಸಿದರು. ನ್ಯಾಯ ಸಿದ್ಧಾಂತವನ್ನು ಕಾಲೇಜಿನ ಪಠ್ಯವಿಷಯದಲ್ಲಿ ಸೇರಿಸಿ ಬೋಧಿಸುವುದನ್ನು ಪ್ರಶ್ನಿಸಿದರು. ಮುಂದೆ ಇವರು ಹಿಂದೂ ವಿಧವಾ ವಿವಾಹವನ್ನು ಪ್ರತಿಪಾದಿಸಿ ಪ್ರಖ್ಯಾತರಾದರು. ಹೀಗೆ ಪ್ರಾರಂಭಗೊಂಡ ಹಿಂದೂ ಪುನರುತ್ಥಾನವಾದಿ ಚಳುವಳಿ ಸ್ವಾಮಿ ವಿವೇಕಾನಂದ, ರವೀಂದ್ರನಾಥ್ ಟಾಗೂರ್ ಮುಂತಾದವರ ಮೇಲೂ ತುಂಬಾ ಪರಿಣಾಮ ಬೀರಿತು. ಹೀಗೆ ಆ ಕಾಲದಲ್ಲಿ ಬೀಸುತ್ತಿದ್ದ ಬದಲಾವಣೆಯ ಗಾಳಿ ವೈಜ್ಞಾನಿಕ ಚಿಂತನೆಗಳು ಬೀಜಾಂಕುರಗೊಂಡು ಕುಡಿಯೊಡೆಯಲು ಸೂಕ್ತ ಪರಿಸರವನ್ನು ನಿರ್ಮಾಣಮಾಡಿದ್ದವು. ಈ ಎಲ್ಲಾ ಕಾರಣಗಳಿಗಾಗಿ "ಹಿಂದೂ"

ಕಾಲೇಜನ್ನು ಪ್ರೆಸಿಡೆನ್ಸಿ ಕಾಲೇಜನ್ನಾಗಿ ಪುನರ್ನಾಮಕರಣ ಮಾಡಲಾಯಿತು.

ಇಂತಹ ಕಾಲೇಜಿನಲ್ಲಿ ಬೋಧಿಸುತ್ತಿದ್ದ ಉಪನ್ಯಾಸಕರಿಗೂ ಒಂದು ಆಕರ್ಷಕ ಇತಿಹಾಸವಿತ್ತು. ಆ ಕಾಲಕ್ಕೇ ಲಂಡನ್ ವಿಶ್ವವಿದ್ಯಾಲಯದಿಂದ ಡಿ.ಎಸ್.ಸಿ. ಪದವಿ ಪಡೆದಿದ್ದ ಜಗದೀಶ್ ಚಂದ್ರಬೋಸರು ಈ ಕಾಲೇಜಿಗೆ ಭೌತಶಾಸ್ತ್ರದ ಉಪನ್ಯಾಸಕರಾಗಿ ಸೇರಿಕೊಂಡರು. ಇವರು ಕೆಲಸಕ್ಕೆ ಸೇರಿದಾಗ ಭಾರತೀಯರೆಂಬ ಕಾರಣದಿಂದ, ಈ ಹುದ್ದೆಗೆ ನೀಡುತ್ತಿದ್ದ ಸಂಬಳದ ಶೇ. ೭೫ ಭಾಗವನ್ನು ಮಾತ್ರ ಬಂಗಾಳ ಸರ್ಕಾರ ನೀಡಲು ಅನುಮತಿಸಿತು. ಇಂತಹ ಅಸಮಾನತೆಯ ವಿರುದ್ಧ ಪ್ರತಿಭಟಿಸಿ ಬೋಸರು ನಾಲ್ಕು ವರ್ಷಗಳ ಕಾಲ ಸಂಬಳ ಪಡೆಯದೇ ಉಚಿತವಾಗಿ ಸೇವೆ ಸಲ್ಲಿಸಿದರು. ಕೊನೆಗೆ ಈ ಭೇದ ಭಾವವನ್ನು ಕೊನೆಗಾಣಿಸಿದ ಮೇಲೆ ಅವರು ಸಂಬಳ ಪಡೆದರು. ಎಡಿನ್ ಬರೋ ವಿಶ್ವವಿದ್ಯಾಲಯದ ಡಿ.ಎಸ್.ಸಿ. ಪದವಿ ಮುಗಿಸಿ ಬಂದಿದ್ದ ರಸ ಋಷಿ ಪಿ.ಸಿ.ರೇ. ರಸಾಯನ ಶಾಸ್ತ್ರದ ವಿಭಾಗವನ್ನು ಸೇರಿಕೊಂಡರು. ಇವರು ಬೋಧನೆಯ ಜೊತೆಗೆ ಸ್ವತಂತ್ರ ಸಂಶೋಧನೆಗಳನ್ನು ಕಾಲೇಜಿನ ಪ್ರಯೋಗಾಲಯದಲ್ಲಿ ನಡೆಸಲಾರಂಭಿಸಿದರು. ಪಿ.ಸಿ.ರೆ ಮುಂದೆ ಭಾರತದಲ್ಲಿ ಔಷಧಿಗಳು ಹಾಗೂ ರಾಸಾಯನಿಕಗಳ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ತಮ್ಮನ್ನು ತೊಡಗಿಸಿಕೊಂಡು ಪ್ರಖ್ಯಾತರಾದರು. ಹೀಗೆ ಮುಂದೆ ಭಾರತೀಯ ಸಂಶೋಧನಾ ದಿಗಂತದಲ್ಲಿ ಪ್ರಾರಂಭದ ಹಾದಿಯನ್ನು ಕ್ರಮಿಸಿದ ಈ ಎರಡು ಮಹಾಚೇತನಗಳು ಅನೇಕ ಯುವವಿಜ್ಞಾನಿಗಳಿಗೆ ಸ್ಫೂರ್ತಿ ತುಂಬುವ ಕೆಲಸ ಮಾಡಿದರು. ಇವಲ್ಲದೆ ಡಿ.ಎನ್. ಮುಲ್ಲಿಖ್ ಈ ಕಾಲೇಜಿನಲ್ಲಿ ಗಣಿತಶಾಸ್ತ್ರವನ್ನು ಬೋಧಿಸುತ್ತಿದ್ದರು. ಬೋಸರು ಹೆಚ್ಚು ಅಂತರ್ಮುಖಿಗಳಾಗಿ ತಮ್ಮ ಬೋಧನೆ ಹಾಗು ಸಂಶೋಧನೆಯಲ್ಲಿ ನಿರತರಾಗಿರುತ್ತಿದ್ದರೆ ಅವಿವಾಹಿತ ಪಿ.ಸಿ.ರೇ ಕಾಲೇಜಿನ ಹಾಸ್ಟೇಲಿನಲ್ಲಿಯೇ ವಿದ್ಯಾರ್ಥಿಗಳೊಂದಾಗಿ ವಾಸಿಸಿ

ಅವರೊಂದಿಗೆ ನಿಕಟ ಬಾಂಧವ್ಯವಿಟ್ಟುಕೊಂಡು ಅವರಿಗೆ ಹೆಚ್ಚು ಆತ್ಮೀಯರಾಗಿರುತ್ತಿದ್ದರು.

ಪಿ.ಸಿ.ರೇ. ಅವರು ರಸಾಯನ ಶಾಸ್ತ್ರವನ್ನು ಬೋಧಿಸುವ ಕ್ರಮವೇ ಅತ್ಯಂತ ಆಕರ್ಷಕವಾಗಿರುತ್ತಿತ್ತು. ಅವರು ಮೂಳೆಬೂದಿಯ ಬಗೆಗೆ ಬೋಧಿಸುವಾಗ ಮೇಜಿನಮೇಲೆ ವಿವಿಧ ಮಾದರಿಯ ಮೂಳೆ ಬೂದಿಯನ್ನು ಬೇರೆ ಪಾತ್ರೆಗಳಲ್ಲಿಟ್ಟು "ಈ ಬೂದಿಗಳು ಹಸುವಿನ ಮೂಳೆಯಿಂದ ಅಥವಾ ಕುದುರೆಯಿಂದ ಅಥವಾ ಮಾನವನ ತಲೆ ಬುರುಡೆಯಿಂದ ಬಂದಿರಬಹುದು. ಆದರೆ ಇವೆಲ್ಲ ನಮಗೆ ಕೇವಲ ಒಂದು ರಾಸಾಯನಿಕ ವಸ್ತು ಮಾತ್ರ. ಅದರ ಹೆಸರು ಕ್ಯಾಲ್ಸಿಯಂ ಫಾಸ್ಫೇಟ್" ಎಂದು ಹೇಳಿ ಸ್ವಲ್ಪ ಪುಡಿಯನ್ನು ತಾವೇ ಸ್ವತಃ ಬಾಯಿಗೆ ಹಾಕಿಕೊಂಡು ಜಾಯಮಾನಿಸಿ ಅನಂತರ ವಿದ್ಯಾರ್ಥಿಗಳಿಗೂ, ಹಾಗೆ ಮಾಡಲು ಹೇಳುತ್ತಿದ್ದರು. ಆಗ ಅನೇಕ ಸಂಪ್ರದಾಯಸ್ಥ ವಿದ್ಯಾರ್ಥಿಗಳು ಅವರನ್ನು ಅನುಸರಿಸಲು ಹಿಂದೆ ಮುಂದೆ ನೋಡುತ್ತಿದ್ದರು. ಆದರೆ ಅನೇಕ ವಿದ್ಯಾರ್ಥಿಗಳು ಅವರನ್ನು ಈ ಪ್ರಯೋಗದಲ್ಲಿ ಅನುಸರಿಸು ತ್ತಿದ್ದರು. ಅನೇಕ ವಿದ್ಯಾರ್ಥಿಗಳು ಪಿ.ಸಿ.ರೇ ಯವರೊಡನೆ ಸಂಜೆಯ ವೇಳೆಯಲ್ಲಿ ತಿರುಗಾಟ ಮಾಡುವಾಗ ಸ್ವಾತಂತ್ರ್ಯ ಆಂದೋಳನದಿಂದ ಹಿಡಿದು ವಿದ್ಯಾರ್ಥಿಗಳ ವೈಯುಕ್ತಿಕ ಜೀವನಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಚರ್ಚಿಸಿ ಅವರೊಂದಿಗೆ ಆತ್ಮೀಯರಾಗುತ್ತಿದ್ದರು. ಹೀಗಾಗಿ ರೇ. ಯವರೆಂದರೆ ವಿದ್ಯಾರ್ಥಿಗಳಿಗೆ ತುಂಬಾ ಅಚ್ಚುಮೆಚ್ಚು, ಅವರು ಹೇಳಿದ ಕೆಲಸಗಳನ್ನು ಅತ್ಯಂತ ಉತ್ಸಾಹದಿಂದ ಮಾಡುತ್ತಿದ್ದರು.

ಮೇಘನಾದರು ಇಂತಹ ಕಾಲೇಜಿನಲ್ಲಿ ತಮ್ಮ ಬಿ.ಎಸ್.ಸಿ. ಪದವಿಯನ್ನು ಕಲಿಯಲು ಪ್ರಾರಂಭಿಸಿದಾಗ ತಮ್ಮೆಲ್ಲಾ ತೊಂದರೆಗಳಿಂದ ಮುಕ್ತರಾಗೇನಿರಲಿಲ್ಲ. ಬಡತನ ಮತ್ತು ಜಾತೀಯತೆ ಅವರನ್ನು ಬೆಂಬಿಡದ ಇಲ್ಲಿಯೂ ಕಾಡಿದವು. ಕಾಲೇಜಿನಲ್ಲಿ ಗಣಿತಶಾಸ್ತ್ರದಲ್ಲಿ ಪದವಿ ಪಡೆಯಲು ಕಾಲೇಜು ಸೇರಿದ ಸಹಾ "ಏಡನ್ ಹಿಂದೂ ಹಾಸ್ಟೆಲನ್ನು"

ಸೇರಿದರು. ಇವರ ಜಾತಿಯನ್ನು ಪತ್ತೆ ಹಚ್ಚಿದ ಅನೇಕ ಹಿಂದೂ ಮತಾಂಧ ವಿದ್ಯಾರ್ಥಿಗಳು ಸಹಾ ತಮ್ಮೊಡನೆ ಊಟ ಮಾಡಕೂಡದೆಂದು ಆಜ್ಞಾಪಿಸಿದರು. ಇಂತಹ ಜಾತೀಯ ಅವಮಾನಗಳ ಕಹಿಯನ್ನು ಬಾಲ್ಯದಿಂದಲೇ ನುಂಗಿ ಅನುಭವ ಪಡೆದಿದ್ದ ಸಹಾ ಅವರ ಬಗೆಗೆ ತಲೆ ಕೆಡಿಸಿಕೊಳ್ಳಲಿಲ್ಲ. ಅವರು ಹಾಸ್ಟೇಲನ್ನು ತೊರೆದು ಕಾಲೇಜು ಬೀದಿಯಲ್ಲಿ ಒಂದು ಖಾಸಗಿ ವಿದ್ಯಾರ್ಥಿ ಮೆಸ್ಸನ್ನು ಪ್ರಾರಂಭಿಸಿದರು. ತಮ್ಮ ಸಹಪಾಠಿಗೆ ಆದ ನೋವನ್ನು ಪ್ರತಿಭಟಿಸಿ ಜ್ಞಾನಘೋಷ್, ನೀಲರತನೆಧರ್ ಭೂಪೇನ್ ಘೋಶ್ ಮುಂತಾದವರು ಹಾಸ್ಟೆಲನ್ನು ತೊರೆದು ಈ ವಿದ್ಯಾರ್ಥಿ ಮೆಸ್ಸನ್ನು ಸೇರಿದರು.

ಸಹಾರಿಗೆ ದೊರಕುತ್ತಿದ್ದ ಸ್ಟೈಪಂಡ್ ಅವರ ವಿದ್ಯಾಭ್ಯಾಸದ ಅಗತ್ಯ ಖರ್ಚುಗಳನ್ನು ಭರಿಸಲು ಸಾಕಾಗುತ್ತಿರಲಿಲ್ಲ. ಹಾಗಾಗಿ ಅವರು ಈ ವೆಚ್ಚವನ್ನು ಭರಿಸಲು ಅನೇಕ ಕಿರಿಯ ವಿದ್ಯಾರ್ಥಿಗಳಿಗೆ ಖಾಸಗಿ ಪಾಠ ಹೇಳಬೇಕಾಗುತ್ತಿತ್ತು. ಈ ಆದಾಯದಿಂದ ತಾನು ಮತ್ತು ತನ್ನ ತಮ್ಮ 'ಕನಾಯ್'ನ ಓದಿನ ವೆಚ್ಚಗಳನ್ನು ಪಡೆದುಕೊಳ್ಳುತ್ತಿದ್ದರು. ಇಂತಹ ಕಷ್ಟಕರ ಜೀವನದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಹಾ ತಮ್ಮ ಸುತ್ತಮುತ್ತಲ ಬೆಳವಣಿಗೆಗೆ ಎಂದೂ ಕಣ್ಣುಮುಚ್ಚಿ ಕುಳಿತವರಾಗಿರಲಿಲ್ಲ. ಆಗ ದೇಶದಲ್ಲಿ ನಡೆಯುತ್ತಿದ್ದ ಆಗುಹೋಗುಗಳ ಬಗೆಗೆ ಪಠ್ಯ ವಿಷಯಗಳಷ್ಟೇ ಗಮನಕೊಡುತ್ತಿದ್ದರು. ಸ್ವಾತಂತ್ರ್ಯ ಚಳುವಳಿಯನ್ನು ಅತ್ಯಂತ ಆಸಕ್ತಿಯಿಂದ ಗಮನಿಸುತ್ತಿದ್ದರು. ಅದರಲ್ಲಿ ಪೂರ್ಣವಾಗಿ ಪಾಲ್ಗೊಳ್ಳಬೇಕೆಂಬ ಆಸೆ ಅನೇಕ ಬಾರಿ ಯುವಕರಾದ ಸಹಾರಲ್ಲಿ ಮೂಡಿದರು ಅವರ ಜವಾಬ್ದಾರಿ ಮತ್ತು ಜೀವನದಲ್ಲಿ ಓದಿ ಉನ್ನತ ಹಂತ ತಲುಪಬೇಕೆಂಬ ಹಂಬಲ ಅವರನ್ನು ಚಳುವಳಿಯಿಂದ ವಿಮುಖರನ್ನಾಗಿಸುತ್ತಿತ್ತು.

ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ಸಹಾರಿಗೆ ಬಂಗಾಳದ ಅನೇಕ ಪ್ರಸಿದ್ಧ ಕ್ರಾಂತಿಕಾರಿಗಳ ಸಂಪರ್ಕವಿತ್ತು. ಢಾಕಾದಿಂದಲೂ ಸಹಾರಿಗೆ

ಚಿರಪರಿಚಿತನಾಗಿದ್ದ ಪುಲಿನ್‌ದಾಸ್‌ನ ಸಂಪರ್ಕದಿಂದ ಅವರು ಅವನು ಸ್ಥಾಪಿಸಿದ ''ಅನುಶೀಲನ್ ಸಮಿತಿ''ಯ ಸದಸ್ಯರಾದರು. ಈ ಸಮಿತಿಯ ಸದಸ್ಯರಾಗಿ ಅವರು ಕವಾಯಿತು ಹಾಗು ಕತ್ತಿವರಸೆಯಲ್ಲಿ ತರಬೇತಿ ಪಡೆದರು. ಜತಿನ್‌ಮುಖರ್ಜಿ ಎಂಬ ಮತ್ತೊಬ್ಬ ಕ್ರಾಂತಿಕಾರಿ ಚಾಕುವಿನಿಂದ ಹುಲಿಯನ್ನು ಕೊಂದು ''ಭಾಗ ಜತಿನ್'' ಎಂದೇ ಪ್ರಖ್ಯಾತನಾಗಿದ್ದ. ಈತ ಕಲ್ಕತ್ತಾಗೆ ಬಂದಾಗಲೆಲ್ಲಾ ಸಹಾರ ಕಾಲೇಜಿನ ಬೀದಿಯ ಮೇಸ್‌ನಲ್ಲಿ ಅತಿಥಿಯಾಗಿ ಉಳಿಯುತ್ತಿದ್ದ. ಮುಂದೆ ಈತ ಬಾಲಸೋರ್‌ನಲ್ಲಿ ಪೋಲೀಸರೊಂದಿಗೆ ನಡೆದ ಚಕಮುಕಿಯಲ್ಲಿ ಪ್ರಾಣ ಕಳೆದುಕೊಂಡ. ಹೀಗೆ ಸಹಾ ಸ್ವಾತಂತ್ರ್ಯ ಚಳುವಳಿಯ ಕ್ರಾಂತಿಕಾರರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ತಮ್ಮ ಬಡತನದ ಮಿತಿಯಿಂದಾಗಿ ಅದರಲ್ಲಿ ಪೂರ್ಣವಾಗಿ ಮುಳುಗದೆ ಅದರಿಂದ ದೂರವು ಉಳಿಯದೆ ಓದನ್ನು ಅತ್ಯಂತ ಶ್ರದ್ಧೆ ಹಾಗೂ ಆಸಕ್ತಿಯಿಂದ ಮುಂದುವರಿಸಿದರು. ಆದರ್ಶಗಳನ್ನು ಬೆನ್ನೇರಿ ಜೀವನದ ಗುರಿಯನ್ನು ಎಂದು ಕೈಬಿಟ್ಟವರಲ್ಲಾ ಸಹಾ. ಅವರಿಗೆ ತಮ್ಮ ಓದಿನ ಗುರಿ ಜೀವನದ ಪರಮ ಕರ್ತವ್ಯವಾಗಿತ್ತು. ಆದಕ್ಕಾಗಿಯೇ ಅವರು ಓದಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ಸಾಮಾಜಿಕ ಕಳಕಳಿಯ ಆದರ್ಶಗಳು ಪೂರ್ಣವಾಗಿ ತ್ಯಜಿಸದೆ ಅವುಗಳನ್ನು ವಿದ್ಯಾರ್ಥಿ ದೆಸೆಯಲ್ಲಿ ಸುಪ್ತಾವಸ್ಥೆಯಲ್ಲಿ ಅಡಗಿಸಿಟ್ಟು ಓದನ್ನು ಮುಂದುವರಿಸಿದರು.

ಅನ್ವಯಿಕ ಗಣಿತದಲ್ಲಿ ಪದವಿ ಪಡೆಯಲು ಇವರಿಗೆ ಪ್ರಬಲ ಪ್ರತಿಸ್ಪರ್ಧಿ ಗೆಳೆಯ ಸತ್ಯೇಂದ್ರನಾಥ ಬೋಸ್. ಸಹಾ ಗಣಿತಶಾಸ್ತ್ರದಲ್ಲಿ ಬಿ.ಎಸ್.ಸಿ. ಆನರ್ಸ್ ಹಾಗೂ ಎಂ.ಎಸ್.ಸಿ.ಯನ್ನು ಮುಗಿಸಿದರು. ಈ ಎರಡೂ ಪರೀಕ್ಷೆಗಳನ್ನು ಮೇಘನಾಥರಿಗೆ ದ್ವಿತೀಯ ಸ್ಥಾನ. ಮೊದಲನೆಯ ಸ್ಥಾನ ಸತ್ಯೇಂದ್ರನಾಥ ಬೋಸರಿಗೆ ಮೀಸಲು.

ಅಧ್ಯಾಯ ೩

ಸರ್ಕಾರದ ನಷ್ಟ ವಿಜ್ಞಾನಕ್ಕೆ ಸಂದ ಲಾಭ

ಸಹಾ ಎಂ.ಎಸ್.ಸಿ. ಪದವಿ ಮುಗಿಸಿದ ಕೂಡಲೇ ಸೂಕ್ತ ಉದ್ಯೋಗಕ್ಕಾಗಿ ಹುಡುಕಾಟ ಪ್ರಾರಂಭಿಸಿದರು. "ಇಂಡಿಯನ್ ಫೈನಾನ್ಸ್ ಸರ್ವಿಸ್" ಎಂಬ ಗೌರವಯುತವಾದ ಪರೀಕ್ಷೆಗೆ ಕೂರಲು ಅವರು ಅನುಮತಿ ಬೇಡಿದಾಗ ಸರ್ಕಾರ ಅವರ ಬೇಡಿಕೆಯನ್ನು ತಿರಸ್ಕರಿಸಿತು. ಇದಕ್ಕೆ ಬಹಳ ಮುಖ್ಯವಾದ ಕಾರಣ ಸಹಾರಿಗೆ ಕ್ರಾಂತಿಕಾರಿಗಳೊಂದಿಗೆ ಇದ್ದ ಸಂಬಂಧ. ಸ್ವಂತ ಪರಿಶ್ರಮ ಹಾಗೂ ಅತ್ಯಂತ ಕಠಿಣ ಹಾದಿಯನ್ನು ಕ್ರಮಿಸಿ ಬಂದಿದ್ದ ಯುವಕನಿಗೆ ಇದರಿಂದ ಹೆಚ್ಚಿನ ನಿರಾಸೆಯಾದರೂ ಅದರಿಂದ ಎದೆಗುಂದಲಿಲ್ಲ. ಉನ್ನತ ಹುದ್ದೆಯೊಂದನ್ನು ಪಡೆದು ತನ್ನ ಕುಟುಂಬದ ಆರ್ಥಿಕ ಸ್ಥಿತಿಯನ್ನು ಸ್ವಲ್ಪಮಟ್ಟಿಗಾದರೂ ಸುಧಾರಿಸಬಹುದೆಂಬ ಆಸೆ ಇದರಿಂದ ನೆಲಕಚ್ಚಿತು. ಸವಾಲಿನ ಮೇಲೆ ಸವಾಲನ್ನು ಎದುರಿಸುತ್ತಾ ಮೇಲೆ ಬಂದ ಯುವಕನಿಗೆ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವುದು ಕಷ್ಟವೇನಾಗಲಿಲ್ಲ. ಸರ್ಕಾರದ ಉನ್ನತ ಹುದ್ದೆ ತನಗೆ ಸಿಗಲಾರದೆಂದು ತೀರ್ಮಾನಿಸಿ ಬೇರೆ ಕೆಲಸ ಹುಡುಕಲು ಪ್ರಾರಂಭಿಸಿದರು. ಈ ರೀತಿಯ ಬೆಳವಣಿಗೆಯಾಗದಿದ್ದರೆ ಸಹಾ ಸರ್ಕಾರದ ಯಾವುದಾದರೂ, ಉನ್ನತ ಹುದ್ದೆಯಲ್ಲಿ ಒಬ್ಬ

ಅಧಿಕಾರಿಯಾಗಿ ಮಾತ್ರ ವಿಜೃಂಭಿಸುತ್ತಿದ್ದರು. ಇದು ತಪ್ಪಿದ್ದರಿಂದ ವಿಜ್ಞಾನ ಕ್ಷೇತ್ರಕ್ಕೆ ಹೆಚ್ಚು ಲಾಭವಾಯಿತು. ಅದೇ ಕಾಲಕ್ಕೆ ಕಲ್ಕತ್ತಾ ವಿಶ್ವವಿದ್ಯಾಲಯದ ಗಣಿತಶಾಸ್ತ್ರ ವಿಭಾಗದಲ್ಲಿ ಖಾಲಿಯಿದ್ದ ಉಪನ್ಯಾಸಕರ ಹುದ್ದೆಗೆ ಸಹಾ ಮತ್ತು ಸತ್ಯೇಂದ್ರನಾಥ ಬೋಸರು ನೇಮಕಗೊಂಡರು. ಈ ಕೆಲಸಕ್ಕೆ ಸೇರಿದ್ದರಿಂದ ಅವರಿಗೆ ಸರ್ಕಾರದ ಉನ್ನತ ಹುದ್ದೆಯಲ್ಲಿ ದೊರೆಯುತ್ತಿದ್ದ ಸಂಬಳಕ್ಕಿಂತಲೂ ಅತ್ಯಂತ ಕಡಿಮೆ ಸಂಬಳ ದೊರಕುತ್ತಿತ್ತು. ಆದರೂ ಸಹಾ ಅವರು ಈ ಪರಿಸ್ಥಿತಿಗೆ ಹೆಚ್ಚು ಕೊರಗದೆ ಬಹಳ ತೃಪ್ತಿಯಿಂದಲೇ ಒಗ್ಗಿಕೊಳ್ಳಲು ಪ್ರಯತ್ನಿಸಿದರು. ದೇಶಭಕ್ತಿಯ ಅಪರಾಧ ಇವರಿಗೆ ತಮ್ಮ ಜೀವನದ ಮಹದಾಸೆಯನ್ನು ಪೂರೈಸಲು ಅಡ್ಡಿಯಾದರೂ ಅದರಿಂದ ಸ್ವಲ್ಪವೂ ವಿಚಲಿತರಾಗದೆ ಹೊಸ ಪರಿಸ್ಥಿತಿಗೆ ಸ್ವಾಭಾವಿಕವಾಗಿಯೇ ಒಗ್ಗಿಹೋದರು. ಇನ್ನೆಂದಿಗೂ ಸರ್ಕಾರದ ಗುಲಾಮನಾಗಿ ಸೇವೆಸಲ್ಲಿಸದಿರುವ ಸೌಭಾಗ್ಯ ತನ್ನದಾಯಿತೆಂದು ಭಾವಿಸಿ ಅಧ್ಯಾಪಕ ವೃತ್ತಿಯನ್ನು ಸಂತೋಷದಿಂದಲೇ ಸ್ವೀಕರಿಸಿದರು.

ಅತ್ಯಂತ ಪ್ರತಿಭಾನ್ವಿತರಾದ ಸಹಾ ಮತ್ತು ಎಸ್.ಎನ್. ಬೋಸರಿಗೆ ಅಧಿಕಾರಿ ದರ್ಪ ಕಂಡರೆ ಆಗುತ್ತಿರಲಿಲ್ಲ. ಹಾಗಾಗಿ ಇಲಾಖೆಯ ಮುಖ್ಯಸ್ಥರಾದ ಗಣೇಶಪ್ರಸಾದರೊಡನೆ ಭಿನ್ನಾಭಿಪ್ರಾಯ ಪ್ರಾರಂಭವಾಯಿತು. ಆಗ ಇವರ ನೆರವಿಗೆ ಬಂದವರು ಆಗ ಕಲ್ಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಸರ್ ಅಸುತೋಷ್ ಮುಖರ್ಜಿಯವರು. ಯುವ ಪ್ರತಿಭೆಗಳ ಪರಿಚಯವಿದ್ದ ಅಸುತೋಷರು ವಿಶ್ವವಿದ್ಯಾಲಯಕ್ಕೇ ಈ ಪ್ರತಿಭೆಗಳನ್ನು ಉಳಿಸಿಕೊಳ್ಳಲು ಇವರಿಬ್ಬರನ್ನು ಭೌತಶಾಸ್ತ್ರ ವಿಭಾಗಕ್ಕೆ ಉಪನ್ಯಾಸಕರನ್ನಾಗಿ ನೇಮಕ ಮಾಡಿಕೊಂಡರು. ಈ ತೀರ್ಮಾನದಿಂದ ಅಸುತೋಷರು ಎರಡು ಸಾಧನೆಯನ್ನು ಸಾಧಿಸಿದರು. ಇದರಿಂದಾಗಿ ಯುವ ಪ್ರತಿಭೆಗಳು ವಿಶ್ವವಿದ್ಯಾಲಯದಲ್ಲೇ ಉಳಿಯುವಂತಾಯಿತು. ಹಾಗೂ ಈ ಇಬ್ಬರು ಯುವಕರಿಗೂ ತುಂಬಾ ತೃಪ್ತಿಯಾಯಿತು. ಇದಲ್ಲದೆ ಭೌತಶಾಸ್ತ್ರ

ವಿಭಾಗಕ್ಕೆ ಅತ್ಯಂತ ಆಸಕ್ತಿ ಮತ್ತು ಶ್ರದ್ಧೆವಹಿಸಿ ಕೆಲಸಮಾಡಬಲ್ಲ ಉಪನ್ಯಾಸಕರನ್ನು ಒದಗಿಸಿದಂತಾಯಿತು. ಗಣಿತಶಾಸ್ತ್ರ ಓದಿದ್ದ ಈ ಪ್ರತಿಭಾನ್ವಿತ ವಿದ್ಯಾರ್ಥಿಗಳು ಭೌತಶಾಸ್ತ್ರದಲ್ಲಿ ತಮ್ಮನ್ನು ತೊಡಗಿಸಿ ಕೊಂಡು ಮುಂದೆ ಅತ್ಯಂತ ಗಣನೀಯ ಕೊಡುಗೆಗಳನ್ನು ಈ ಕ್ಷೇತ್ರದಲ್ಲೇ ಅವರು ನೀಡುವಂತೆ ಮಾಡಲಾಯಿತು. ಈ ಎರಡು ಆಕಸ್ಮಿಕ ಘಟನೆಗಳು ಕೇವಲ ವಿಜ್ಞಾನಿಯ ಜೀವನವನ್ನು ಬದಲಿಸಿದ್ದೇ ಅಲ್ಲದೆ ಖಗೋಳ ವಿಜ್ಞಾನದ ದಿಕ್ಕನ್ನು ಬದಲಾಯಿಸುವಂತಾಯಿತು. ಭೌತಶಾಸ್ತ್ರ ಬೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಯುವಕರು ಅದನ್ನು ಕೇವಲ ವೃತ್ತಿಯಾಗಿ ತೆಗೆದುಕೊಳ್ಳದೆ ಅದನ್ನು ತಮ್ಮ ಜೀವನದ ಪ್ರವೃತ್ತಿಯನ್ನಾಗಿಸಿಕೊಂಡು ಈ ಕ್ಷೇತ್ರದಲ್ಲಿ ಮುಂದೆ ಮಹತ್ತರ ಕೊಡುಗೆಗಳನ್ನು ನೀಡಿದರು.

ಅವರು ಭೌತಶಾಸ್ತ್ರದ ಉಪನ್ಯಾಸಕರ ಹುದ್ದೆಗೆ ಬಂದಾಗ ಇಬ್ಬರಿಗೂ "ಭೌತಶಾಸ್ತ್ರ" ತಮ್ಮ ಪದವಿಯಲ್ಲಿ ವಿಶೇಷವಾಗಿ ಅಭ್ಯಸಿಸಿದ ವಿಷಯವಾಗಿರಲಿಲ್ಲ. ಇದಲ್ಲದೆ ಈ ವೃತ್ತಿಯಲ್ಲಿ ಇನ್ನೂ ಅನೇಕ ಸಮಸ್ಯೆಗಳಿದ್ದವು. ಪ್ರಾರಂಭದಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯ ಪರೀಕ್ಷೆ ಗಳನ್ನು ನಡೆಸಿ ಪದವಿ ದಾನಮಾಡುವ ಅಂಗವಾಗಿತ್ತು. ಪ್ರೆಸಿಡೆನ್ಸಿ ಕಾಲೇಜು, ಚರ್ಚ್ ಕಾಲೇಜು ಮುಂತಾದ ಹೆಸರಾಂತ ಕಾಲೇಜುಗಳು ಮಾತ್ರ ಸ್ನಾತಕೋತ್ತರ ತರಗತಿಗಳನ್ನು ನಡೆಸಲು ಅರ್ಹತೆ ಪಡೆದಿದ್ದವು. ಅಶುತೋಷ್ ಮುಖರ್ಜಿಯವರು ವಿಶ್ವವಿದ್ಯಾಲಯದಲ್ಲೇ ಸ್ನಾತ ಕೋತ್ತರ ತರಗತಿಗಳನ್ನು ವಿಜ್ಞಾನ ಮತ್ತು ಕಲಾ ವಿಭಾಗಗಳಲ್ಲಿಯೂ ಪ್ರಾರಂಭಿಸಲು ತೀರ್ಮಾನಿಸಿ ಅದನ್ನು ಜಾರಿಗೊಳಿಸಲು ಪ್ರಯತ್ನಿಸಿದರು. ಅದರ ಅಂಗವಾಗಿ ಪ್ರಾರಂಭಗೊಂಡ ವಿಶ್ವವಿದ್ಯಾಲಯದ ವಿಜ್ಞಾನ ಕಾಲೇಜು ಅನೇಕ ಪ್ರಾರಂಭದ ಸಮಸ್ಯೆಗಳನ್ನು ಹೊಂದಿತ್ತು. ಉಪಕರಣ ಗಳನ್ನು ವಿಶ್ವವಿದ್ಯಾಲಯದ ವಿವಿಧ ಅಧೀನ ಕಾಲೇಜುಗಳಿಂದ ಪಡೆದುಕೊಂಡು ಪ್ರಯೋಗಾಲಯವನ್ನು ಸಜ್ಜುಗೊಳಿಸಿಕೊಳ್ಳ

ಬೇಕಾಗಿತ್ತು. ಅವರವೇ ಪಠ್ಯವಿಷಯವನ್ನು ಸಿದ್ಧಗೊಳಿಸಿ ಪಠ್ಯಪುಸ್ತಕಗಳನ್ನು ಬರೆಯಬೇಕಾಯಿತು. ವೈಜ್ಞಾನಿಕ ಉಪಕರಣಗಳನ್ನು ವಿದೇಶಗಳಿಂದ ತರಿಸಿಕೊಳ್ಳಲು ಮೊದಲನೇ ಮಹಾಯುದ್ಧ ನಡೆಯುತ್ತಿದ್ದರಿಂದ ಅನೇಕ ಸಮಸ್ಯೆಗಳಿದ್ದವು. ಹಿರಿಯರ ಹಾಗೂ ಅನುಭವಿಗಳ ಮಾರ್ಗದರ್ಶನದ ಅಭಾವ ಕೂಡ ಇತ್ತು. ಈ ಎಲ್ಲಾ ಸಮಸ್ಯೆಗಳಿದ್ದರು ಅವುಗಳನ್ನು ಈ ಇಬ್ಬರು ಯುವ ವಿಜ್ಞಾನಿಗಳು ಧೈರ್ಯದಿಂದ ಅತ್ಯಂತ ಸಮರ್ಥವಾಗಿ ಎದುರಿಸಿದರು. ಅದಕ್ಕಾಗಿ ಅತ್ಯಂತ ಶ್ರದ್ಧೆಯಿಂದ ಕಷ್ಟಪಟ್ಟು ಅಭ್ಯಾಸ ಮಾಡಿದರು. ಆಗ ಅವರ ನೆರವಿಗೆ ಬಂದದ್ದು ಪ್ರೆಸಿಡೆನ್ಸಿ ಕಾಲೇಜು ಮತ್ತು ಕಲ್ಕತ್ತಾ ವಿಶ್ವವಿದ್ಯಾಲಯದ ಗ್ರಂಥಾಲಯ. ಪ್ರಯೋಗಾಲಯದ ಅಭಾವವಿದ್ದರೂ ವಿಶ್ವವಿದ್ಯಾಲಯ ಅತ್ಯಂತ ಉತ್ತಮವಾಗಿ ಗ್ರಂಥಾಲಯವನ್ನು ಹೊಂದಿತ್ತು. ವಿಜ್ಞಾನ ಕ್ಷೇತ್ರದ ಅನೇಕ ಆಧುನಿಕ ಗ್ರಂಥಗಳು ಈ ಗ್ರಂಥಾಲಯದಲ್ಲಿ ಲಭ್ಯವಿದ್ದವು. ಇದರ ಪೂರ್ಣ ಪ್ರಯೋಜನ ಪಡೆದ ಸಹಾ ಮತ್ತು ಎಸ್.ಎನ್. ಬೋಸ್ ಭೌತಶಾಸ್ತ್ರ ವಿಭಾಗವನ್ನು ಅತ್ಯಂತ ಉತ್ತಮವಾಗಿ ತಮ್ಮ ಶ್ರದ್ಧೆ, ಆಸಕ್ತಿ ಹಾಗೂ ಸತತ ಪರಿಶ್ರಮದ ಮೂಲಕ ಸಜ್ಜುಗೊಳಿಸಿದರು. ಇದರಿಂದಾಗಿ ಮುಂದೆ ಸರ್ಕಾರಿ ಸೇವೆಯಿಂದ ಬಿಡುಗಡೆ ಹೊಂದಿ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಸೇರಿಕೊಂಡ ಸಿ.ವಿ. ರಾಮನ್‌ರವರಿಗೆ ಯಾವುದೇ ಸಮಸ್ಯೆಯುಂಟಾಗದೆ ಅವರು ಸಲೀಸಾಗಿ ತಮ್ಮ ಸಂಶೋಧನೆಯನ್ನು "ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸೈನ್ಸ್"ನಲ್ಲಿ ಮುಂದುವರಿಸಿಕೊಂಡು ವಿಶ್ವವಿದ್ಯಾಲಯದಲ್ಲಿ, ಬೋಧನೆ ಮಾಡಲು ಸಾಧ್ಯವಾಯಿತು. ಹೀಗೆ ಕಲ್ಕತ್ತಾ ವಿಶ್ವವಿದ್ಯಾಲಯದ ವಿಜ್ಞಾನ ಕಾಲೇಜನ್ನು ಸ್ಥಾಪಿಸಿ ದೇಶೀಯ ವಿದ್ಯಾರ್ಥಿಗಳು ಆಧುನಿಕ ವಿಜ್ಞಾನ ತಂತ್ರಜ್ಞಾನಗಳನ್ನು ಅಭ್ಯಸಿಸಲು ಅವಕಾಶ ಕಲ್ಪಿಸಬೇಕೆಂಬ ಅಸುತೋಷ್

ಮುಖರ್ಜಿಯವರ ಕನಸು ಈ ಇಬ್ಬರು ಯುವಕರ ಮೂಲಕ ನನಸಾಗುವಂತಾಯಿತು.

ಸಹಾರವರು ಸ್ನಾತಕೋತ್ತರ ತರಗತಿಗಳಿಗೆ ಉಷ್ಣಬಲ ವಿಜ್ಞಾನ, ರೋಹಿತದರ್ಶಕ ವಿಜ್ಞಾನ, ದ್ರವಸ್ಥಿತಿ ವಿಜ್ಞಾನ ಮುಂತಾದ ವಿಷಯಗಳನ್ನು ಬೋಧಿಸಬೇಕಾಗುತ್ತಿತ್ತು. ಅದಕ್ಕಾಗಿ ಅವರು ಮ್ಯಾಕ್ಸ್‌ಪ್ಲ್ಯಾಂಕ್, ನರ್ನಸ್ಟ್, ನೀಲ್ಸ್ ಬೋರ್, ಸೋಮರ್ ಫೀಲ್ಡ್ ಮುಂತಾದ ವಿಜ್ಞಾನಿಗಳ ಸಂಶೋಧನೆಗಳನ್ನು ಅತ್ಯಂತ ವಿಷದವಾಗಿ ಅಭ್ಯಸಿಸಿದರು. ಸಹಾರವರು ಇಂಟರ್ ಮೀಡಿಯಟ್‌ನಲ್ಲಿ ಕಲಿತಿದ್ದ ಜರ್ಮನ್ ಭಾಷೆಯ ಜ್ಞಾನ, ಈಗ ಅವರಿಗೆ ತುಂಬಾ ಸಹಾಯ ಮಾಡಿತು. ಹೀಗಾಗಿ ಜರ್ಮನ್ ಭಾಷೆಯಲ್ಲಿನ ಸಂಶೋಧನಾ ಪ್ರಕಟಣೆಗಳನ್ನು ಶೀಘ್ರವಾಗಿ ಪರಿಚಯಮಾಡಿಕೊಳ್ಳಲು ಇದರಿಂದ ತುಂಬಾ ಸಹಾಯವಾಯಿತು. ಇದೇ ಸಂದರ್ಭದಲ್ಲಿ ಸಹಾ ಮತ್ತು ಎಸ್.ಎನ್. ಬೋಸ್ ಇಬ್ಬರೂ ಸೇರಿ ಐನ್‌ಸ್ಟೈನ್‌ರ "ಸಾಪೇಕ್ಷತಾ ಸಿದ್ಧಾಂತ"ವನ್ನು ಇಂಗ್ಲೀಷಿಗೆ ಭಾಷಾಂತರಿಸಿದರು. ಅದನ್ನು ೧೯೧೯ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಪ್ರಕಟವಾಗುವಂತೆ ಮಾಡಿದರು. ಹೀಗೆ ಸಾಪೇಕ್ಷತಾ ಸಿದ್ಧಾಂತದ ಆಂಗ್ಲ ಅನುವಾದವನ್ನು ಮೊತ್ತಮೊದಲು ಮಾಡಿದ ಕೀರ್ತಿಯನ್ನು ತಮ್ಮದಾಗಿಸಿಕೊಂಡರು. ಇದಕ್ಕಿಂತಲೂ ಹೆಚ್ಚಾಗಿ ಅವರಿಗೆ ಮಹತ್ತರ ವೈಜ್ಞಾನಿಕ ಸಂಶೋಧನೆಯೊಂದನ್ನು ಭಾರತೀಯ ವಿದ್ಯಾರ್ಥಿಗಳಿಗೆ ಪರಿಚಯಿಸಬೇಕೆಂಬ ಹಂಬಲ ಇಂತಹ ಕೆಲಸ ಮಾಡಲು ಪ್ರೇರೇಪಿಸಿತು. ಹೀಗೆ ಅಸುತೋಷ್ ಮುಖರ್ಜಿ ಪಿ.ಸಿ. ರೇ, ಜೆ.ಸಿ. ಬೋಸ್ ಮುಂತಾದವರು ನೆಟ್ಟು ನೀರೆರೆಯುತ್ತಿದ್ದ ಭಾರತೀಯ ವಿಜ್ಞಾನದ ಸಸಿಯನ್ನು ಬೆಳೆಸಲು ಈ ಇಬ್ಬರು ತಮ್ಮದೇ ಆದ ರೀತಿಯಲ್ಲಿ ಉತ್ತಮ ಕೊಡುಗೆಗಳನ್ನು ನೀಡಿದರು.

ಸಹಾ ಕೇವಲ ಶಿಕ್ಷಕವೃತ್ತಿಯಲ್ಲಿ ಸಂತೃಪ್ತರಾಗದೆ ವೈಜ್ಞಾನಿಕ ಸಂಶೋಧನೆಯ ಕಡೆ ತಮ್ಮ ಗಮನ ಹರಿಸಿದರು. ಭಾರತದ ಅಂದಿನ

ಪರಿಸ್ಥಿತಿಯಲ್ಲಿ ವೈಜ್ಞಾನಿಕ ಸಂಶೋಧನೆ ನಡೆಸುವುದು ಸುಲಭದ ಮಾತಾಗಿರಲಿಲ್ಲ. ಸುಸಜ್ಜಿತವಾದ ಯಾವುದೇ ಪ್ರಯೋಗಾಲಯವಾಗಲಿ, ಆಧುನಿಕ ಉಪಕರಣಗಳಾಗಲಿ ಲಭ್ಯವಿರಲಿಲ್ಲ. ಅಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲಿಯೂ ಜೆ.ಸಿ. ಬೋಸ್ ಹಾಗೂ ಪಿ.ಸಿ. ರೇ ಯವರು ಉತ್ತಮವಾದ ಪ್ರಾರಂಭವನ್ನು ಮಾಡಿದ್ದರು. ೧೮೭೬ ರಲ್ಲಿ ಡಾ. ಮಹೇಂದ್ರಲಾಲ್ ಸರ್ಕಾರ್‌ರು ಭಾರತೀಯರು ವಿಜ್ಞಾನದಲ್ಲಿ ಮೂಲಭೂತ ಸಂಶೋಧನೆಗಳನ್ನು ನಡೆಸಲೆಂದು "ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸೈನ್ಸ್"ನ್ನು ಪ್ರಾರಂಭಿಸಿದ್ದರು. ಆದರೆ ಅಲ್ಲಿ ನಿಜವಾಗಿ ಸಂಶೋಧನೆ ನಡೆಸಲು ಯಾವುದೇ ಸಲಕರಣೆಗಳಿರಲಿಲ್ಲ. ಅಲ್ಲಿ ಬಹುಪಾಲು ವೈಜ್ಞಾನಿಕ ಉಪನ್ಯಾಸ ಕಾರ್ಯಕ್ರಮಗಳು ಮಾತ್ರ ನಡೆಯುತ್ತಿದ್ದವು. ಅನಂತರದ ದಿನಗಳಲ್ಲಿ ಗಣಿತಶಾಸ್ತ್ರದಲ್ಲಿ ಸಂಶೋಧನೆಗಳನ್ನು ನಡೆಸಲು ಪ್ರಯತ್ನಿಸಲಾಯಿತು. ರಾಮನ್‌ರವರು ಈ ಸಂಸ್ಥೆಯಲ್ಲಿ ಸಂಶೋಧನೆಯನ್ನು ಪ್ರಾರಂಭಿಸುವವರೆಗೂ ಇಲ್ಲಿ ಅಂತಹ ಯಾವುದೇ ಮಹತ್ತರ ಸಂಶೋಧನೆಗಳು ನಡೆಯಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಪಿ.ಸಿ. ರೇ ಮತ್ತು ಜೆ.ಸಿ. ಬೋಸರು ಮಾತ್ರ ತಮ್ಮ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬೋಧನಾ ಕೆಲಸದ ಜೊತೆಗೆ ಸಂಶೋಧನೆಗಳನ್ನು ನಡೆಸುತ್ತಿದ್ದರು. ಈ ರೀತಿಯ ಪ್ರಯತ್ನಗಳನ್ನು ಹೊರತುಪಡಿಸಿ ಭಾರತೀಯ ಸಂಶೋಧನಾ ಕ್ಷೇತ್ರದಲ್ಲಿ ಹೆಚ್ಚಿನ ಮಾದರಿಗಳು ಸಹಾರ ಮುಂದೆ ಲಭ್ಯವಿರಲಿಲ್ಲ.

ತಮಗೆ ಇಷ್ಟವಾದ ಕೆಲಸವನ್ನು ಎಷ್ಟೇ ಕಷ್ಟವಾದರೂ ಮಾಡೇ ತೀರಬೇಕೆಂಬ ತ್ರಿವಿಕ್ರಮನ ಛಲ ಸಹಾರದು. ಸವಾಲುಗಳ ಪಂಥಾಹ್ವಾನವನ್ನೇ ಸ್ವೀಕರಿಸಿ ಜೀವನದಲ್ಲಿ ಮೇಲೆ ಬಂದಿದ್ದ ಸಹಾ ಇಂತಹ ಪರಿಸ್ಥಿತಿಯನ್ನು ಸ್ವತಂತ್ರವಾಗಿ ಎದುರಿಸಲು ತೀರ್ಮಾನಿಸಿದರು. ತನಗೆ ತಾನೇ ಸಂಶೋಧನಾ ಗುರುವಾಗಿ ಅನ್ಯರ ಸಹಾಯ ಮತ್ತು ಮಾರ್ಗದರ್ಶನವಿಲ್ಲದೆ ಸ್ವತಂತ್ರವಾಗಿ ತಮ್ಮ ಖಾಸಗಿ ಅಧ್ಯಯನವನ್ನೇ

ಮೂಲ ಬಂಡವಾಳವನ್ನಾಗಿಟ್ಟುಕೊಂಡು ವೈಜ್ಞಾನಿಕ ಸಂಶೋಧನೆಯನ್ನು ಪ್ರಾರಂಭಿಸಿದರು. ಅವರ ಸಹೋದ್ಯೋಗಿಗಳಾದ ಎಸ್.ಕೆ. ಮಿತ್ರ, ಪಿ.ಎನ್. ಘೋಷ್ ಮುಂತಾದವರು ಆ ಕಾಲಕ್ಕಾಗಲೇ ವೈಜ್ಞಾನಿಕ ಸಂಶೋಧನೆಗೆ ಪ್ರಖ್ಯಾತರಾಗಿದ್ದ ರಾಮನ್‌ರ ಬಳಿ ರೋಹಿತದರ್ಶಕ ವಿಜ್ಞಾನದ ಬಗೆಗೆ ಸಂಶೋಧನೆ ಪ್ರಾರಂಭಿಸಿದ್ದರು. ಸಹಾರ ಪ್ರತಿಭೆಯನ್ನು ಗುರುತಿಸಿದ್ದ ರಾಮನ್ನರೇ ಸ್ವತಃ ಗುಪ್ತದೂತರ ಮೂಲಕ ತಮ್ಮ ಜೊತೆಯಲ್ಲಿ ಸಂಶೋಧನೆ ಮಾಡಲು ಆಹ್ವಾನಿಸಿದರೂ ಸಹಾ ಅದನ್ನು ತಿರಸ್ಕರಿಸಿದರು. ಸಹಾರವರಿಗೆ ಬೇರೊಬ್ಬರ ಕೈಕೆಳಗೆ ಸಂಶೋಧನೆ ನಡೆಸುವುದು ರುಚಿಸಲಿಲ್ಲ. ಹಾಗಾಗಿ ಅವರು ಅವರ ಗುರುಗಳಾಗಿದ್ದ ಪಿ.ಸಿ. ರೇ ಮತ್ತು ತುಂಬಾ ಗೌರವದಿಂದ ಕಾಣುತ್ತಿದ್ದ ಜೆ.ಸಿ. ಬೋಸರ ಬಳಿಯು ಸಂಶೋಧನೆಯನ್ನು ಪ್ರಾರಂಭಿಸದೆ ತಾವೇ ಸ್ವತಂತ್ರವಾಗಿ ಸಂಶೋಧನೆಯ ಹುಡುಕಾಟ ಪ್ರಾರಂಭಿಸಿದರು.

ಇವರ ಮೊದಲ ಸಂಶೋಧನಾ ಪ್ರಬಂಧ ಮ್ಯಾಕ್ಸ್ ವೆಲ್ಲನ ಒತ್ತಡಗಳು–ವಿಕಿರಣದ ವಿದ್ಯುದಯಸ್ಕಾಂತೀಯ ಅಧ್ಯಯನ "೧೯೧೭" ರಲ್ಲಿ ಫಿಲಾಸಾಫಿಕಲ್ ಮಾಗಝೈನ್‌ನಲ್ಲಿ ಪ್ರಕಟಗೊಂಡಿತು. ಈ ಪ್ರಬಂಧವಲ್ಲಿ ಅವರಿಗೆ ಸಹಾಯ ಮಾರ್ಗದರ್ಶನ ಮಾಡಿದ ಅವರ ಗುರುಗಳಾಗಿದ್ದ ಪ್ರೊ ಡಿ.ಎನ್. ಮುಲ್ಲಿಖ್‌ರನ್ನು ನೆನೆದಿದ್ದಾರೆ. ಇದಾದನಂತರ ಶೀಘ್ರವಾಗಿ ವ್ಯತಿಕರಣದ ಮಿತಿಗಳು, ಸ್ಥಿತಿ ಸ್ಥಾಪಕತೆಯ ಹೊಸ ಪ್ರಮೇಯ, ಬೆಳಕಿನ ಒತ್ತಡ, ವಿದ್ಯುತ್ ಬಲವಿಜ್ಞಾನ, ಎಲೆಕ್ಟ್ರಾನ್‌ನ ಯಾಂತ್ರಿಕ ಮತ್ತು ವಿದ್ಯುತ್ಕಾಂತೀಯ ಚಲನೆಯ ಗುಣಗಳು, ಕಣಸಿದ್ಧಾಂತದ ಮೇಲೆ ವಿಕರಣ ಒತ್ತಡ ಇನ್ನೂ ಮುಂತಾದ ಅನೇಕ ವೈವಿಧ್ಯಮಯ ಸಂಶೋಧನೆಗಳ ಸರಮಾಲೆಯನ್ನೇ, ಕೆಲವೇ ವರ್ಷಗಳಲ್ಲಿ ಪ್ರಕಟಿಸಿದರು. ಈ ಪ್ರಕಟಣೆಗಳನ್ನು ಆಧರಿಸಿ ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ೧೯೧೮ ರಲ್ಲಿ ತಮ್ಮ ಪ್ರೌಢ ಪ್ರಬಂಧವನ್ನು ಮಂಡಿಸಿದರು. ಮಾರನೆಯ ವರ್ಷವೇ ಕಲ್ಕತ್ತಾ ವಿಶ್ವವಿದ್ಯಾಲಯ ಅವರ

ಪ್ರೌಢ ಪ್ರಬಂಧಕ್ಕೆ "ಡಾಕ್ಟರ್ ಆಫ್ ಸೈನ್ಸ್" ಪದವಿಯನ್ನು ನೀಡಿ ಗೌರವಿಸಿತು. ಆಶುತೋಷರು ಸಹಾರ ಪ್ರಬಂಧವನ್ನು ನೋಡಿದ ಕೂಡಲೇ ಅದನ್ನು ವಿಮರ್ಶಿಸಲು ವಿದೇಶಕ್ಕೆ ಕಳುಹಿಸಲು ಸಲಹೆ ಮಾಡಿದರು. ಇದರಿಂದ ಕಲ್ಕತ್ತಾ ವಿಶ್ವವಿದ್ಯಾಲಯದ ಸಂಶೋಧನಾ ಗುಣಮಟ್ಟದ ಬಗೆಗೆ ಗೌರವ ಮೂಡುತ್ತದೆ ಎಂದು ಅವರು ಭಾವಿಸಿದ್ದರು. ಇದೇ ವರ್ಷ ಅವರು "ಹಾರ್ವರ್ಡ್‌ನ ಸೌರವರ್ಣ ಪಟಲದ ವರ್ಗೀಕರಣದ ಮೇಲೆ" ಎಂಬ ಪ್ರೌಢ ಪ್ರಬಂಧಕ್ಕೆ ಪ್ರೇಮ್‌ಚಂದ್ ರಾಯ್‌ಚಂದ್ ವಿದ್ಯಾರ್ಥಿವೇತನ ದೊರೆಯಿತು. ೧೯೨೦ರಲ್ಲಿ "ಸೌರವರ್ಣ ಪಟಲದ ಗೆರೆಗಳ ಮೂಲ"ದ ಬಗೆಗೆ ಕಲ್ಕತ್ತಾ ವಿಶ್ವವಿದ್ಯಾಲಯದ ಗ್ರಿಫಿತ್ ಬಹುಮಾನ ದೊರೆಯಿತು.

೧೯೧೯ರ ಕೊನೆಯ ಹೊತ್ತಿಗೆ ಸಹಾ ತಮ್ಮ ನೆಚ್ಚಿನ ವಿಷಯದ ಮೇಲೆ ಪ್ರಭುತ್ವ ಪಡೆದಿದ್ದರು. ೧೯೨೦ರ ಮೊದಲ ಆರು ತಿಂಗಳಲ್ಲಿ (೧) "ಸೂರ್ಯನ ವರ್ಣ ಮಂಡಲದಲ್ಲಿ (ಕೊಮೋಸ್ಫಿಯರ್) ಅಯಾನೀಕರಣ" (೨) "ಸೂರ್ಯನಲ್ಲಿನ ಮೂಲ ವಸ್ತುಗಳು" (೩) "ಉಷ್ಣತೆಯ ಸಮಸ್ಯೆಗಳು – ಅನಿಲಗಳ ವಿಕಿರಣ" (೪) "ನಕ್ಷತ್ರಗಳ ಹಾರ್ವರ್ಡ್ ವರ್ಗೀಕರಣದ ಮೇಲೆ" ಮುಂತಾದ ಪ್ರಬಂಧಗಳನ್ನು ಪ್ರಕಟಿಸಿ ಖಗೋಳ ವಿಜ್ಞಾನ ಕ್ಷೇತ್ರದಲ್ಲಿ ತಮಗೆ ಒಂದು ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದ್ದರು. ಈ ಪ್ರಬಂಧಗಳಲ್ಲೆಲ್ಲಾ ಸಹಾರವರು ತಮ್ಮ "ಅಯಾನೀಕರಣ ಸಿದ್ಧಾಂತ"ದ ಮೂಲಭೂತ ತತ್ವಗಳನ್ನು ಪ್ರತಿಪಾದಿಸಿದರು. ಈ ಸಿದ್ಧಾಂತ ಖಗೋಳ ಶಾಸ್ತ್ರದಲ್ಲಿ ಒಂದು ಹೊಸ ದಿಗಂತವನ್ನೇ ತೆರೆಯಿತು.

ನೀಲ್ಸ್‌ಬೋರ್‌ನ ಪರಮಾಣು ಮಾದರಿಯ ರೀತ್ಯಾ ಪ್ರತಿ ಪರಮಾಣುವಿನಲ್ಲಿ ಧನವಿದ್ಯುದೀಯ ಕೇಂದ್ರಭಾಗವಿರುತ್ತದೆ. ಇದರ ಸುತ್ತ ಅನೇಕ ಎಲೆಕ್ಟ್ರಾನುಗಳು ವಿವಿಧ, ಕಕ್ಷೆಗಳಲ್ಲಿ ಈ ಬೀಜ ಕೇಂದ್ರದ ಸುತ್ತಾ ಸುತ್ತುತ್ತಿರುತ್ತವೆ. ಹೆಚ್ಚಿನ ಶಾಖವನ್ನು ಪರಮಾಣುವಿಗೆ

ನೀಡಿದಾಗ ಈ ಎಲೆಕ್ಟ್ರಾನುಗಳು ಬೀಜ ಕೇಂದ್ರದ ಆಕರ್ಷಣ ಬಲದಿಂದ ಬಿಡುಗಡೆ ಪಡೆದು ಮುಕ್ತವಾಗಿ ಎಲೆಕ್ಟ್ರಾನುಗಳು ಮತ್ತು ಧನ ವಿದ್ಯುದೀಯ ಅಯಾನಾಗಿ ಪರಿವರ್ತನೆಗೊಳ್ಳುತ್ತವೆ. ಹೀಗೆ ತಟಸ್ಥವಾದ ಪರಮಾಣುವೊಂದು ಎಲೆಕ್ಟ್ರಾನುಗಳು ಮತ್ತು ಧನವಿದ್ಯುದೀಯ ಅಯಾನಾಗಿ ರೂಪಾಂತರಗೊಳ್ಳುವುದನ್ನು ಅಯಾನೀಕರಣವೆಂದು ಕರೆಯುತ್ತಾರೆ. ಒಂದು ಎಲೆಕ್ಟ್ರಾನ್ ಅನ್ನು ಅದರ ಪರಮಾಣು ಮಟ್ಟದಿಂದ ಬಿಡುಗಡೆ ಗೊಳಿಸಲು ಬೇಕಾದ ಶಕ್ತಿಯನ್ನು "ಅಯಾನೀಕರಣ ಚೈತನ್ಯ" ಎಂದು ಕರೆಯುತ್ತಾರೆ. ಈ ಅಯಾನೀಕರಣ ಶಾಖದಿಂದುಂಟಾದರೆ ಅದನ್ನು "ತಾಪ ಅಯಾನೀಕರಣ" ಎಂದು ಕರೆಯುತ್ತಾರೆ. ಒಂದು ನಿರ್ದಿಷ್ಟವಾದ ಉಷ್ಣತೆ ಮತ್ತು ಒತ್ತಡದಲ್ಲಿ ಅಯಾನೀಕರಣ ಹೊಂದಿದ ಮತ್ತು ಹೊಂದದೆ ಇರುವ ವಸ್ತುವಿನ ನಡುವೆ ಒಂದು ನಿಯತ ಅನುಪಾತವಿರುತ್ತದೆ. ನರ್ನೆಸ್ಟ್‌ನ ವಿದ್ಯಾರ್ಥಿಯಾದ ಎಗ್ಗರ್ಟ್ ಈ ಸಾಮಾನ್ಯ ಭೌತರಸಾಯನ ಸಿದ್ಧಾಂತವನ್ನು ಸ್ವಲ್ಪ ಬದಲಾವಣೆಯೊಂದಿಗೆ ನಕ್ಷತ್ರಗಳಲ್ಲಿನ ಅನಿಲಗಳ ಅಯಾನೀಕರಣವನ್ನು ಲೆಕ್ಕಾಚಾರ ಮಾಡಲು ಅನ್ವಯ ಮಾಡಿದನು. ಈ ಮೂಲಕ ಎಗ್ಗರ್ಟ್ ಎಡಿಂಗಟನ್ನನ "ನಕ್ಷತ್ರಗಳಲ್ಲಿನ ಅಯಾನೀಕರಣ" ಸಿದ್ಧಾಂತವನ್ನು ಪರೀಕ್ಷಿಸಲು ಪ್ರಯತ್ನಿಸಿದ. ಸಹಾ ಈ ಪ್ರಬಂಧವನ್ನು ಓದಿದ ಕೂಡಲೆ ಅದರ ಅದ್ಭುತ ಸಾಧ್ಯತೆಗಳನ್ನು ಮನವರಿಕೆ ಮಾಡಿಕೊಂಡರು. ಲಭ್ಯವಿದ್ದ ವರ್ಣಪಟಲ ಆಧಾರದಿಂದ ಅಥವಾ ಪ್ರಯೋಗಗಳ ಆಧಾರದಿಂದ ಅಯಾನೀಕರಣ ಚೈತನ್ಯದ ಬೆಲೆಗಳನ್ನು ತಮ್ಮ ಉಷ್ಣ ಚಲನಶಾಸ್ತ್ರ ಜ್ಞಾನ ಹಾಗೂ ರಾಸಾಯನಿಕ ಸ್ಥಿರಾಂಕಗಳ ಬೆಲೆಗಳನ್ನು ಬಳಸಿಕೊಂಡು ಪ್ರಸಿದ್ಧವಾದ ಈ ಸಮೀಕರಣವನ್ನು ರೂಪಿಸಿದರು.

$$\frac{\log x}{1-x^2} P = \frac{-u}{2-3RT} + \frac{5}{2} \log T - 6.5$$

P ಒಟ್ಟು ಒತ್ತಡ x ಆಯಾನೀಕರಣ ಹೊಂದಿದ ಪರಮಾಣುವಿನ ಭಾಗ, u ಆಯಾನೀಕರಣದ ತಾಪ, R ವಿಶ್ವ ಅನಿಲ ಸ್ಥಿರಾಂಕ T ಕೆಲ್ವಿನ್ ಮಾನದಲ್ಲಿ ಉಷ್ಣತೆ. ಸಹಾ ಅವರು ಹೀಗೆ ಅತ್ಯಂತ ಸರಳವಾಗಿ ಮತ್ತು ಸೊಗಸಾಗಿ ಈ ಸಮೀಕರಣವನ್ನು ನಿರೂಪಿಸಿ ಖಗೋಳಶಾಸ್ತ್ರ ವೀಕ್ಷಣೆಯಲ್ಲಿ ಐವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಬಿಡಿಸಲಾಗದೆ ಉಳಿದಿದ್ದ ಕಗ್ಗಂಟನ್ನು ಬಿಡಿಸಲು ಯಶಸ್ವಿಯಾಗಿ ಬಳಕೆ ಮಾಡಿದರು. ಇದಲ್ಲದೆ ಈ ಸಮೀಕರಣದ ಮೂಲಕ ಸೂರ್ಯನ ಹೆಚ್ಚು ಎತ್ತರದ ವರ್ಣಮಂಡಲದಲ್ಲಿ ಮುಖ್ಯವಾಗಿ ಆಯಾನೀಕರಣ ಹೊಂದಿದ ಕ್ಯಾಲ್ಷಿಯಂ, ಬೇರಿಯಂ, ಸ್ಟ್ರಾನ್ಶಿಯಂ, ಸ್ಕಾಂಡಿಯಂ, ಟೈಟಾನಿಯಂ, ಕಬ್ಬಿಣದ ಪರಮಾಣುಗಳನ್ನು ಹೊಂದಿದೆ ಎಂದು ಸಾಧಿಸಿದರು. ಈ ಸಮೀಕರಣದ ಸಹಾಯದಿಂದ ಆಯಾನೀಕರಣದ ಮಟ್ಟದ ಮೇಲೆ ಒತ್ತಡದ ಪ್ರಭಾವವನ್ನು ವಿವರಿಸಿ ಅಲ್ಲಿಯವರೆಗೂ ವಿವರಿಸಲಾಗದೆ ಉಳಿದಿದ್ದ ಅನೇಕ ವ್ಯತ್ಯಯಗಳನ್ನು ಸಮರ್ಥವಾಗಿ ವಿವರಿಸಲು ಸಾಧ್ಯವಾಯಿತು. ಸರ್ ಆರ್ಥರ್ ಎಡಿಂಗ್‌ಟನ್ ನಕ್ಷತ್ರಗಳ ಮೇಲಿನ ಲೇಖನದಲ್ಲಿ ಸಹಾರ ಈ ಆಯಾನೀಕರಣ ಸಿದ್ಧಾಂತ ಖಗೋಳ ಶಾಸ್ತ್ರ ಇತಿಹಾಸದಲ್ಲಿ ಹನ್ನೆರಡನೇ ಪ್ರಮುಖ ಮೈಲಿಗಲ್ಲಾಗಿದೆ ಎಂದು ತಿಳಿಸಿದ್ದಾರೆ. ಈ ಕ್ಷೇತ್ರದಲ್ಲಿ ಮುಂದೆ ನಡೆದ ಅನೇಕ ಮಹತ್ವದ ಸಂಶೋಧನೆಗಳು ಸಹಾರ ಸಿದ್ಧಾಂತವನ್ನು ಬಳಸಿಕೊಂಡು ಮುನ್ನಡೆದಿರುವುದು ಅದರ ಪ್ರಾಮುಖ್ಯತೆಯನ್ನು ಸಾರಿ ಹೇಳುತ್ತದೆ. ಇಂತಹ ಪ್ರಮುಖ ಸಿದ್ಧಾಂತವನ್ನು ಸುಮಾರು ಆರು ತಿಂಗಳ ಅವಧಿಯಲ್ಲಿ ರೂಪಿಸಿ ಇಂಡಿಯಾದಿಂದಲೇ ಫಿಲಾಸಫಿಕಲ್ ಮ್ಯಾಗಸೈನ್‌ನಲ್ಲಿ ಪ್ರಕಟಿಸಲೋಸುಗ ಕಳುಹಿಸಲಾಯಿತು. ಹೀಗೆ ಯಾವುದೇ ಪ್ರಯೋಗ ಸೌಲಭ್ಯವಿಲ್ಲದಿದ್ದರೂ ವಿಶ್ವದ ಅಗ್ರಮಾನ್ಯರ ಗಮನ ಸೆಳೆಯುವಂತಹ ಸಂಶೋಧನೆಯನ್ನು ಮಾಡಿದ ಕೀರ್ತಿ ಸಹಾರಿಗೆ ಸಲ್ಲುತ್ತದೆ. ಅವರಿಗೆ ಈ ಸಂಶೋಧನೆಗೆ ನೊಬೆಲ್ ಪ್ರಶಸ್ತಿ ಪಡೆಯುವ ಎಲ್ಲಾ ಅರ್ಹತೆಯಿತ್ತು.

ಆದರೆ ಆ ಕಾಲಕ್ಕೆ ಖಗೋಳಶಾಸ್ತ್ರಕ್ಕೆ ನೊಬೆಲ್ ಪ್ರಶಸ್ತಿ ನೀಡುವ ಸಂಪ್ರದಾಯ ಇನ್ನೂ ರೂಢಿಗೆ ಬಂದಿಲ್ಲದ್ದರಿಂದ ಸಹಾರಿಗೆ ನೊಬೆಲ್ ಪ್ರಶಸ್ತಿ ದೊರೆಯಲಿಲ್ಲವೆಂದು ಕೆಲವು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ನೊಬೆಲ್ ಪ್ರಶಸ್ತಿ ದೊರೆಯದಿದ್ದರೂ ಸಹಾರ ಈ ಸಂಶೋಧನೆ ಅವರನ್ನು ವಿಜ್ಞಾನದಂಥ ಗೋಪುರದ ಮಣಿಮುಕುಟವಾಗಿಸಿತು. ಇಂತಹ ಮಹಾನ್ ಸಾಧಕರ ಜೀವನ–ಸಾಧನೆಗಳ ಅಧ್ಯಯನದಿಂದ ನಮ್ಮ ಯುವಜನಾಂಗ ಸಾಕಷ್ಟು ಪ್ರಭಾವಿತವಾಗಬೇಕಷ್ಟೇ ?

●

ಅಧ್ಯಾಯ ೪

ವಿಜ್ಞಾನ ಕ್ಷೇತ್ರದಲ್ಲಿ ಸುತ್ತಾಟ

"ನಿನ್ನ ಕೆಲಸದಲ್ಲಿ ನೀನು ನಿರತನಾಗಿದ್ದರೆ ಮಾನ್ಯತೆ ಖಂಡಿತ ಬರುತ್ತದೆ"

ಸಹಾ "ಅನಿಲಗಳ ಅಯಾನೀಕರಣ" ಸಿದ್ಧಾಂತವನ್ನು ಕೇವಲ ತಮ್ಮ ಆಳವಾದ ಅಧ್ಯಯನ ಸೂಕ್ಷ್ಮಗ್ರಹಣ ಶಕ್ತಿ ಮತ್ತು ಅಸಾಧಾರಣವಾದ ಬುದ್ಧಿಶಕ್ತಿಗಳಿಂದಲೇ ರೂಪಿಸಲು ಸಾಧ್ಯವಾಯಿತು. ಸಹಾ ಎಂದೂ ವಿಜ್ಞಾನವನ್ನು ಕೇವಲ ಒಂದು ಬೌದ್ಧಿಕ ಕಸರತ್ತಾಗಿ ಪರಿಗಣಿಸಿರಲಿಲ್ಲ. ತಾವು ರೂಪಿಸಿರುವ ಸಮೀಕರಣವನ್ನು ಪ್ರಾಯೋಗಿಕ ವಾಗಿ ಪರೀಕ್ಷೆಗೆ ಒಳಪಡಿಸುವ ಹಂಬಲ. ಆ ಸಮೀಕರಣಕ್ಕೆ ವಿಶ್ವದ ಮಾನ್ಯತೆ ದೊರೆತಿದ್ದರೂ ಅದರಿಂದ ಅವರಿಗೆ ತೃಪ್ತಿಯೇ ಇಲ್ಲ. ಅದು ಪ್ರಯೋಗದಿಂದ ಸಾಬೀತಾದರೆ ತಮ್ಮ ಶ್ರಮ ಸಾರ್ಥಕವೆಂಬ ಭಾವನೆ. ಭಾರತದಲ್ಲೇ ತಮ್ಮ ಈ ಸಿದ್ಧಾಂತವನ್ನು ಪ್ರಾಯೋಗಿಕ ಪರೀಕ್ಷೆಗೆ ಒಳಪಡಿಸಲು ಯಾವುದೇ ಸೌಲಭ್ಯಗಳು ಲಭ್ಯವಿಲ್ಲದೇ ಇದ್ದುದರಿಂದ ಸಹಾ ರವರು ತಮ್ಮ ವೈಜ್ಞಾನಿಕ ಸಂಶೋಧನೆಯನ್ನು ಪ್ರಾಯೋಗಿಕವಾಗಿ ಪರೀಕ್ಷಿಸಲು ವಿದೇಶಗಳಲ್ಲಿ ಪ್ರಯತ್ನಿಸಲು ಆಲೋಚಿಸಿದರು. ಇದಕ್ಕಾಗಿಯೇ ಅವರು ಯೂರೋಪ್‌ಗೆ ಹೋಗಲು ಅಪೇಕ್ಷಿಸಿದರು.

ಪ್ರೇಮ್‌ಚಂದ್‌ರಾಯ್ ಚಂದ್ ವಿದ್ಯಾರ್ಥಿವೇತನದ ಜೊತೆಗೆ ಬ್ರಹ್ಮೋ ಶೈಕ್ಷಣಿಕ ಸಮಿತಿಯು ನೀಡಿದ ಬೆಂಬಲದಿಂದ ಅವರು ಬಹಳ ದಿನಗಳಿಂದ ಬಯಸುತ್ತಿದ್ದ ಈ ಯುರೋಪ್ ಪ್ರವಾಸವನ್ನು ಕೈಗೊಳ್ಳಲು ಸಹಾಯವಾಯಿತು. ಹಡಗಿನಲ್ಲಿ ಪ್ರಯಾಣ ಮಾಡುವಾಗ ತನ್ನ ಅಚ್ಚುಮೆಚ್ಚಿನ ಪ್ರೆಸಿಡೆನ್ಸಿ ಕಾಲೇಜಿನ ಗುರುಗಳಾಗಿದ್ದ ಆಚಾರ್ಯ ಪಿ.ಸಿ. ರೇ ಯವರ ಸಾಂಗತ್ಯವೇ ಅಲ್ಲದೆ ಡಾ. ಜೀವರಾಜ ಮೆಹ್ತ, ಎಸ್.ಕೆ. ಸಿದ್ಧಾಂತ, ಬಿ.ಎಸ್. ಗುಹಾ, ಪ್ರೊ. ಕೆ.ಸಿ. ಮೆಹ್ತ ಮುಂತಾದವರ ಸಹವಾಸವು ದೊರೆತು ಅವರ ಯುರೋಪಿಯನ್ ಪ್ರವಾಸ ಒಂದು ಅತ್ಯಂತ ಸಂತೋಷದಾಯಕ ಪ್ರವಾಸವಾಗಿ ಪರಿಣಮಿಸಿತು.

ಇಂಗ್ಲೆಂಡ್‌ನಲ್ಲಿ ಸಹಾ ತನ್ನ ಸಹಪಾಠಿಗಳಾಗಿದ್ದ ಜೆ.ಎನ್. ಮುಖರ್ಜಿ, ಎಸ್.ಎಸ್. ಭಟ್ನಾಗರ್, ಜೆ.ಸಿ. ಘೋಷ್ ಮತ್ತು ಸ್ನೇಹಮಯ ದತ್ತರವರನ್ನು ಭೇಟಿಮಾಡಿದರು. ಸ್ನೇಹಮಯದತ್ತ ಸಹಾರಿಗೆ ದೊರೆಯುತ್ತಿದ್ದ ವಿದ್ಯಾರ್ಥಿ ವೇತನ ಹಾಗೂ ಇತರ ಬೆಂಬಲವನ್ನು ಗಮನಿಸಿ ಪ್ರೊ. ಫೌಲರ್ ಕೆಳಗೆ ಪ್ರಯೋಗ ನಡೆಸಲು ಸಲಹೆ ಮಾಡಿದರು. ಏಕೆಂದರೆ ಸಹಾರಿಗೆ ದೊರೆಯುತ್ತಿದ್ದ ಹಣದಲ್ಲಿ ಹೆಸರಾಂತ ಕೇಂಬ್ರಿಡ್ಜ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸ ಮಾಡುವುದು ಸಾಧ್ಯವಿರಲಿಲ್ಲ. ಹೀಗೆ ಹಣಕಾಸಿನ ಕೊರತೆ ಸಹಾರನ್ನು ಬೆಂಬಿಡದೆ ಕಾಡುತ್ತಿತ್ತು.

ಖಗೋಳ ಭೌತಶಾಸ್ತ್ರ ಮತ್ತು ವರ್ಣಪಟಲ ಶಾಸ್ತ್ರದಲ್ಲಿ ಅಪಾರ ಆಸಕ್ತಿವಹಿಸಿ ಕೆಲಸ ಮಾಡುತ್ತಿದ್ದ ಫೌಲರ್ ಸಹಾರೊಂದಿಗೆ ಕೆಲಸ ಮಾಡಲು ತುಂಬಾ ಉತ್ಸುಕರಾಗಿದ್ದರೂ ಅವರು ಸಹಾರನ್ನು ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯದ ವಿಜ್ಞಾನಿ ನರ್‌ನೆಸ್ಟರ ಬಳಿಗೆ ಹೋಗಲು ಸಲಹೆ ಮಾಡಿದರು. ಆಗ ತಾನೇ ಮೊದಲನೆ ಮಹಾಯುದ್ಧ ಕೊನೆಗೊಂಡಿತ್ತು. ಜರ್ಮನ್ನರು ಈ ಯುದ್ಧದಲ್ಲಿ ಸೋತು ಇಂಗ್ಲೀಷರು ಮತ್ತು ಅಮೆರಿಕನ್ನರ ಬಗೆಗೆ ಅತ್ಯಂತ ಕಟು ಭಾವನೆಯನ್ನು

ಹೊಂದಿದ್ದರು. ಅಂತಹ ಸಂದರ್ಭದಲ್ಲಿ ಸಹಾ ಇಂಗ್ಲೆಂಡಿನಿಂದಲೇ ನರ್‌ನೆಸ್ಟರ್‌ರನ್ನು ಸಂಪರ್ಕಿಸಿ ಅವರ ಅನುಮತಿ ಪಡೆದುಕೊಳ್ಳಲು ಯಶಸ್ವಿಯಾದರು. ಇದಲ್ಲದೆ ಇಂಗ್ಲೆಂಡಿನಲ್ಲಿದ್ದಾಗಲೇ ಅವರು ಸರ್ ಜೆ.ಜೆ. ಥಾಮ್ಸನ್‌ರನ್ನು ಭೇಟಿಮಾಡಿ ಅವರೊಂದಿಗೆ ತಮ್ಮ "ತಾಪ ಅಯಾನೀಕರಣ ಸಿದ್ಧಾಂತ"ದ ಬಗೆಗೆ ಚರ್ಚಿಸಿದರು. ಹೀಗೆ ಸಹಾ ತಮ್ಮ ಸಿದ್ಧಾಂತದ ಸ್ವಯಂ ಪರೀಕ್ಷೆಗೆ ಇಂಗ್ಲೆಂಡಿನಿಂದ ಜರ್ಮನಿಗೆ ಹೋಗಬೇಕಾಗಿ ಬಂತು.

ತಮ್ಮ ಸಿದ್ಧಾಂತವನ್ನು ಪರೀಕ್ಷೆಗೆ ಗುರಿಪಡಿಸುವ ಪ್ರಯೋಗಗಳಲ್ಲಿ ಸಹಾ ಜರ್ಮನಿಯಲ್ಲಿ ಸುಮಾರು ಒಂದು ವರ್ಷ ಕಳೆದರು. ಈ ಅವಧಿ ಸಹಾರ ಜೀವನದಲ್ಲೇ ಅತ್ಯಂತ ಫಲಪ್ರದವಾದ ಅವಧಿಯೂ ಆಗಿತ್ತು. ಭೌತ ಶಾಸ್ತ್ರದಲ್ಲಿ ಆ ಕಾಲದಲ್ಲಿ ಅತ್ಯಂತ ಹೆಸರುವಾಸಿಯಾಗಿದ್ದ ಆಲ್ಬರ್ಟ್ ಐನ್‌ಸ್ಟೈನ್, ಮ್ಯಾಕ್ಸ್ ಪ್ಲ್ಯಾಂಕ್ ಮತ್ತಿತರ ಪ್ರತಿಭಾನ್ವಿತ ವಿಜ್ಞಾನಿಗಳನ್ನು ಭೇಟಿಮಾಡಿ ಭೌತಶಾಸ್ತ್ರ, ಖಗೋಳ ಶಾಸ್ತ್ರ ಪರಮಾಣು ರಚನೆ ಮುಂತಾದವುಗಳ ಬಗೆಗೆ ಅಮೂಲ್ಯವಾದ ಚರ್ಚೆಗಳನ್ನು ನಡೆಸಲು ಸಾಧ್ಯವಾಯಿತು. ಉಪನ್ಯಾಸ ನೀಡಲು ಸಹಾರನ್ನು ಮ್ಯೂನಿಕ್‌ಗೆ ಆಹ್ವಾನಿಸಲಾಯಿತು. ಇದೇ ಅವಧಿಯಲ್ಲಿ ಸಹಾ ಬಂಗಾಳದ ಪ್ರಸಿದ್ಧ ಕವಿಯಾಗಿದ್ದ ರವೀಂದ್ರನಾಥ ಟ್ಯಾಗೂರರನ್ನು ಭೇಟಿಮಾಡಿದರು. ಟ್ಯಾಗೂರರು ಮೊದಲನೇ ಭೇಟಿಯಲ್ಲಿ ಸಹಾರಿಂದ ಪ್ರಭಾವಿತರಾಗಿ ಅವರನ್ನು ಶಾಂತಿನಿಕೇತನಕ್ಕೆ ಆಹ್ವಾನಿಸಿದರು. ಅನಂತರ ಸಹಾ ಸುಮಾರು ಒಂದು ತಿಂಗಳ ಕಾಲ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಓಡಾಡಿದರು. ಅನಂತರ ಕಲ್ಕತ್ತಾ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಮ್ಮೇಳನದಲ್ಲೂ ಪಾಲ್ಗೊಂಡರು. ಆಕ್ಸ್‌ಫರ್ಡ್‌ನಿಂದ ಅವರು ಕೇಂಬ್ರಿಡ್ಜ್‌ಗೆ ಹೋದರು. ಸರ್ ಆರ್ಥರ್ ಎಡಿಂಗ್‌ಟನ್ನರು ಸಹಾರನ್ನು ತಮ್ಮ ಮನೆಗೇ ಆಹ್ವಾನಿಸಿದರು. ಇದೇ ಸಂದರ್ಭದಲ್ಲಿ ಅವರು ಚಾರ್ಲ್ಸ್ ಡಾರ್ವಿನ್‌ರ ಮೊಮ್ಮಗ ಸಿ.ಜಿ. ಡಾರ್ವಿನ್‌ರನ್ನು

ಭೇಟಿಮಾಡಿ ಅವರೊಂದಿಗೂ ಚರ್ಚಿಸಿದರು. ಹೀಗೆ ಸಹಾರ ಯೂರೋಪಿನ ಅಲ್ಪಾವಧಿಯ ಪ್ರವಾಸ ಅತ್ಯಂತ ವೈವಿಧ್ಯಮಯವೂ ಹಾಗೂ ಬೋಧಪ್ರದವಾಗಿದ್ದುದೇ ಅಲ್ಲದೆ ಅವರು ಅಂತರಾಷ್ಟ್ರೀಯ ವಿಜ್ಞಾನ ಸಮುದಾಯದೊಂದಿಗೆ ನಿಕಟ ಬಾಂಧವ್ಯ ಬೆಳೆಸಿಕೊಳ್ಳಲು ತುಂಬಾ ಸಹಕಾರಿಯಾಗಿತ್ತು. ಸಹಾ ಎಲ್ಲಿಗೇ ಹೋದರೂ ಯಾವ ಉದ್ದೇಶಕ್ಕೇ ಹೋದರೂ ತಮ್ಮ ಕ್ಷೇತ್ರವಲ್ಲಿ ಕೆಲಸ ನಿರ್ವಹಿಸುವುದನ್ನು ಎಂದಿಗೂ ನಿಲ್ಲಿಸುತ್ತಿರಲಿಲ್ಲ. "ನಿನ್ನ ಕೆಲಸದಲ್ಲಿ ನೀನು ನಿರತನಾಗಿರು, ಮಾನ್ಯತೆ ಖಂಡಿತ ಬರುತ್ತದೆ" ಎಂಬ ಅವರ ಧ್ಯೇಯವಾಕ್ಯವನ್ನು ಅವರು ತಪ್ಪದೆ ಪರಿಪಾಲಿಸುತ್ತಿದ್ದರು. ಅವರಿಗೆ ಸರ್ ಅಸುತೋಷ್ ಮುಖರ್ಜಿಯವರಿಂದ ಕಲ್ಕತ್ತಾ ವಿಶ್ವವಿದ್ಯಾಲಯದ ಖೈರಾ ಪ್ರೊಫೆಸರ್ ಹುದ್ದೆಯನ್ನಲಂಕರಿಸಲು ತುರ್ತು ಕರೆಬಂದದ್ದರಿಂದ ಸಹಾರವರು ಅನಿವಾರ್ಯವಾಗಿ ಮಧ್ಯದಲ್ಲಿಯೇ ಜರ್ಮನಿಯಿಂದ ಸ್ವದೇಶಕ್ಕೆ ಮರಳಿಬರಬೇಕಾಯಿತು. ತನ್ನ ವಿಜ್ಞಾನದ ನೆಲೆಗೂಡಾದ ಕಲ್ಕತ್ತಾ ವಿಶ್ವವಿದ್ಯಾಲಯದ ಕರೆ ಬಂದೊಡನೆ ಸಹಾ ಸ್ವದೇಶಕ್ಕೆ ದೌಡಾಯಿಸಿದರು. ವಿದೇಶಿಯ ವಿಶ್ವವಿದ್ಯಾಲಯಗಳ ಮೆರುಗು ಆಕರ್ಷಣೆಗಳಾವುವು ಸಹಾರ ಮನಸ್ಸನ್ನು ದಿಕ್ಕೆಡಿಸಲಾಗಲಿಲ್ಲ. ತನ್ನೆಲ್ಲಾ ಪರಿಶ್ರಮ ಮತ್ತು ಪ್ರತಿಭೆಯನ್ನು ತನ್ನ ದೇಶದ ಗೌರವ ಹಾಗೂ ಪ್ರಗತಿಗೆ ಮೀಸಲಿಟ್ಟ ಅತ್ಯಂತ ಪ್ರತಿಭಾನ್ವಿತ ವಿಜ್ಞಾನಿ ಸಹಾ. ಅಸುತೋಷರು ಕಲ್ಕತ್ತಾ ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗಗಳನ್ನು ಸ್ಥಾಪಿಸಿ ಅಭಿವೃದ್ಧಿ ಪಡಿಸುವ ಮಹಾಪ್ರಯತ್ನದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ತಮ್ಮ ಅತ್ಯಮೂಲ್ಯ ಕೊಡುಗೆ ಕೊಟ್ಟವರು ಸಹಾ. ಹಾಗಾಗಿ ಅವರು ಖೈರಾ ಪ್ರೊಫೆಸರ್ ಹುದ್ದೆಯನ್ನು ಸಹಾರಿಗೆ ನೀಡಲು ಮುಂದೆ ಬಂದಾಗ ಸಹಾ ಅದನ್ನು ಅತ್ಯಂತ ಸಂತೋಷದಿಂದಲೇ ಸ್ವೀಕರಿಸಿ ಕೆಲಸ ಮಾಡಲು ಜರ್ಮನಿಯಿಂದ ಓಡೋಡಿಬಂದರು.

ಕಲ್ಕತ್ತಾಗೆ ಹಿಂದಿರುಗಿ ಬಂದು ಖೈರಾ ಪ್ರೊಫೆಸರ್ ಹುದ್ದೆಯನ್ನು ವಹಿಸಿಕೊಂಡಾಗ ಅವರು ಬಹಳ ವಿಚಿತ್ರವಾದ ಪರಿಸ್ಥಿತಿಯನ್ನೆದುರಿಸ ಬೇಕಾಗಿ ಬಂತು. ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ನೀಡಿದ ದೇಣಿಗೆಯ ನೆರವಿನಿಂದ ಈ ಪ್ರೊಫೆಸರ್ ಹುದ್ದೆ ರಚಿತವಾದದ್ದು ಬ್ರಿಟಿಷ್ ಸರ್ಕಾರಕ್ಕೆ ಸ್ವಲ್ಪವು ರುಚಿಸಲಿಲ್ಲ. ಕೇವಲ ಗುಮಾಸ್ತರನ್ನು ಮಾತ್ರ ಉತ್ಪಾದನೆ ಮಾಡುವ ಉದ್ದೇಶ ಹೊಂದಿದ್ದ ಬ್ರಿಟಿಷ್ ಸರ್ಕಾರಕ್ಕೆ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಸಂಸ್ಥೆಗಳನ್ನು ಕಟ್ಟುವ ಆಸಕ್ತಿಯಾಗಲೀ ಅಥವಾ ಶಿಕ್ಷಣ ನೀಡುವ ಆಸಕ್ತಿಯಾಗಲೀ ಇರಲಿಲ್ಲ. ಇಂತಹ ಬ್ರಿಟಿಷರ ಧೋರಣೆಯಿಂದಾಗಿ ಸರ್ ಅಸುತೋಷ್ ಮುಖರ್ಜಿಯವರ ಪ್ರಯತ್ನಗಳಿಗೆ ಸಾಕಷ್ಟು ತೊಂದರೆಯನ್ನುಂಟು ಮಾಡಿದರು. ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ವಿಸ್ತರಣೆಗೆ ಅಗತ್ಯವಾಗಿದ್ದ ಹಣವನ್ನು ಬಿಡುಗಡೆ ಮಾಡಲು ವಿಫಲವಾಯಿತು. ಅಸುತೋಷರು ಹೆಸರಾಂತ ದಾನಿಗಳು ಹಾಗೂ ರಾಷ್ಟ್ರಾಭಿಮಾನ ಉಳ್ಳವರ ಸಹಕಾರದಿಂದ ವಿಶ್ವವಿದ್ಯಾಲಯಕ್ಕೆ ಹಣ ಸಂಗ್ರಹ ಮಾಡುವುದನ್ನು ಬ್ರಿಟಿಷರು ವಿರೋಧಿಸಿದರು. ಅವರು ವಿಶ್ವವಿದ್ಯಾಲಯ ನಡೆಸುತ್ತಿದ್ದ ಶೈಕ್ಷಣಿಕ ಕೆಲಸಗಳನ್ನು ಮೆಚ್ಚಿಕೊಂಡರೂ ಅದರ ವಿಸ್ತರಣೆಗೆ ಅತ್ಯಗತ್ಯವಾಗಿ ಬೇಕಾಗಿದ್ದ ಹಣವನ್ನು ದುಂದು ವೆಚ್ಚವೆಂದು ಪರಿಗಣಿಸಿ ಆರ್ಥಿಕ, ಸಹಾಯನೀಡಲು ನಿರಾಕರಿಸಿದರು. ಅಸುತೋಷರು ಹಿಡಿದ ಕೆಲಸವನ್ನು ಬಡಪಟ್ಟಿಗೆ ಬಿಡುವ ಸ್ವಭಾವದವರಲ್ಲ. ವಿಶ್ವವಿದ್ಯಾಲಯದ ಅಭಿವೃದ್ಧಿಯನ್ನು ಒಂದು ರಾಷ್ಟ್ರಾಭಿಮಾನದ ಪ್ರಶ್ನೆಯನ್ನಾಗಿಸಿದರು. ಸರ್ ತಾರಕಾನಾಥ್‌ಪ್ಯಾಲಿಟರು ೧೩.೬೬ ಲಕ್ಷ ರೂ.ಗಳ ದೇಣಿಗೆ ನೀಡಿ ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರದ ಪೀಠಗಳನ್ನು ಪ್ರಾರಂಭಿಸಲು ಸಹಾಯಮಾಡಿದರು. ಇದಲ್ಲದೆ ಅವರು ಸ್ವಲ್ಪ ಜಮೀನನ್ನು ವಿಶ್ವವಿದ್ಯಾಲಯಕ್ಕೆ ದಾನವಾಗಿ ನೀಡಿದರು. ೧೯೧೪ ರಿಂದ ೧೯೨೧ರ ಅವಧಿಯಲ್ಲಿ ರಾಷ್ ಬಿಹಾರಿ ಘೋಶ್ ವಿವಿಧ ಕಂತುಗಳಲ್ಲಿ ೨೪$\frac{1}{2}$

ಲಕ್ಷವಷ್ಟು ಹಣವನ್ನು ವಿಶ್ವವಿದ್ಯಾಲಯಕ್ಕೆ ದೇಣಿಗೆಯಾಗಿ ನೀಡಿ ನಾಲ್ಕು ಪ್ರೊಫೆಸರ್ ಪೀಠಗಳನ್ನು ಸ್ಥಾಪಿಸಿದರು. ಇದೇ ರೀತಿ ಗುರುಪ್ರಸಾದ್ ಸಿಂಗ್ ಖೈರಾ ನೀಡಿದ ದೇಣಿಗೆಯಿಂದ ಮತ್ತೊಂದು ಪೀಠವನ್ನು ಪ್ರಾರಂಭಿಸಿ ಅದಕ್ಕೆ ಸಹಾರನ್ನು ಆಹ್ವಾನಿಸಲಾಯಿತು. ಸಹಾರವರು ಈ ಹುದ್ದೆಯನ್ನು ವಹಿಸಿಕೊಂಡಾಗಲೂ ಬ್ರಿಟಿಷ್ ಸರ್ಕಾರ ಮತ್ತು ಅಸುತೋಷರ ನಡುವಿನ ಸಮರ ಮುಂದುವರಿದಿತ್ತು. ಶಿಕ್ಷಣ ಸಚಿವರು ವಿಶ್ವವಿದ್ಯಾಲಯದ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಒಂದು ಅಪರಾಧವೆಂದೇ ಜರಿದು ಮಾತನಾಡಿದಾಗ ಅಸುತೋಷರು ಪದವಿ ಪ್ರಧಾನ ಸಮಾರಂಭದಲ್ಲಿ ತಮ್ಮನ್ನು ಸಮರ್ಥಿಸಿಕೊಂಡು ಸರ್ಕಾರದ ವರ್ತನೆಯನ್ನು ಜರಿದು ವಿಶ್ವವಿದ್ಯಾಲಯದ ಪರವಾಗಿ ಜನಾಭಿಪ್ರಾಯವನ್ನು ಮೂಡಿಸುವಲ್ಲಿ ಯಶಸ್ವಿಯಾದರು. ಆಗ ಸರ್ಕಾರ ಕೆಲವು ಷರತ್ತುಗಳನ್ನು ವಿಧಿಸಿ ವಿಶ್ವವಿದ್ಯಾಲಯಕ್ಕೆ ಹಣ ಬಿಡುಗಡೆ ಮಾಡಿತು. ಸ್ವಾತಂತ್ರ್ಯ ಪ್ರೇಮಿ ಮತ್ತು ಸ್ವಾಭಿಮಾನದ ಸಾಕಾರ ರೂಪವಾಗಿದ್ದ ಅಸುತೋಷರು ಇಂತಹ ಕೊಡುಗೆಯನ್ನು ತಿರಸ್ಕರಿಸಿದರು. "ನೀವು ಒಂದು ಕೈನಲ್ಲಿ ಹಣ ಮತ್ತೊಂದು ಕೈನಲ್ಲಿ ಗುಲಾಮತನವನ್ನು ಕೊಡಲು ಬಂದರೆ ನಾನು ಅವುಗಳನ್ನು ತಿರಸ್ಕರಿಸುತ್ತೇನೆ" ಎಂದು ಘೋಷಿಸಿದರು. "ಇಂತಹ ಅವಮಾನಕರ ಷರತ್ತುಗಳ ಬದಲಾಗಿ ನಾವು ಪ್ರತಿಮನೆಯ ಬಾಗಿಲಿಗೆ ಹೋಗಿ ಜನರ ಜವಾಬ್ದಾರಿಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟು ಅವರ ಬೆವರಿನ ಹಣದಿಂದ ವಿಶ್ವವಿದ್ಯಾಲಯ ನಡೆಸುತ್ತೇವೆ. ನಮ್ಮ ಶಿಕ್ಷಕ ಬಂಧುಗಳು ಉಪವಾಸವಿದ್ದರೂ ತಮ್ಮ ಸ್ವಾತಂತ್ರ್ಯವನ್ನೆಂದಿಗೂ ಬಿಟ್ಟುಕೊಡಲಾರರು" ಎಂದು ಗುಡುಗಿದರು.

೧೯೨೩ ರಲ್ಲಿ ಈ ಜಗಳ ಸಮರಸ್ವರೂಪವನ್ನು ತಾಳಿತು. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಭೌತಶಾಸ್ತ್ರ ವಿಭಾಗದಲ್ಲಿ ಪ್ರಯೋಗಾಲಯ ವನ್ನು ಸಜ್ಜುಗೊಳಿಸಲು "ಕ್ಷಕಿರಣ" ಉಪಕರಣ ಮುಂತಾದವುಗಳನ್ನು

ಸ್ಥಾಪಿಸಲು ಸಹಾ ಮನವಿಮಾಡಿಕೊಂಡರು. ಆದರೆ ಇಂತಹ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಅವರಿಗೆ ಈ ಹಣ ದೊರಕಲಿಲ್ಲ. ಇದೇ ಸಂದರ್ಭದಲ್ಲಿ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ರಾಮನ್‌ರೊಂದಿಗೆ ಭಿನ್ನಾಭಿಪ್ರಾಯಗಳು ತೀವ್ರಗೊಂಡವು. ಆಗ ಅಸುತೋಷರು ರಾಮನ್ ಪರ ವಹಿಸಿದ್ದರಿಂದ ನಿರಾಶೆಗೊಂಡ ಸಹಾ ಬೇರೆ ಕಡೆ ಉದ್ಯೋಗ ಹುಡುಕಲಾರಂಭಿಸಿದರು. ಆ ಕಾಲಕ್ಕಾಗಲೇ ಸಾಕಷ್ಟು ಪ್ರಖ್ಯಾತರಾಗಿದ್ದ ಸಹಾರವರಿಗೆ ಅಲಿಘರ್, ಬೆನಾರಸ್ ಮತ್ತು ಅಲಹಾಬಾದ್ ವಿಶ್ವವಿದ್ಯಾಲಯಗಳಿಂದ ಆಹ್ವಾನಗಳು ಬಂದವು. ಕೊಡೈಕೆನಾಲಿನಲ್ಲಿ ಸೌರವೀಕ್ಷಣಾಲಯವನ್ನು ಸೇರಲು ಸಹಾ ಆ ಕಾಲಕ್ಕಾಗಲೇ ನಿರಾಕರಿಸಿದ್ದರು. ಕಲ್ಕತ್ತಾದಲ್ಲಿ ಅಸಹನೀಯ ಪರಿಸ್ಥಿತಿಯಿದ್ದರು ಅವರು ವಿಶ್ವವಿದ್ಯಾಲಯವನ್ನು ಬಿಡಲು ತುಂಬಾ ನೋವಿನಿಂದ ತೀರ್ಮಾನ ತೆಗೆದುಕೊಂಡರು. ಅವರು ತಮ್ಮ ಸಂಬಳವನ್ನು ಸ್ವಲ್ಪ ಹೆಚ್ಚಿಸಿ ವಾರ್ಷಿಕವಾಗಿ ರೂ. ೧೫,೦೦೦ದಷ್ಟು ಸಂಶೋಧನಾ ಅನುದಾನವನ್ನು ಕೇಳಿದರು. ಆದರೆ ವಿಶ್ವವಿದ್ಯಾಲಯ ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸಿತಾದ್ದರಿಂದ ಅವರ ಕೋರಿಕೆಯನ್ನು ಪುರಸ್ಕರಿಸಲು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿತು. ಅಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲಿ ಸಹಾರವರು ಕಲ್ಕತ್ತಾ ವಿಶ್ವವಿದ್ಯಾಲಯವನ್ನು ತೊರೆದು ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾಗಲು ತೆರಳಿದರು. ಅಲಹಾಬಾದ್‌ನ ಈ ಹುದ್ದೆಯನ್ನು ಅವರು ಅಪೇಕ್ಷಿಸಲು ಇನ್ನು ಕೆಲವು ಕಾರಣಗಳಿದ್ದವು. ಅವರ ಹಿರಿಯ ಗೆಳೆಯರಾಗಿದ್ದ ಎ.ಸಿ. ಬ್ಯಾನರ್ಜಿ ಮತ್ತು ಎನ್.ಆರ್. ಧರ್ ರವರು ಅಲಹಾಬಾದ್‌ನಲ್ಲಿ ಕೆಲಸಮಾಡುತ್ತಿದ್ದು, ಅವರ ಸಲಹೆಗೆ ಸಹಾ ಹೆಚ್ಚು ಮಹತ್ವ ಕೊಟ್ಟರು. ಇದಲ್ಲದೆ ಅಲಹಾಬಾದ್‌ನಲ್ಲಿ ಸಹಾರವರೆ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾಗುತ್ತಿದ್ದುದರಿಂದ ಅವರು ಮತ್ತೊಬ್ಬರ ಅಧೀನದಲ್ಲಿರಬೇಕಾದ ಅಗತ್ಯವಿರಲಿಲ್ಲ. ಕಲ್ಕತ್ತಾದಲ್ಲಿ ತಮ್ಮ

ಪ್ರತಿಭೆಗೆ ಸಿಗದಿದ್ದ ಅವಕಾಶವನ್ನು ಅಲಹಾಬಾದ್‌ನಲ್ಲಿ ಅರಸುತ್ತಾ 'ಸಹಾ' ಅಲಹಾಬಾದ್ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಪ್ರೊಫೆಸರ್ ಮತ್ತು ಮುಖ್ಯಸ್ಥರಾದರು. ಅಸುತೋಷರ ಪರವಾಗಿ ಸವಭಿಪ್ರಾಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ 'ಸಹಾ'ರ ಈ ತೀರ್ಮಾನ ಟೀಕೆಗೆ ಗುರಿಯಾಯಿತು. ಆದರೂ ಸಹಾ ಅದ್ಯಾವುದನ್ನೂ ಲೆಕ್ಕಿಸದೆ ಕ್ರಿಯಾಶೀಲರಾಗಲು ಅಲಹಾಬಾದ್‌ಗೆ ತೆರಳಿದರು.

ಇವರು ಹೊಸ ಹುದ್ದೆಯನ್ನು ಸ್ವೀಕರಿಸಿದಾಗ ಭೌತಶಾಸ್ತ್ರ ಪ್ರಯೋಗಾಲಯ ಕೇವಲ ಪದವಿ ತರಗತಿಯ ವಿದ್ಯಾರ್ಥಿಗಳ ಅಗತ್ಯಗಳನ್ನು ಪೂರೈಸಬಲ್ಲ ಸಾಮರ್ಥ್ಯವನ್ನು ಪಡೆದಿತ್ತು. ಅಲ್ಲಿ ಸ್ನಾತಕೋತ್ತರ ತರಗತಿಗಳ ಅಗತ್ಯವನ್ನು ಪೂರೈಸಬಲ್ಲ ಅಥವಾ ಸ್ವತಂತ್ರ ಸಂಶೋಧನೆ ನಡೆಸಬಹುದಾದ ಪ್ರಯೋಗಾಲಯವಿರಲಿಲ್ಲ. ಸಹಾರ ಪ್ರತಿಭೆಗೆ ಸರಿಸಾಟಿಯಾದ ಸಹೋದ್ಯೋಗಿ ಉಪನ್ಯಾಸಕರ ತಂಡ ಕೂಡ ಇರಲಿಲ್ಲ. ಪ್ರಯೋಗಾಲಯದ ವರ್ಕ್‌ಶಾಪ್‌ಗೆ ವಿದ್ಯುತ್ ಸೌಲಭ್ಯ ವಿರಲಿಲ್ಲ. ಗ್ರಂಥಾಲಯದ ಆಧುನೀಕರಣ ಅತ್ಯಂತ ತುರ್ತಾಗಿ ಆಗಬೇಕಾಗಿತ್ತು. ಆದರೂ ಉತ್ತರ ಭಾರತದ ಅನೇಕ ಪ್ರತಿಭಾನ್ವಿತ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಮುಗಿಬೀಳುತ್ತಿದ್ದರು. ವಿಶ್ವವಿದ್ಯಾಲಯದ ಅಧಿಕಾರಿಗಳು ಹಾಗು ಸಾರ್ವಜನಿಕ ಮುಖಂಡರು ತಮ್ಮ ವಿಶ್ವವಿದ್ಯಾಲಯವನ್ನು ಉತ್ತಮ ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸುವ ಹಂಬಲವುಳ್ಳವರಾಗಿದ್ದರು.

ಪ್ರಾರಂಭದ ಕೆಲವು ವರ್ಷಗಳಲ್ಲಿ ಸಹಾ ಇಲಾಖೆಯನ್ನು ಪುನರ್‌ವ್ಯವಸ್ಥೆಗೊಳಿಸುವುದರಲ್ಲಿ ಮಗ್ನರಾದರು. ಅತ್ಯಂತ ಶ್ರದ್ಧೆ ಹಾಗೂ ಆಸಕ್ತಿಯಿಂದ ತರಗತಿಗಳನ್ನು ನಡೆಸಿದರು. ಅತ್ಯಂತ ಪ್ರತಿಭಾನ್ವಿತರಾದ ವಿದ್ಯಾರ್ಥಿಗಳ ಒಂದು ತಂಡವನ್ನು ಕಟ್ಟಲು ಶ್ರಮಿಸಿದರು. ತಮ್ಮ ಉಪನ್ಯಾಸಗಳನ್ನು ಅತ್ಯಂತ ವ್ಯವಸ್ಥಿತವಾಗಿ ಹಾಗೂ ಜಾಗರೂಕತೆಯಿಂದ ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ ಆಕರ್ಷಕ ಉಪನ್ಯಾಸಗಳನ್ನು ನೀಡ

ಲಾರಂಭಿಸಿದರು. ತಮ್ಮ ಉಪನ್ಯಾಸಗಳಿಗೆ ಪೂರಕವಾಗಿ ಸ್ಲೈಡ್‌ಗಳನ್ನು ಮತ್ತು ಪ್ರದರ್ಶಕ ಪ್ರಯೋಗಗಳನ್ನು ಬಳಸಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳಲ್ಲಿನ ಅತ್ಯುತ್ತಮ ಪ್ರತಿಭೆಗಳನ್ನು ಗುರುತಿಸಿ ಅವು ಅತ್ಯಂತ ಸಮರ್ಥವಾಗಿ ಅರಳುವಂತೆ ಮಾಡಲು ಶ್ರಮಿಸುತ್ತಿದ್ದರು. ಎಸ್.ಎನ್. ಬೋಸರು ಢಾಕಾದಲ್ಲಿ ಮಾಡುತ್ತಿದ್ದ ಕೆಲಸವನ್ನೇ ಸಹಾರವರು ಅಲಹಾಬಾದ್‌ನಲ್ಲಿ ಮಾಡಲಾರಂಭಿಸಿದರು. ಹೀಗೆ ಪದವಿ ಮತ್ತು ಸ್ನಾತಕೋತ್ತರ ತರಗತಿಗಳಿಗೆ ಶಾಖ, ದ್ರವ್ಯ, ಚಲನ ಸಿದ್ಧಾಂತ ಸಂಖ್ಯಾ ಯಂತ್ರವಿಜ್ಞಾನ ಶಾಸ್ತ್ರ ಮುಂತಾದವುಗಳನ್ನು ಬೋಧಿಸುವ ಸಂದರ್ಭದಲ್ಲಿ "ಶಾಖ" ದ ಪಠ್ಯ ಪುಸ್ತಕವನ್ನು ಬಿ.ಎನ್. ಶ್ರೀವಾತ್ಸವರ ಸಹಯೋಗದೊಂದಿಗೆ ರಚಿಸಿ ೧೯೩೧ರಲ್ಲಿ ಪ್ರಕಟಿಸಿದರು. ಅದಕ್ಕೆ ಸರ್ ಸಿ.ವಿ. ರಾಮನ್‌ರು ಉತ್ತಮ ಮುನ್ನುಡಿ ಬರೆದರು. ಈ ಪುಸ್ತಕವನ್ನು ಅಭಿವೃದ್ಧಿಪಡಿಸಿ ಕೆಲವೇ ವರ್ಷಗಳಲ್ಲಿ ಅನೇಕ ಆವೃತ್ತಿಗಳನ್ನು ಹೊರತರಲಾಯಿತು. ವಿದ್ಯಾರ್ಥಿಗಳ ಅಗತ್ಯವನ್ನು ಮನಗಂಡ ಸಹಾ ಇಂತಹ ಒಂದು ಉತ್ತಮ ಪಠ್ಯಪುಸ್ತಕವನ್ನು ಬರೆದರು.

ಅಲಹಾಬಾದ್‌ನಲ್ಲಿ ಸಂಶೋಧನಾ ವಾತಾವರಣವೇ ಇರಲಿಲ್ಲ. ಇಂತಹ ಸ್ಥಳದಲ್ಲಿ ಸಂಶೋಧನೆಯನ್ನು ಪ್ರಾರಂಭಿಸುವುದು ಸುಲಭದ ಮಾತಾಗಿರಲಿಲ್ಲ. ಗ್ರಂಥಾಲಯ ಮತ್ತು ವರ್ಕ್‌ಷಾಪ್‌ನ ಸ್ಥಿತಿಯನ್ನು ಉತ್ತಮಪಡಿಸಲು ಸಹಾರ ಪ್ರಯತ್ನಗಳಿಗೆ ತೀವ್ರ ಪ್ರತಿರೋಧವಿತ್ತು. ಅವರು ಗ್ರಂಥಾಲಯವನ್ನು ಉತ್ತಮಪಡಿಸಲು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಯನ್ನು ಸಂಪರ್ಕಿಸಿದಾಗ ಅವರು "ನೀವು ಗ್ರಂಥಾಲಯದಲ್ಲಿನ ಎಲ್ಲಾ ಪುಸ್ತಕಗಳನ್ನು ಓದಿದ್ದೀರಾ? ಇಲ್ಲದಿದ್ದರೆ ಇನ್ನಷ್ಟು ಪುಸ್ತಕಗಳನ್ನು ಯಾಕೆ ಇಟ್ಟುಕೊಳ್ಳುತ್ತೀರಾ?" ಎಂದು ಪ್ರಶ್ನಿಸಿದರು. ಇಂತಹ ಮನೋಭಾವವುಳ್ಳವರನ್ನು ನಿಭಾಯಿಸಿಕೊಂಡು ಸಹಾ ಅಲಹಾಬಾದ್‌ನಲ್ಲಿ ಸಂಶೋಧನೆಗೆ ಕೈ ಹಚ್ಚಬೇಕಾಗಿತ್ತು. ಅಲಹಾಬಾದ್‌ನಲ್ಲಿ ಬೋಧನಾ ಹೊರೆ ವಿಪರೀತವಾಗಿದ್ದು ಅವರು

ಬೇಸಿಗೆ ರಜೆಯಲ್ಲಿ ಮಾತ್ರ ಬೇರೆ ಕೆಲಸಗಳಲ್ಲಿ ಮಗ್ನರಾಗಲು ಅವಕಾಶವಿರುತ್ತಿತ್ತು. ಉಳಿದ ಸಂದರ್ಭವಲ್ಲಿ ಅವರ ಎಲ್ಲಾ ವೇಳೆಯನ್ನು ಬೋಧನಾ ಕೆಲಸ ನುಂಗಿಹಾಕುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಅವರ ನೆರವಿಗೆ ಬಂದ ಎವಿಂಗ್ ಕ್ರಿಶ್ಚಿಯನ್ ಕಾಲೇಜಿನ ಉಪನ್ಯಾಸಕರಾಗಿದ್ದ ಎನ್.ಕೆ. ಸುರ್ ಅವರೊಂದಿಗೆ ಸೇರಿಕೊಂಡು ಸಹಾ ಅಪೂರ್ಣವಾಗಿದ್ದ "ತಾಪ ಅಯಾನೀಕರಣ"ದ ಪ್ರಾಯೋಗಿಕ ಪರೀಕ್ಷೆಯನ್ನು ಮಾಡಲು ಸಜ್ಜಾದರು. ಬೇಸಿಗೆಯ ರಜೆಯಲ್ಲಿ ಶಾಖ ೪೭° ಸಿ. ನಷ್ಟಿರುವಾಗ ಪ್ರಯೋಗಾಲಯದ ಉಬ್ಬೆಯಲ್ಲಿ ಬೇಯುತ್ತಾ ಅವರು ಸಂಶೋಧನಾ ಕೆಲಸದಲ್ಲಿ ಮಗ್ನರಾಗಬೇಕಾಗುತ್ತಿತ್ತು. ಸಹಾ ಸಹೋದ್ಯೋಗಿಗಳಾಗಿದ್ದ ಪಿ.ಕೆ. ಕಿಚ್ಲು, ಡಿ.ಎಸ್. ಕೋಠಾರಿ, ಕೆ. ಮಜುಂದಾರ್, ಎನ್.ಕೆ. ಸುರ್ ಮುಂತಾದವರು ಉರಿಬೇಸಿಗೆಯಲ್ಲೂ ಧೃತಿಗೆಡದೆ ಏಕಾಗ್ರತೆಯಿಂದ ಸಂಶೋಧನೆಯಲ್ಲಿ ನಿರತರಾಗಿ ದುಡಿಯಲಾರಂಭಿಸಿದರು. ಇಂತಹ ಪ್ರಯತ್ನಗಳಿಂದಾಗಿ ಅಲಹಾಬಾದ್ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗ ಉತ್ಸಾಹ ಮತ್ತು ಜೀವಕಳೆಯಿಂದ ತುಂಬಿ ತುಳುಕುವಂತಾಯಿತು. ಇವರೆಲ್ಲರ ಶ್ರಮದ ಫಲವಾಗಿ ಕ್ರಮೇಣ ಸಂಶೋಧನಾ ಪ್ರಬಂಧಗಳು ಇಲ್ಲಿಂದಲೂ ಹೊರಬರಲಾರಂಭಿಸಿದವು. ಇವರ ಕೆಲಸಗಳಿಗೆ ಹೊರಗಿನಿಂದಲೂ ಮಾನ್ಯತೆ ದೊರೆಯಲಾರಂಭಿಸಿತು. ೧೯೨೬ ರಲ್ಲಿ ಸಹಾ ಭಾರತೀಯ ವಿಜ್ಞಾನ ಕಾಂಗ್ರೆಸ್‌ನ ಭೌತಶಾಸ್ತ್ರ ಮತ್ತು ಗಣಿತ ವಿಭಾಗದ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದರು.

ಸಹಾರವರು ಅಲಹಾಬಾದ್‌ನಲ್ಲಿ ಕೆಲಸ ಮಾಡುತ್ತಿರುವಾಗಲೇ ಕೆಲವೊಂದು ಅನುಕೂಲಕರ ಬೆಳವಣಿಗೆಗಳಾದವು. ೧೯೨೭ ರಲ್ಲಿ ಸಹಾರನ್ನು ಲಂಡನ್ನಿನ ರಾಯಲ್ ಸೊಸೈಟಿಯ ಫೆಲೋ ಆಗಿ ಆಯ್ಕೆ ಮಾಡಲಾಯಿತು. ಅದೇ ವರ್ಷ ಇಟಲಿಯ ಸರ್ಕಾರ ಅವರನ್ನು "ವೋಲ್ಟಾ" ಶತಮಾನೋತ್ಸವ ಆಚರಣೆಯಲ್ಲಿ ಭಾಗವಹಿಸಲು ಆಹ್ವಾನಿಸಿತು. ರಾಯಲ್ ಸೊಸೈಟಿಯ ಸಭೆಯಲ್ಲಿ ಪಾಲ್ಗೊಳ್ಳಲು

ಲಂಡನ್‌ಗೆ ಹೋಗಿ ಬರುವಾಗ 'ಸಹಾ' ಇಟಲಿಯ "ಲೇಕ್ ಕೋಮಾಲ"ಗೆ ತೆರಳಿ ಶತಮಾನೋತ್ಸವ ಆಚರಣೆಯಲ್ಲಿ ಪಾಲ್ಗೊಂಡರು. ಪ್ರತಿಭಾವಂತ ಇಟಾಲಿಯನ್ ವಿಜ್ಞಾನಿಯ ಸ್ಮರಣಾರ್ಥ ನಡೆದಿದ್ದ ಈ ಶತಮಾನೋತ್ಸವದ ವಿಶೇಷ ಕಾರ್ಯಕ್ರಮದಲ್ಲಿ ಪ್ರಪಂಚದ ವಿವಿಧ ಭಾಗಗಳಿಂದ ಪ್ರಖ್ಯಾತ ಭೌತಶಾಸ್ತ್ರಜ್ಞರು ವಿದ್ಯುತ್ ತಂತ್ರಜ್ಞರು ಭಾಗವಹಿಸಿದ್ದರು. ಭಾರತದಿಂದ ಅನಿಲ್‌ಕುಮಾರ್ ದಾಸ್ ಮತ್ತು ಶ್ರೀಮತಿ ಡಿ.ಎಂ. ಬೋಸ್‌ರವರು ಅಧಿಕೃತ ಪ್ರತಿನಿಧಿಗಳಾಗಿ ಸುಮಾರು ಒಂದುವಾರ ಕಾಲನಡೆದ ಈ ವಿಜ್ಞಾನಿ ಉತ್ಸವದಲ್ಲಿ ಪಾಲ್ಗೊಂಡರು. ಸ್ವತಃ ಮುಸಲೋನಿ ಎಲ್ಲಾ ವಿಜ್ಞಾನಿಗಳನ್ನು ಸಮಾರಂಭಕ್ಕೆ ಸ್ವಾಗತಿಸಿ ಔತಣ ನೀಡಿದನು. ಇದೇ ಪ್ರವಾಸದಲ್ಲಿ 'ಸಹಾ' ಬರ್ಲಿನ್ ಮತ್ತು ಕೊಪನ್ ಹೇಗನ್‌ಗೂ ಭೇಟಿ ನೀಡಿದರು. ಅದೇ ಸಂದರ್ಭದಲ್ಲಿ ಕೊಪನ್ ಹೇಗನ್‌ಗೆ ಭೇಟಿನೀಡಿದ್ದ ಬರ್ಕಲಿಯ ಈ.ಬಿ. ಲಾರೆನ್ಸ್‌ರನ್ನೂ ಭೇಟಿಮಾಡಿದರು. ಪ್ರವಾಸದಿಂದ ಹಿಂದಿರುಗುವಾಗ ನಾರ್ವೆ ದೇಶದ "ರಿನ್‌ಗೆಬು"ಗೆ ಹೊರಟಿದ್ದ ಓಸ್ಲೋ ವಿಶ್ವವಿದ್ಯಾಲಯದ ಪ್ರೊ ಎಲ್. ವೇಗಾರ್ಡ್ ನೇತೃತ್ವದ ಸೂರ್ಯಗ್ರಹಣ ಅಧ್ಯಯನ ತಂಡವನ್ನು ಸೇರಿಕೊಂಡರು. ಸೂರ್ಯಗ್ರಹಣ ಅಧ್ಯಯನ ತಂಡದ ಪ್ರವಾಸವನ್ನು ಕುರಿತು ಬಂಗಾಳಿ ವೃತ್ತಪತ್ರಿಕೆಗಳಿಗೆ ಒಂದು ಲೇಖನವನ್ನು ಬರೆದರು. ಈ ಲೇಖನವನ್ನು ಇಂದಿಗೂ ಜನಪ್ರಿಯ ವಿಜ್ಞಾನದ ಮಾದರಿ ಲೇಖನವೆಂದು ಪರಿಗಣಿಸಲಾಗಿದೆ. ಈ ಬೆಳವಣಿಗೆಗಳು ಸಹಾರ ಸ್ಥಾನಮಾನಗಳನ್ನು ಸರ್ಕಾರದ ದೃಷ್ಟಿಯಲ್ಲಿ ಎತ್ತರಕ್ಕೊಯ್ದವು. ಇದರಿಂದ ಅವರ ಸಂಶೋಧನಾ ಪ್ರಯತ್ನಗಳಿಗೆ ತುಂಬಾ ಸಹಾಯವಾಯಿತು. ಸಂಯುಕ್ತ ಪ್ರಾಂತ್ಯಗಳ ಸರ್ಕಾರದ ಸರ್ ವಿಲಿಯಂ ಮಾರಿಸ್ 'ಸಹಾ'ರನ್ನು ಅಭಿನಂದಿಸಿದ್ದೇ ಅಲ್ಲದೆ ವಾರ್ಷಿಕ ಐದು ಸಹಸ್ರ ರೂ. ಗಳ ಸಂಶೋಧನಾ ಅನುದಾನವನ್ನು ವ್ಯವಸ್ಥೆ ಮಾಡಿದರು. ಆ ಕಾಲಕ್ಕೆ ಇದು ಸಾಕಷ್ಟು ದೊಡ್ಡ ಮೊತ್ತವೇ ಆಗಿತ್ತು.

ಇದರಿಂದ ಸಹಾರ ಸಂಶೋಧನೆಗೆ ಇದ್ದ ಆರ್ಥಿಕ ಅಡಚಣೆ ಸ್ವಲ್ಪಮಟ್ಟಿಗೆ ನಿವಾರಣೆಯಾಯಿತು.

ಅಲಹಾಬಾದ್‌ನಲ್ಲಿ ಅವರು ಈಗ ಸ್ವಲ್ಪ ನಿರಾಳವಾಗಿ ಸಂಶೋಧನೆ ನಡೆಸಲು ಅನುಕೂಲವಾಯಿತು. ಅವರು ತಾಪ ಆಯಾನೀಕರಣ ಮತ್ತು ಖಗೋಳ ಶಾಸ್ತ್ರವಲ್ಲಿ ತಮ್ಮ ಸಂಶೋಧನೆಯನ್ನು ಮುಂದುವರಿಸಿದರು. ಇದಲ್ಲದೆ ಭೌತಶಾಸ್ತ್ರದ ಬೇರೆಬೇರೆ ವಿಭಾಗಗಳಾದ ಅಣುಪರಮಾಣು ರೋಹಿತ ಶಾಸ್ತ್ರ, ಋಣವಿದ್ಯುತೀಯ ಮೂಲವಸ್ತುಗಳ ಎಲೆಕ್ಟ್ರಾನ್ ಆಕರ್ಷಣೆ, ಅತಿ ತಾಪದಲ್ಲಿ ಆಯಾನೀಕರಣ, ಅಯಾನುಗೋಲದಲ್ಲಿ ರೇಡಿಯೋ ತರಂಗಗಳ ಪ್ರಸರಣ, ಎತ್ತರ ಹವಾಮಾನದ ಭೌತಶಾಸ್ತ್ರ ಮುಂತಾದವುಗಳ ಬಗೆಗೆ ಸಂಶೋಧನೆಗಳನ್ನು ನಡೆಸಲು ವ್ಯವಸ್ಥೆ ಮಾಡಿದರು. ಸಂಶೋಧನೆ ವಿಷಯಗಳನ್ನು ಆಯ್ಕೆಮಾಡಿಕೊಳ್ಳುವಾಗ ಅವರು ಸೈದ್ಧಾಂತಿಕ ಮತ್ತು ಪ್ರಯೋಜಕಗಳ ನಡುವೆ ಸಮತೋಲನವಿರುವಂತೆ ಎಚ್ಚರಿಕೆ ವಹಿಸಿದರು. ಅಲಹಾಬಾದ್‌ನಲ್ಲಿ ಅನೇಕ ಜನರು ಸಹಾರೊಂದಿಗೆ ಸಂಯುಕ್ತವಾಗಿ ಹಾಗೂ ಸ್ವತಂತ್ರವಾಗಿ ಸಂಶೋಧನೆಗಳನ್ನು ನಡೆಸಿ ಪ್ರಖ್ಯಾತರಾದರು. ಈ ರೀತಿ ಪ್ರಸಿದ್ಧಿಗೆ ಬಂದ ವಿಜ್ಞಾನಿಗಳ ಒಂದು ದೊಡ್ಡ ಪಟ್ಟಿಯೇ ಇದೆ. ಅವರುಗಳಲ್ಲಿ ಪ್ರಮುಖವಾಗಿ ಆರ್.ಕೆ. ಸುರ್, ಜಿ.ಆರ್. ತೋಪ್ನಿವಾಲಾ, ಆರ್.ಸಿ. ಮಜುಂದಾರ್, ಆತ್ಮರಾಮ್, ಎ.ಕೆ. ದತ್ತ ಆರ್.ಸಿ. ಶರ್ಮ, ಎ.ಎನ್. ಟ್ಯಾಂಡನ್, ಕೆ.ಬಿ. ಮಾಥುರ್, ಎನ್.ಕೆ. ಸಹಾ, ಬಿ.ಎಸ್. ದುಬೆ, ಬಿ.ಎನ್. ಶ್ರೀವಾತ್ಸವ, ಬಿ.ಡಿ. ನಾಗಚೌದರಿ ಮುಂತಾದವರನ್ನು ಹೆಸರಿಸಬಹುದು. ಸಹಾರು ಸಂಶೋಧನೆಗೆ ಗಮನಕೊಟ್ಟರೂ ಬೋಧನೆಯನ್ನು ಅಷ್ಟೇ ಆಸಕ್ತಿಯಿಂದ ಮುಂದುವರಿಸಿದರು. ವಿದ್ಯಾರ್ಥಿಗಳ ಆಪ್ತಮಿತ್ರರಾಗಿ ಅವರ ಪ್ರತಿಭೆಗಳನ್ನು ಗುರ್ತಿಸಿ ಸೂಕ್ತ ಸಲಹೆ ಮಾರ್ಗದರ್ಶನ ಮಾಡಿ ಅವರು ಜೀವನದಲ್ಲಿ ಅತ್ಯುತ್ತಮ ಸಾಧನೆಗಳನ್ನು ಮಾಡಲು ಉನ್ನತ ಹುದ್ದೆಗಳನ್ನು ಪಡೆದುಕೊಳ್ಳಲು ಸಹಾಯಮಾಡಿದರು. ಈ ಎಲ್ಲಾ

ಕ್ರಿಯೆಗಳಿಂದ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಖ್ಯಾತಿ ಹೆಚ್ಚಾಗಿ ದೇಶದ ಮೂಲೆ ಮೂಲೆಗಳಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ಅನೇಕ ವಿದ್ವಾಂಸರು ಇಲ್ಲಿಗೆ ಬಂದು ಕೆಲಸ ಮಾಡಲಾರಂಭಿಸಿದರು. ಸಹಾರ ಶಿಷ್ಯಗಣ ಕೇವಲ ವಿಜ್ಞಾನ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅವರ ಅನೇಕ ವಿದ್ಯಾರ್ಥಿಗಳು ರೈಲ್ವೆಯಲ್ಲಿ, ಸಾರ್ವಜನಿಕ ಸೇವೆಯಲ್ಲಿ, ಪೊಲೀಸ್ ಸೇವೆಯಲ್ಲಿ ಪವನಶಾಸ್ತ್ರ ಇಲಾಖೆಯಲ್ಲಿ ವಿವಿಧ ಮಂತ್ರಾಲಯಗಳಲ್ಲಿ ಉನ್ನತ ಹುದ್ದೆಗಳನ್ನು ಪಡೆದರು. ಸಹಾರಿಗೆ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರ್ತಿಸುವ ವಿಶೇಷ ಸಾಮರ್ಥ್ಯವಿತ್ತು. ಅವರು ಯಾವ ಕ್ಷೇತ್ರದಲ್ಲಿ ಪ್ರತಿಭೆಯನ್ನು ಹೊಂದಿರುತ್ತಿದ್ದರೋ ಆ ಕ್ಷೇತ್ರದಲ್ಲಿ ಅವರಿಗೆ ಕೆಲಸಮಾಡಲು ಸಹಾ ಮಾರ್ಗದರ್ಶನ ಮಾಡುತ್ತಿದ್ದರು. ತನ್ನೆಲ್ಲಾ ವಿದ್ಯಾರ್ಥಿಗಳು ತನ್ನಂತೆಯೇ ವಿಜ್ಞಾನ ಕ್ಷೇತ್ರದಲ್ಲೇ ಕೆಲಸ ಮಾಡಬೇಕೆಂಬ ಸಂಕುಚಿತ ನಿಲುವು ಸಹಾರದಾಗಿರಲಿಲ್ಲ. ಬೇರೆ ಬೇರೆ ಕ್ಷೇತ್ರಗಳು ವಿಜ್ಞಾನದಷ್ಟೇ ಪ್ರಮುಖವಾದವು. ಅವುಗಳಲ್ಲೂ ಅತ್ಯಂತ ಪ್ರತಿಭಾನ್ವಿತರು ಕೆಲಸ ಮಾಡುವಂತಾಗಲೆಂಬ ಉದಾರ ಮನೋಭಾವ ಸಹಾರದು. ಸಹಾರ ಅನೇಕ ವಿದ್ಯಾರ್ಥಿಗಳು ವೃತ್ತಿಗೆ ಸಂಬಂಧಿಸಿದಂತೆ ಇವರ ಮಾರ್ಗದರ್ಶನದಂತೆ ನಡೆಯುತ್ತಿದ್ದರು. ವೃತ್ತಿಪ್ರಾರಂಭಿಸಿದ ನಂತರವೂ ಅವರು ಸಹಾರೊಂದಿಗೆ ಸತತವಾದ ಸಂಪರ್ಕವಿರಿಸಿಕೊಳ್ಳುತ್ತಿದ್ದರು. ಅಂತಹ ಸ್ನೇಹಜೀವಿ ಸಹಾ. ಅವರೆಂದೂ ತಮ್ಮ ಹಿಂದಿನ ಬಡತನದ ದಿನಗಳನ್ನು ಮರೆಯಲಿಲ್ಲ. ಅವರ ಮನೆ ಬಡವಿದ್ಯಾರ್ಥಿಗಳಿಗೆ ತೆರೆದ ಮನೆಯಂತಿತ್ತು. ಹೀಗಾಗಿ ಅವರ ಮನೆಯ ತುಂಬಾ ಸದಾ ಹಳ್ಳಿಯಿಂದ ಬಂದ ವಿದ್ಯಾರ್ಥಿಗಳು ತುಂಬಿರುತ್ತಿದ್ದರು. ಅವರನ್ನೂ ಸದಾ ತಮ್ಮ ಸಹೋದರರಂತೆ ಕಾಣುತ್ತಿದ್ದರು. ಇವರ ಈ ಸ್ವಭಾವದಲ್ಲಿ ತುಂಬಾ ಸಹಕರಿಸುತ್ತಿದ್ದವರು ಅವರ ಸಹಧರ್ಮಿಣಿಯಾದ ರಾಧ ರಾಣಿಯವರು. ಅವರು ಸ್ವಲ್ಪವೂ ಬೇಸರ ಮಾಡಿಕೊಳ್ಳದೆ ಸಹಾರ ವಿದ್ಯಾರ್ಥಿಗಳನ್ನು

ಅವರಷ್ಟೇ ಆತ್ಮೀಯತೆಯಿಂದ ನೋಡಿಕೊಳ್ಳುತ್ತಿದ್ದರು. ಅವರ "ವಿಜ್ಞಾನ ವಿಲ್ಲಾ"ದಲ್ಲಿ ಸಾಧ್ಯವಾದಷ್ಟು ಸೌಕರ್ಯಗಳನ್ನು ಒದಗಿಸಿ ಅವರ ವಿದ್ಯಾಭ್ಯಾಸಕ್ಕೆ ತುಂಬಾ ನೆರವಾಗುತ್ತಿದ್ದರು. ಕಿಚ್ಲು, ಕೊಥಾರಿ, ಆರ್.ಸಿ. ಮಜುಂದಾರ್ ಮುಂತಾದ ಸಂಶೋಧನಾ ಕಾರ್ಯಕರ್ತರು ಸಹಾರ ಮನೆಯಲ್ಲಿ ಕೆಲವು ಕಾಲ ವಾಸಮಾಡುತ್ತಿದ್ದರು. ಹೀಗಾಗಿ ಸಹಾರಿಗೆ ಮನೆ, ಪ್ರಯೋಗಾಲಯ ವಿಶ್ವವಿದ್ಯಾಲಯ ಎಲ್ಲಾ ಕಡೆಯೂ ಬಹುಪಾಲು ವಿಜ್ಞಾನದ ವಾತಾವರಣವೇ ಇರುವಂತಾಯಿತು.

ಒಮ್ಮೆ ಆತ್ಮಚರಣ್ ಎಂಬ ಅವರ ವಿದ್ಯಾರ್ಥಿ ಪ್ರಯೋಗಾಲಯದ ತರಗತಿಗಳಿಗೆ ಬರುವುದನ್ನು ನಿಲ್ಲಿಸಿದ. ಸಹಾ ಅವನನ್ನು ಕರೆಕಳುಹಿಸಿ ಆತ್ಮೀಯವಾಗಿ ವಿಚಾರಿಸಿದಾಗ ಅವನು ತಾನೂ ಸಿವಿಲ್ ಸರ್ವಿಸ್ ಪರೀಕ್ಷೆಗೆ ಓದುತ್ತಿರುವುದರಿಂದ ಈ ರೀತಿ ಮಾಡುತ್ತಿರುವುದಾಗಿ ತಿಳಿಸಿದ. ಆಗ ಸಹಾ ಅವನ ಮೇಲೆ ಕೋಪಗೊಳ್ಳದೆ ನೀನು ಮಾಡುತ್ತಿರುವುದು ಸರಿ. ನನಗೆ ಅತ್ಯಂತ ಇಷ್ಟವಾಗಿರುವ ಈ ಕೆಲಸವನ್ನು ಪಡೆಯಲು ಅತ್ಯಂತ ಶ್ರದ್ಧೆಯಿಂದ ಓದು ಎಂದು ಹೇಳಿ ಹಾಜರಿ ಪುಸ್ತಕದಿಂದ ಅವನ ಹೆಸರನ್ನು ತೆಗೆಸಲು ಸಲಹೆಮಾಡಿದರು. ಆತ್ಮಚರಣ್ ಅವರ ಸಲಹೆಯನ್ನು ಪಾಲಿಸಿ ಪರೀಕ್ಷೆಯಲ್ಲಿ ಯಶಸ್ವಿಯಾದ ಮಾತ್ರವಲ್ಲದೆ ಮುಂದೆ ಸಾರ್ವಜನಿಕ ಸೇವಾವಲಯದಲ್ಲಿ ಅತ್ಯಂತ ಪ್ರಸಿದ್ಧನಾದ ಅಧಿಕಾರಿಯಾದ. ಮುಂದೆ ಮಹಾತ್ಮಗಾಂಧಿ ಕೊಲೆಯ ವಿಚಾರಣಾ ಆಯೋಗದ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿ ಪ್ರಖ್ಯಾತಿಯನ್ನು ಪಡೆದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳು ದಾರಿ ತಪ್ಪುತ್ತಿದ್ದಾರೆಂದು ಸಹಾಗೆ ಅನ್ನಿಸಿದಾಗ ಅವರು ಅತ್ಯಂತ ನಿರ್ದಾಕ್ಷಿಣ್ಯರಾಗಿಯೂ ವರ್ತಿಸುತ್ತಿದ್ದರು. ಒಮ್ಮೆ ಬಿ.ಡಿ. ನಾಗಚೌಧುರಿಯವರನ್ನು ಪೊಲೀಸರು ಸ್ವಾತಂತ್ರ್ಯ ಚಳುವಳಿಯ ಕ್ರಾಂತಿಕಾರಿಗಳೊಂದಿಗೆ ಸಂಪರ್ಕವಿರಿಸಿಕೊಂಡಿದ್ದಾರೆಂಬ ಅನುಮಾನದ ಮೇಲೆ ಹಾಸ್ಟಲ್ ಕೊಠಡಿಯನ್ನು ತಪಾಸಣೆ ಮಾಡಿ ಕೆಲವು ದಿನಗಳ ಕಾಲ ಸ್ಥಾನಬದ್ಧತೆಯಲ್ಲಿಟ್ಟರು. ಈ ಸುದ್ದಿಯನ್ನು ತಿಳಿದ

ಸಹಾ ತಮ್ಮ ಕಾರನ್ನು ಕಳುಹಿಸಿ ತಕ್ಷಣ ನಾಗಚೌಧರಿಯವರನ್ನು ಹಿಡಿತರಿಸಿದರು. ನಾಗಚೌಧರಿಯವರ ಈ ಕೆಲಸ ಸಹಾರಿಗೆ ವಿಪರೀತ ಕೋಪ ತರಿಸಿತ್ತು. ಆದರು ಚೌಧುರಿಯವರಿಗೆ ಚಳುವಳಿಗಿಂತ ಕರ್ತವ್ಯ ಪಾಲನೆ ಮುಖ್ಯವೆಂಬುದನ್ನು ಅದರಿಂದಲೂ ದೇಶದ ಕೀರ್ತಿಯನ್ನು ಹೆಚ್ಚಿಸಬಹುದೆಂದು ಮನವರಿಕೆ ಮಾಡಿಕೊಟ್ಟರು. ಈ ಘಟನೆಯ ನಂತರ ಸುಮಾರು ಮೂರು ತಿಂಗಳ ಕಾಲ ನಾಗಚೌಧರಿಯವರು ಸಹಾರ ಗೃಹ ಬಂಧನದಲ್ಲೇ ಇರಬೇಕಾಯಿತು. ತಮ್ಮ ಅಚ್ಚುಮೆಚ್ಚಿನ ವಿದ್ಯಾರ್ಥಿಗಳ ಬಗೆಗೆ ಸಹಾ ಇಂತಹ ಕಾಳಜಿಯನ್ನು ತೆಗೆದುಕೊಳ್ಳುತ್ತಿದ್ದರು.

೧೯೨೮ ರಿಂದ ೩೮ರವರೆಗಿನ ಅವಧಿಯನ್ನು ಸಹಾರ ತಮ್ಮ ವೈಜ್ಞಾನಿಕ ಜೀವನದ ಅತ್ಯಂತ ಉತ್ಪಾದಕ ಅವಧಿಯೆಂದು ಹೇಳಬಹುದು. ಈ ಅವಧಿಯಲ್ಲಿ ಯಾವುದೇ ವಿದ್ಯಾರ್ಥಿ ಸ್ವತಂತ್ರ ಆಲೋಚನೆ ಮತ್ತು ಸಂಶೋಧನಾ ಸಾಮರ್ಥ್ಯವನ್ನು ಪ್ರದರ್ಶಿಸಿದರೆ ಸಹಾ ಅದನ್ನು ಪ್ರೋತ್ಸಾಹಿಸಲು ತುರ್ತುಕ್ರಮ ಕೈಗೊಳ್ಳುತ್ತಿದ್ದರು. ಇಂತಹ ಮನೋಭಾವದಿಂದ ಪಿ.ಕೆ. ಕಿಚ್ಲು, ಡಿ.ಎಸ್. ಕೊಠಾರಿ, ಆರ್.ಸಿ. ಮಜುಂದಾರ್ ಮುಂತಾದವರು ಸ್ವತಂತ್ರ ಸಂಶೋಧನೆಗಳನ್ನು ಮಾಡಿ ಭೌತಶಾಸ್ತ್ರ ವಿಭಾಗದ ಸಂಶೋಧನೆಗಳಿಗೆ ತಮ್ಮ ವಿಶಿಷ್ಟ ಕೊಡುಗೆಗಳನ್ನು ನೀಡಿದರು. ಭೌತ ವಿಜ್ಞಾನ ಕ್ಷೇತ್ರದಲ್ಲಿ ಪ್ರಪಂಚದ ಬೇರೆ ಬೇರೆ ಕಡೆಗಳಲ್ಲಿ ನಡೆಯುತ್ತಿದ್ದ ಸಂಶೋಧನಾ ಮಾಹಿತಿಯ ಮೇಲೆ ಅಲಹಾಬಾದ್‌ನಲ್ಲಿ ಬಿಸಿಬಿಸಿ ಚರ್ಚೆಗಳು ನಡೆಯುತ್ತಿದ್ದವು. ೧೯೩೭ರಲ್ಲಿ ಸಹಾ ಕಾಂತೀಯ ಏಕ ಧ್ರುವಗಳ ಧ್ರುವಸಾಮರ್ಥ್ಯ ಲೆಕ್ಕಾಚಾರ ಮಾಡುವ ವಿಧಾನವನ್ನು ರೂಪಿಸಿದರು. ಹೀಗೆ ಅಲಹಾಬಾದ್‌ನಲ್ಲಿ ತಮ್ಮ ಸಂಶೋಧನೆಯಲ್ಲಿ ತಾವು ನಿರತರಾಗಿ ಕೀರ್ತಿ ಶಿಖರದ ಉತ್ತುಂಗಕ್ಕೇರುವುದರಲ್ಲಿ ತೃಪ್ತಿಪಡದ ಹಲವಾರು ಪ್ರತಿಭಾವಂತ ವಿದ್ಯಾರ್ಥಿಗಳನ್ನು ವಿಜ್ಞಾನವೇದಿಕೆಗೆ ಆಕರ್ಷಿಸಿ ಅವರೂ ಸಂಶೋಧನಾ ಕ್ಷೇತ್ರದಲ್ಲಿ ಗಣನೀಯ ಕೊಡುಗೆಗಳನ್ನು ಕೊಡಲು ಸೂಕ್ತ ಅವಕಾಶ ಕಲ್ಪಿಸಿದರು. ಹೀಗೆ ಅವರು ವಿಜ್ಞಾನ ಕ್ಷೇತ್ರದ

ವಕಾಶವಾದಿಯಾಗದೆ ತಮ್ಮೊಟ್ಟಿಗೆ ತಮ್ಮ ವಿದ್ಯಾರ್ಥಿಗಳು
ಹೋದ್ಯೋಗಿಗಳು ಬೆಳೆಯುವಂತೆ ಮಾಡಿ ಅವರ ಪ್ರತಿಭೆಗಳು
ಕಾಸಗೊಂಡು ತಮ್ಮ ತಮ್ಮ ಆಸಕ್ತಿಯುತ ಕ್ಷೇತ್ರಗಳಲ್ಲಿ ಗಣನೀಯ
ೂಡುಗೆಗಳನ್ನು ಕೊಡಲು ಮುಕ್ತ ಅವಕಾಶ ಕಲ್ಪಿಸಿದರು.

ಅಧ್ಯಾಯ ೫

ವಿಜ್ಞಾನ: ದಂತಗೋಪುರದಿಂದ ಹೊರಗೆ

ಭಾರತದಂತಹ ವಿಶಾಲ ದೇಶದಲ್ಲಿ ತನ್ನಷ್ಟಕ್ಕೆ ತಾನು ತನ್ನ ದಂತಗೋಪುರದಲ್ಲಿ ಕುಳಿತು ಕೆಲಸ ಮಾಡುತ್ತಿದ್ದ ವಿಜ್ಞಾನಿಯನ್ನು ಮುಖ್ಯವಾಹಿನಿಗೆ ತರುವುದು ತುಂಬಾ ಅಗತ್ಯವೆಂಬುದನ್ನು ಸಹಾ ಬಹಳ ಬೇಗನೆ ಮನಗಂಡರು. ಅದಕ್ಕಾಗಿ ಅವರು ವಿಜ್ಞಾನ ಕ್ಷೇತ್ರದಲ್ಲಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದ ಅನೇಕ ವಿಜ್ಞಾನಿಗಳ ನಡುವೆ ಸಮನ್ವಯ ಸಾಧಿಸಲು ತೀರ್ಮಾನಿಸಿ ಆ ಕ್ಷೇತ್ರದಲ್ಲಿ ಕೆಲಸ ಮಾಡಲಾರಂಭಿಸಿದರು. ಅದಕ್ಕಾಗಿ ಅವರು ತಮ್ಮ ಸಂಶೋಧನಾ ದಂತಗೋಪುರವನ್ನಿಳಿದು ಕೆಲಸಮಾಡಬೇಕಾಗಿ ಬಂತು. ವಿಜ್ಞಾನಿಗಳಿಗೆ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ಒಂದು ವೇದಿಕೆಯನ್ನು ರಚಿಸಲು ಮುಂದಾದರು. ೧೯೩೦ ರಲ್ಲಿ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್‌ನ ಸಭೆ ಅಲಹಾಬಾದ್‌ನಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಸಂಯುಕ್ತ ಪ್ರಾಂತ್ಯದಲ್ಲಿ ಕೆಲಸ ಮಾಡುತ್ತಿದ್ದ ಅನೇಕ ವಿಜ್ಞಾನಿಗಳು ವಿಚಾರ ವಿನಿಮಯಕ್ಕೆ ಒಗ್ಗೂಡಿದ್ದರು. ಅವರನ್ನು ಉದ್ದೇಶಿಸಿ ರಾಜ್ಯಪಾಲ ಸರ್ ಮ್ಯಾಲ್ಕಂ ಹ್ಯಾಲಿ ಉತ್ತೇಜನಕಾರಿ ಭಾಷಣ ಮಾಡಿದರು. ವಿಜ್ಞಾನ ಕ್ಷೇತ್ರಕ್ಕೆ ಸಾರ್ವಜನಿಕರ ಹಾಗೂ ಸರ್ಕಾರದ

ಬೆಂಬಲ ಹೆಚ್ಚು ಪಡೆಯಲು ಅವರು ವಿಜ್ಞಾನದ ಉಪಯೋಗಗಳನ್ನು ಜನರಿಗೆ ಪರಿಚಯಿಸಬೇಕು. ಈ ಕೆಲಸಕ್ಕೆ ಅವರು ಒಗ್ಗೂಡಿದರೆ ಅದರಿಂದ ವಿಜ್ಞಾನ ಮತ್ತು ಸಮಾಜ ಎರಡಕ್ಕೂ ಒಳ್ಳೆಯದಾಗುತ್ತದೆ ಎಂದು ಪ್ರತಿಪಾದಿಸಿದರು. ಇವರ ಭಾಷಣದ ಪ್ರಭಾವದಿಂದ ಉತ್ತರ ಪ್ರದೇಶದ ವಿಜ್ಞಾನಿಗಳೆಲ್ಲರೂ ಒಂದುಗೂಡಿ ಒಂದು ಸಮಿತಿ ರಚಿಸಿಕೊಳ್ಳು ವಂತಾಯಿತು. ಬಂಗಾಳದ ರಾಯಲ್ ಏಶ್ಯಾಟಿಕ್ ಸೊಸೈಟಿಯ ಮಾದರಿಯಲ್ಲಿ ಈ ಸಮಿತಿಯ ನೀತಿ ನಿಯಮಾವಳಿಗಳನ್ನು ರೂಪಿಸಲು ಸಹಾ ತುಂಬಾ ಶ್ರಮಪಟ್ಟರು. ಈ ಕಾಲಕ್ಕಾಗಲೇ ಸಹಾ ಚದುರಿಹೋಗಿರುವ ವೈಜ್ಞಾನಿಕ ಬಲವನ್ನು ಒಗ್ಗೂಡಿಸುವ ಅಗತ್ಯವನ್ನು ಮನಗಂಡಿದ್ದರು. ಇಂತಹ ಒಗ್ಗಟ್ಟನ್ನು ಬಳಸಿಕೊಂಡು ವಿಜ್ಞಾನ ಅಭಿವೃದ್ಧಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಿದರು. ಅದಕ್ಕಾಗಿಯೇ ೧೯೩೦ರಲ್ಲಿ "ಯುಪಿ ಅಕ್ಯಾಡಮಿ ಆಫ್ ಸೈನ್ಸ್"ನ್ನು ಸ್ಥಾಪಿಸಿದರು. ಈ ಅಕ್ಯಾಡೆಮಿಯ ಉದ್ದೇಶ ಕೇವಲ ಪಾಂಡಿತ್ಯ ಪೂರ್ಣ ವಿಚಾರಗಳ ವಿನಿಮಯ ಮಾತ್ರವಾಗಿರದೆ ದೇಶವನ್ನು ಬಾಧಿಸುತ್ತಿರುವ ಅನೇಕ ಆರ್ಥಿಕ ಕಾಯಿಲೆಗಳ ನಿವಾರಣೆಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಬಳಸುವ ಉದ್ದೇಶವನ್ನು ಅದು ಹೊಂದಿತ್ತು. ಹೀಗೆ ಮೊದಲ ಬಾರಿಗೆ ಭಾರತೀಯ ವಿಜ್ಞಾನಿಗಳು ರಾಷ್ಟ್ರೀಯ ಸಮಸ್ಯೆಗಳ ಪರಿಹಾರಕ್ಕೆ ರಾಷ್ಟ್ರೀಯ ಪಾತ್ರವಹಿಸಲು ಸಂಘಟಿತ ಪ್ರಯತ್ನ ಮಾಡುವಂತಾಯಿತು.

ಯುಪಿ. ಅಕ್ಯಾಡೆಮಿ ಆಫ್ ಸೈನ್ಸ್ ಸದಸ್ಯತ್ವ ಶೀಘ್ರವಾಗಿ ಸಂಯುಕ್ತ ಪ್ರಾಂತ್ಯಗಳ ಗಡಿಯನ್ನು ದಾಟಿತು. ೧೯೩೪ರಲ್ಲಿ ಇದರ ಹೆಸರನ್ನು ನ್ಯಾಷನಲ್ ಅಕ್ಯಾಡೆಮಿ ಆಫ್ ಸೈನ್ಸ್ ಆಗಿ ಪುನರ್ ನಾಮಕರಣ ಮಾಡಲಾಯಿತು. ಇದು ರಾಷ್ಟ್ರೀಯ ಅಭಿವೃದ್ಧಿಯ ಅನೇಕ ವಿಷಯಗಳನ್ನು ಗುರುತಿಸಿ ಅವುಗಳ ಬಗೆಗೆ ವೈಜ್ಞಾನಿಕ ವಿಶ್ಲೇಷಣೆ ನಡೆಸಲು, ವಿಜ್ಞಾನಿಗಳಿಗೆ ರಾಜಕೀಯ ಮುಖಂಡರಿಗೆ ಅವಕಾಶ

ಕಲ್ಪಿಸಿತು. ೧೯೩೮ರಲ್ಲಿ ಅಕ್ಯಾಡೆಮಿಯು ವಿದ್ಯುತ್ ಉತ್ಪಾದನೆಯ ಬಗೆಗೆ ಒಂದು ವಿಚಾರ ಸಂಕೀರ್ಣ ಏರ್ಪಡಿಸಿ ನೆಹರುರವರನ್ನು ಅಧ್ಯಕ್ಷತೆ ವಹಿಸಲು ಆಹ್ವಾನಿಸಿತು. ನೆಹರು ಇವರಲ್ಲಿ ಭಾಗವಹಿಸಿ ವಿದ್ಯುತ್ ಉತ್ಪಾದನೆಗೆ ಖಚಿತವಾದ ಸಲಹೆಗಳನ್ನು ನೀಡಬೇಕೆಂದು ಕರೆನೀಡಿದರು. ಪ್ರಾಂತೀಯ ಸ್ವರೂಪ ಪಡೆದುಕೊಂಡಿದ್ದ ಈ ಸಮಿತಿಗೆ ಸಹಾ ರಾಷ್ಟ್ರೀಯ ಸ್ವರೂಪವನ್ನು ನೀಡಲು ಪ್ರಯತ್ನಿಸಿದರು. ಈ ಕಾಲಕ್ಕಾಗಲೇ ಸರ್. ಸಿ.ವಿ. ರಾಮನ್‌ರವರು ಬೆಂಗಳೂರಿನಲ್ಲಿ "ಇಂಡಿಯನ್ ಅಕಾಡೆಮಿ ಆಫ್ ಸೈನ್ಸ್" ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದರು. ಸಹಾರವರು ಬೊಂಬಾಯಿಯ ಇಂಡಿಯನ್ ಸೈನ್ಸ್ ಕಾಂಗ್ರೆಸ್‌ನ ಇಪ್ಪತ್ತೊಂದನೇ ಅಧಿವೇಶನವನ್ನು ಉದ್ದೇಶಿಸಿ ನೀಡಲಾದ ಸಲಹೆಗಳನ್ನು ಆಧರಿಸಿ ೧೯೩೫ ರಲ್ಲಿ "ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್"ನ್ನು ಪ್ರಾರಂಭಿಸಲಾಯಿತು. ಇದು ವಿಜ್ಞಾನ ಕ್ಷೇತ್ರದಲ್ಲಿ ಅತ್ಯುನ್ನತ ಸಮನ್ವಯ ಸಂಸ್ಥೆಯಾಯಿತು. ಇದಕ್ಕೆ ಕೇಂದ್ರ ಸರ್ಕಾರದ ಮನ್ನಣೆ ಕೂಡ ದೊರೆತು ದೇಶಾದ್ಯಂತ ಕ್ರಿಯಾಶೀಲವಾಗಿದ್ದ ಬೇರೆ ಅಕ್ಯಾಡೆಮಿಗಳು ಮತ್ತು ವಿಜ್ಞಾನ ಸಂಘಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸುವ ಅಧಿಕಾರ ಹೊಂದಿದ ಉನ್ನತ ಸಂಸ್ಥೆಯಾಯಿತು. ಎಲ್.ಸಿ. ಫರ್‌ಮೋರ್ ಇದರ ಅಧ್ಯಕ್ಷರಾದರು, ಪ್ರೊ. ಸಹಾ ಇದರ ಒಬ್ಬ ಉಪಾಧ್ಯಕ್ಷರಾದರು. ೧೯೩೭–೩೮ ರಲ್ಲಿ ಸಹಾ ಈ ಸಂಸ್ಥೆಯ ಎರಡನೇ ಅಧ್ಯಕ್ಷರಾದರು. ಈಗ ಈ ಸಂಸ್ಥೆಯನ್ನು "ಇಂಡಿಯನ್ ನ್ಯಾಷನಲ್ ಸೈನ್ಸ್ ಅಕ್ಯಾಡೆಮಿ" ಎಂದು ಕರೆಯುತ್ತಾರೆ.

ಸಹಾರವರು ಅಲಹಾಬಾದ್‌ನಲ್ಲಿ ಬಂದು ನೆಲೆಸಿದರು. ಕಲ್ಕತ್ತಾದಲ್ಲಿ ನಡೆಯುತ್ತಿದ್ದ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಭಾರತದ ಅತ್ಯಂತ ಹಳೆಯ ಸಂಶೋಧನಾ ಸಂಸ್ಥೆ "ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸೈನ್ಸ್" ಬಿಕ್ಕಟ್ಟನ್ನೆದುರಿಸುತ್ತಿತ್ತು. ಇಲ್ಲಿ ನಡೆಸಿದ ಸಂಶೋಧನೆಗೆ ನೊಬೆಲ್

ಪ್ರಶಸ್ತಿ ಪಡೆದ ರಾಮನ್ ಈ ಸಂಸ್ಥೆ ನಡೆಸುವ ಬಗ್ಗೆ ಮುಖ್ಯಸ್ಥರಾಗಿದ್ದ ಶಾಮ್‌ಪ್ರಸಾದ್ ಮುಖರ್ಜಿಯವರನ್ನೊಳಗೊಂಡಂತೆ ಅನೇಕರೊಡನೆ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರು. ಬಲಾಢ್ಯರ ಹೊಡೆದಾಟದಲ್ಲಿ ರಾಮನ್ ಸೋಲೊಪ್ಪಿಕೊಂಡು ಬೇಸರ ಪಟ್ಟುಕೊಂಡು ೧೯೩೩ ರಲ್ಲಿ ಈ ಸಂಸ್ಥೆಯನ್ನೇ ಬಿಡಬೇಕಾಗಿ ಬಂತು. ಶ್ಯಾಮ್‌ಪ್ರಸಾದ್ ಮುಖರ್ಜಿಯವರು ತಮ್ಮ ನಿಲುವಿನ ಪರವಾಗಿ ಸಹಾರವರ ಬೆಂಬಲ ಪಡೆಯಲು ಅಲಹಾಬಾದ್‌ಗೆ ಭೇಟಿನೀಡಿದರು. ಸಹಾರವರಿಗೆ ನೊಬಲ್ ಪ್ರಶಸ್ತಿ ದೊರಕದಿದ್ದರೂ ಆ ಕಾಲಕ್ಕಾಗಲೇ ಸಾಕಷ್ಟು ಪ್ರಖ್ಯಾತರಾಗಿ ವಿಜ್ಞಾನ ಕ್ಷೇತ್ರದಲ್ಲಿ ತಮ್ಮ ಅನುಯಾಯಿಗಳು ಹಾಗೂ ಅಲಹಾಬಾದ್‌ನ ಸಂಶೋಧನಾಲಯದ ಮೂಲಕ ಪ್ರಬಲರಾಗಿ ಬೆಳೆದಿದ್ದರು. ಅಪರ ಅನೇಕ ಶಿಷ್ಯರು ಇತರ ಸಂಶೋಧನಾ ಕೇಂದ್ರಗಳ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿದ್ದರು. ಇದರಿಂದಾಗಿ ಸಹಾ ಮತ್ತು ರಾಮನ್‌ರಿಗೆ ಇದ್ದ ಭಿನ್ನಾಭಿಪ್ರಾಯ ಹಾಗೆಯೇ ಮುಂದುವರಿದು ಅವರು ಮುಂದೆಂದೂ ಒಗ್ಗೂಡಿ ಕೆಲಸ ಮಾಡಲಾಗದಿದ್ದುದು ಭಾರತೀಯ ವಿಜ್ಞಾನದ ಒಂದು ದುರಂತ.

ಸಹಾರಲ್ಲಿ ಅಡಗಿದ್ದ ಸಂಘಟನೆಕಾರ ತಮ್ಮ ಚಟುವಟಿಕೆಗಳ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಾ ನಡೆದ. ಅವರ ಮುಂದಿನ ಸಾಹಸ "ಇಂಡಿಯನ್ ಸೈನ್ಸ್ ನ್ಯೂಸ್ ಅಸೋಸಿಯೇಷನ್"ನ್ನು ಕಲ್ಕತ್ತಾದಲ್ಲಿ ಪ್ರಾರಂಭಿಸಿ "ಸೈನ್ಸ್ ಅಂಡ್ ಕಲ್ಚರ್" ಎಂಬ ವೃತ್ತ ಪತ್ರಿಕೆಯನ್ನು ಬಿಡುಗಡೆ ಮಾಡಿದ್ದು. ಪ್ರಾರಂಭದಿಂದಲೂ ಸಹಾ ಈ ಪತ್ರಿಕೆಯ ಲೇಖನಗಳ ಮೂಲಕ ಸಂಪಾದಕೀಯಗಳ ಮೂಲಕ ನಿಯತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಬಂದರು. ದೇಶದಲ್ಲಿ ವಿಜ್ಞಾನದ ಬೆಳವಣಿಗೆ ಯಾವ ರೀತಿ ಆಗಬೇಕೆಂಬ ಬಗೆಗೆ ಸಹಾರಲ್ಲಿ ಆಗಲೇ ಅಭಿಪ್ರಾಯಗಳು ಹಾಗೂ ಆಸೆಗಳು ಮೂಡಲಾರಂಭಿಸಿದ್ದವು. ಬೇರೆ ಬೇರೆ ದೇಶಗಳು ಈ ದಿಸೆಯಲ್ಲಿ ಯಾವ ರೀತಿ ಪ್ರಗತಿ ಸಾಧಿಸಿವೆ

ಎಂಬುದನ್ನು ಮನಗಾಣಲು ಸಹಾ ಯೂರೋಪ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಪ್ರವಾಸ ಮಾಡಲು ಆಲೋಚಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಬ್ರಿಟಿಷ್ ಸಾಮ್ರಾಜ್ಯದ "ಕಾರ್ನೆಗಿ ಟ್ರಸ್ಟ್"ನ ಫೆಲೋಶಿಪ್ ಸಹಾರಿಗೆ ದೊರೆತು ಅವರು ೧೯೩೬ರಲ್ಲಿ ಯುರೋಪ್ ಮತ್ತು ಅಮೆರಿಕ ದೇಶಗಳಲ್ಲಿ ವ್ಯಾಪಕ ಪ್ರವಾಸಮಾಡಿದರು. ಈ ಪ್ರವಾಸದ ಸಂದರ್ಭದಲ್ಲಿ ಅವರಿಗೆ ಬೋಧನಾ ಹೊರೆಯಿಂದ ಬಿಡುವು ದೊರೆತದ್ದೇ ಅಲ್ಲದೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ನಡೆಯುತ್ತಿದ್ದ ಅತ್ಯಾಧುನಿಕ ಬೆಳವಣಿಗೆಗಳ ಬಗೆಗೆ ತಿಳಿದುಕೊಳ್ಳಲು ಸಹಾಯಕವಾಯಿತು. ಸಹಾ ಈ ಪ್ರವಾಸದಲ್ಲಿದ್ದಾಗ ಮ್ಯೂನಿಕ್‌ಗೆ ಭೇಟಿ ಕೊಟ್ಟರು. ಆಗ ಅಲ್ಲಿ ನಿತ್ಯವೂ ಹೊಸ ಮತ್ತು ಅದ್ಭುತವಾದ ಸಂಶೋಧನೆಗಳು ನಡೆಯುತ್ತಿದ್ದವು. ಸಹಾರವರಿಗೆ ಇಲ್ಲಿ ಪರಮಾಣು ಭೌತಶಾಸ್ತ್ರದ ಅಗಣಿತ ಸಾಧ್ಯತೆಗಳ ಬಗೆಗೆ ಮನವರಿಕೆಯಾಯಿತು. ಈ ಪ್ರವಾಸದಲ್ಲಿ ಸುಮಾರು ಒಂದು ತಿಂಗಳು ಅವರು ಆಕ್ಸ್‌ಫರ್ಡ್‌ನಲ್ಲಿದ್ದರು. ಅಲ್ಲಿಂದ ಕೇಂಬ್ರಿಡ್ಜ್‌ನ ಹಾರ್ವರ್ಡ್ ಕಾಲೇಜಿನ ಖಗೋಳ ವೀಕ್ಷಣಾಲಯಕ್ಕೆ ಭೇಟಿಕೊಟ್ಟರು. ಇವರ ಖಾಸಾ ಸ್ನೇಹಿತ ಡಾ. ಹಾರ್ಲೋ ಶಾಪ್ಲಿ ಆಗ ಅಲ್ಲಿ ನಿರ್ದೇಶಕರಾಗಿದ್ದರು. ಇಲ್ಲಿಂದಲೇ ಅವರು ಖಗೋಳಶಾಸ್ತ್ರದ ಬಗೆಗೆ ಮತ್ತೊಂದು ಪ್ರಬಂಧವನ್ನು ಬರೆದು ಪ್ರಕಟಪಡಿಸಿದರು. ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಅವರು ಪ್ರಮುಖ ಪ್ರಯೋಗಾಲಯಗಳು ಮತ್ತು ಖಗೋಳ ವೀಕ್ಷಣಾಲಯಗಳಿಗೆ ಭೇಟಿಕೊಟ್ಟರು. ಬರ್ಕ್‌ಲಿಯಲ್ಲಿ ಪ್ರೊ. ಈ.ಓ. ಲಾರೆನ್ಸ್ ಮತ್ತು ಅವರ ಸೈಕ್ಲೋಟ್ರಾನ್ ಪ್ರಯೋಗಾಲಯಕ್ಕೆ ಭೇಟಿಕೊಟ್ಟರು. ಯುರೋಪ್‌ನಿಂದ ಹಿಂದಿರುಗುವಾಗ ಕೋಪನ್ ಹೇಗನ್‌ನಲ್ಲಿ "ನ್ಯೂಕ್ಲಿಯರ್ ಭೌತ ಶಾಸ್ತ್ರ"ದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಪಾಲ್ಗೊಂಡರು. ಅಲ್ಲಿ ನ್ಯೂಕ್ಲಿಯರ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಪ್ರಸಿದ್ಧ ವಿಜ್ಞಾನಿಗಳನ್ನು

ಭೇಟಿಮಾಡಿದರು. ಈ ರೀತಿಯಾಗಿ ಸಹಾ ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ವೈಜ್ಞಾನಿಕ ಪ್ರಗತಿಯನ್ನು ತಮ್ಮ ಈ ಕಿರು ಅಧ್ಯಯನ ಪ್ರವಾಸದಲ್ಲಿ ಮನವರಿಕೆ ಮಾಡಿಕೊಂಡು ಅತ್ಯಂತ ಉತ್ಸಾಹಿತರಾಗಿ ಸ್ವದೇಶಕ್ಕೆ ಮರಳಿದರು. ಇವರು ಅಲಹಾಬಾದ್‌ಗೆ ಮರಳಿವಾಗ ವಿಶ್ವವಿದ್ಯಾಲಯದಲ್ಲಿ ಕೀಳುದರ್ಜೆಯ ರಾಜಕೀಯ ತಲೆಹಾಕಿ ಅತ್ಯಂತ ನಿರುತ್ಸಾಹದಾಯಕ ಪರಿಸ್ಥಿತಿ ನಿರ್ಮಾಣ ಗೊಂಡಿತ್ತು. ಇಂತಹ ಸನ್ನಿವೇಶದಲ್ಲಿ ಘನತೆ ಮತ್ತು ಗೌರವದಿಂದ ಸೇವೆಸಲ್ಲಿಸುವುದು ಸಾಧ್ಯವಿಲ್ಲವೆಂದು ಸಹಾರಿಗೆ ಅನ್ನಿಸಲಾರಂಭಿಸಿತು. ಸದ್ಯವಲ್ಲಿ ಪರಿಸ್ಥಿತಿ ಸುಧಾರಿಸಬಹುದೆಂಬ ಭರವಸೆ ಕೂಡ ಕಂಡುಬರಲಿಲ್ಲ. ಧೈರ್ಯ ಮತ್ತು ಸ್ವತಂತ್ರ ಪ್ರವೃತ್ತಿಗಳ ಸಹಾ ಬೇಸರಿಸಿ ತಮ್ಮ ಹುದ್ದೆಯನ್ನು ಬಿಟ್ಟು ಕಲ್ಕತ್ತಾಗೆ ಹೋಗಿ ನೆಲೆಸುವ ತೀರ್ಮಾನ ತೆಗೆದುಕೊಂಡರು. ಇದಕ್ಕೆ ಮುನ್ನ ಸಹಾ ಅಲಹಾಬಾದ್‌ನಲ್ಲೇ ನೆಲಸುವುದೆಂದು ತೀರ್ಮಾನಿಸಿ ಸ್ವಂತ ವಿಶಾಲವಾದ ಮನೆಯನ್ನೂ ನಿರ್ಮಿಸಿಕೊಂಡಿದ್ದರು. ಅಲಹಾಬಾದ್‌ನಲ್ಲಿ ಅವರಿಗೆ ವೃತ್ತಿಪರ ತೃಪ್ತಿಯೂ ದೊರಕಿತ್ತು. ಅವರಿಗೆ ರಾಜ್ಯಾದ್ಯಂತ ಒಳ್ಳೆಯ ಗೌರವ ದೊರೆಯುತ್ತಿದ್ದರೂ ಅವರು ಈ ತೀರ್ಮಾನ ತೆಗೆದುಕೊಂಡರು. ಡಾ. ಶ್ಯಾಮಪ್ರಸಾದ್ ಮುಖರ್ಜಿಯವರು ಸಹಾರನ್ನು ಪುನಃ ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ತರುವುದರಲ್ಲಿ ಪ್ರಮುಖ ಪಾತ್ರವಹಿಸಿದರು. ೧೯೩೮ರಲ್ಲಿ ಸಹಾ ಕಲ್ಕತ್ತಾ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಪ್ಯಾಲಿಟ್ ಪ್ರೊಫೆಸರ್ ಆಗಿ ನೇಮಕಗೊಂಡರು.

ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ಸಹಾ ಮರಳಿ ಬಂದಮೇಲೆ ಎಂ.ಎಸ್ಸಿ. ಪಠ್ಯ ವಿಷಯವನ್ನು ಪರಿಷ್ಕರಣ ಮಾಡುವಲ್ಲಿ ಪ್ರಯೋಗಾಲಯವನ್ನು ಸಜ್ಜುಗೊಳಿಸುವಲ್ಲಿ ಸಾಕಷ್ಟು ಕಾಲವ್ಯಯ ಮಾಡಿದರು. "ಕಾರ್ನೆಗಿ ಟ್ರಸ್ಟ್"ನ ಪ್ರವಾಸದಲ್ಲಿದ್ದಾಗ ಸಹಾ ಪರಮಾಣು ಶಾಸ್ತ್ರದ ಅಭ್ಯಾಸದ

ಬಗೆಗೆ ಆಕರ್ಷಿತರಾಗಿದ್ದರು. ಪರಮಾಣುವಿನ ನಿಗೂಢ ಪ್ರಪಂಚ ಲೋಕ ಕಲ್ಯಾಣಕ್ಕೆ ಕೊಡಬಹುದಾದ ಅಪಾರ ಕೊಡುಗೆಗಳ ಬಗೆಗೆ ತಮ್ಮನ್ನು ತೊಡಗಿಸಿಕೊಳ್ಳಲು ನಿರ್ಧರಿಸಿದ್ದರು. ನಮ್ಮ ಮುಂದಿನ ಯುಗ ಪರಮಾಣು ಯುಗ, ಯಾರು ಪರಮಾಣು ಶಾಸ್ತ್ರದಲ್ಲಿ ಮೈಲ್ಮೈ ಪಡೆಯುತ್ತಾರೋ ಅವರು ವಿಜ್ಞಾನ ತಂತ್ರಜ್ಞಾನದ ನಾಯಕರಾಗುತ್ತಾರೆಂಬುದರಲ್ಲಿ ಅವರಿಗೆ ಸಂಶಯವಿರಲಿಲ್ಲ. ಅಂತಹ ಹೊಚ್ಚ ಹೊಸ ಕ್ಷೇತ್ರದಲ್ಲಿ ಭಾರತ ಮುಂಚೂಣಿಯಲ್ಲಿರಬೇಕೆಂದು ಅವರು ಆಶಿಸಿದರು. ಪಾಶ್ಚಿಮಾತ್ಯರು ಪರಮಾಣುವಿನ ಅಗಾಧ ವಿಸ್ಮಯ ಶಕ್ತಿಯನ್ನು ತಮ್ಮ ವಶಮಾಡಿಕೊಳ್ಳುತ್ತಿರುವುದನ್ನು ಕಣ್ಣಾರೆ ಕಂಡ ಸಹಾ ಇಂತಹ ತೀರ್ಮಾನ ತೆಗೆದುಕೊಂಡದ್ದು ತುಂಬಾ ಸ್ವಾಭಾವಿಕವೇ ಆಗಿತ್ತು. ಆದರೆ ಪರಮಾಣು ವಿಜ್ಞಾನದಲ್ಲಿ ಸಂಶೋಧನೆ ನಡೆಸುವುದು ಸುಲಭದ ಕೆಲಸವಾಗಿರಲಿಲ್ಲ.

ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಸಲು ಅಪಾರ ಹಣ ಬೇಕಾಗುತ್ತಿತ್ತು. ಅಷ್ಟು ಹಣವನ್ನು ಒದಗಿಸಿಕೊಳ್ಳುವುದು ಆ ಕಾಲಕ್ಕೆ ಪ್ರಖ್ಯಾತರಾಗಿದ್ದ ಸಹಾರಿಗೂ ಸುಲಭದ ಮಾತಾಗಿರಲಿಲ್ಲ. ಬೈಜಿಕ ಶಕ್ತಿಯ ಸಾಧ್ಯಾಸಾಧ್ಯತೆಗಳ ಬಗೆಗೆ ವಿಜ್ಞಾನಿಗಳಲ್ಲಿ ಭರವಸೆ ಇಲ್ಲದಿದ್ದ ಆ ಕಾಲದಲ್ಲಿ ಸರ್ಕಾರವನ್ನು ಇದರ ಮೇಲೆ ಹಣ ತೊಡಗಿಸುವಂತೆ ಕೇಳುವುದು ಅವರನ್ನ ಒಪ್ಪಿಸುವುದು ಅತ್ಯಂತ ಕಠಿಣವಾದ ಸಾಹಸವೇ ಆಗಿತ್ತು. ಸಹಾ ಒಮ್ಮೆ ಮನಸ್ಸು ಮಾಡಿದರೆ ಎಂತಹ ಅಡಚಣೆಯೇ ಬಂದರೂ ಹಿಂಜಗ್ಗುವವರಲ್ಲ. ಅವರದು ವಿಶ್ವಾಮಿತ್ರನ ಛಲ: ಮಾಡಬೇಕೆಂದು ತೀರ್ಮಾನಿಸಿದ್ದನ್ನು ಮಾಡೇ ತೀರುತ್ತಿದ್ದರು. ಅಂತಹ ಛಲಗಾರ ವಿಜ್ಞಾನಿ ಸಹಾ ಆದುದರಿಂದ ಈ ಎಲ್ಲಾ ಸಮಸ್ಯೆಗಳೂ ಬಿಸಿಲಿಗೆ ಬಿದ್ದ ಹಿಮದಂತೆ ಕರಗಲಾರಂಭಿಸಿದವು.

೧೯೩೯ರ ಸುಮಾರಿಗೆ ಹಾನ್ ಮತ್ತು ಸ್ಟ್ರಾಸ್‌ಮನ್ ಬೈಜಿಕ ವಿದಳವನ್ನು ಕಂಡುಹಿಡಿದಿದ್ದರು. ಸಹಾ ಕೂಡಲೇ ಅದನ್ನು ಎಂ.ಎಸ್ಸಿ. ಪಠ್ಯವಿಷಯದಲ್ಲಿ ಸೇರಿಸಿದರು. ಉತ್ಸಾಹದಿಂದ ಕೆಲಸಮಾಡುವ ಯುವ ವಿಜ್ಞಾನಿಗಳನ್ನು ಈ ಕ್ಷೇತ್ರಕ್ಕಿಳಿಸಿದರು. ಎಸ್.ಸಿ. ಸರ್ಕಾರ್, ಡಾ|| ಎ. ಎನ್. ದಾಸ್‌ಗುಪ್ತ, ಕಮಲೇಶರೇ, ಪರೇಶ್ ಚಂದ್ರ ಭಟ್ಟಾಚಾರ್ಯ ಮುಂತಾದ ಯುವ ವಿಜ್ಞಾನಿಗಳ ದಂಡು ಸಹಾರ ಮಾರ್ಗದರ್ಶನದಲ್ಲಿ ತಕ್ಷಣ ಕೆಲಸ ಪ್ರಾರಂಭಿಸಿದರು. ಪ್ರಯೋಗಾಲಯದಲ್ಲಿ ರೂಪಿಸಿದ ಸಲಕರಣೆಗಳು ಮತ್ತು ಗೀಗರ್ ಕೌಂಟರ್ ಬಳಸಿ ವಿಶ್ವಕಿರಣಗಳ ಬಗೆಗೆ (Cosmic rays) ಸಂಶೋಧನೆ ಪ್ರಾರಂಭವಾಯಿತು. ಆದರೆ ಸಹಾರಿಗೆ ಈ ರೀತಿಯ ಸಣ್ಣ ಪ್ರಯತ್ನಗಳಲ್ಲಿ ನಿಧಾನವಾಗಿ ಕೆಲಸ ಪ್ರಾರಂಭಿಸುವುದು ಸುತರಾಂ ಇಷ್ಟವಿರಲಿಲ್ಲ. ಅವರು ದೊಡ್ಡ ಪ್ರಮಾಣದಲ್ಲಿ ಶೀಘ್ರವಾಗಿ ಈ ಕ್ಷೇತ್ರದಲ್ಲಿ ಸಂಶೋಧನೆಗಳು ನಡೆದು ಭಾರತ ವೈಜ್ಞಾನಿಕ ನಾಗಾಲೋಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನದಲ್ಲಿ ಬರಬೇಕೆಂದು ಬಯಸಿದರು. ಅವರು ಇದಕ್ಕೆ ಅತ್ಯಗತ್ಯವಾಗಿದ್ದ ಸೈಕ್ಲೋಟ್ರಾನ್‌ನ್ನು ಪಡೆಯಲು ದೃಢ ತೀರ್ಮಾನ ಮಾಡಿದ್ದರು. ಅದಕ್ಕೆ ಒಂದು ಸೈಕ್ಲೋಟ್ರಾನನ್ನು ಸ್ಥಾಪಿಸಿ ಅದನ್ನು ನಿರ್ವಹಣೆ ಮಾಡಲು ಬೇಕಾಗಿದ್ದ ಬಂಡವಾಳ ಒಂದು ವಿಶ್ವವಿದ್ಯಾಲಯದ ಹಣಕಾಸಿನ ಸಾಮರ್ಥ್ಯವನ್ನು ಮೀರಿದ್ದಾಗಿತ್ತು. ಇದೇ ಸಂದರ್ಭದಲ್ಲಿ ಎರಡನೇ ಮಹಾಯುದ್ಧ ಬೇರೆ ಪ್ರಾರಂಭವಾಗಿ ಈ ಸಮಸ್ಯೆ ಮತ್ತಷ್ಟು ಜಟಿಲವಾಯಿತು. ಇವರು ಇದಕ್ಕಾಗಿ ಅಗತ್ಯವಾದ ಹಣ ಪಡೆಯಲು ನೆಹರೂರವರನ್ನು ಸಂಪರ್ಕಿಸಿದರು. ನೆಹರು ಟಾಟಾ ಟ್ರಸ್ಟ್‌ನವರನ್ನು ಒಪ್ಪಿಸಿ ಸೈಕ್ಲೋಟ್ರಾನ್ ಪ್ರಯೋಗಾಲಯವನ್ನು ಸ್ಥಾಪಿಸಲು ಸುಮಾರು ಅರವತ್ತು ಸಹಸ್ರ ರೂ.ಗಳನ್ನು ಕೊಡಿಸಿದರು. ಕೂಡಲೇ ಸೈಕ್ಲೋಟ್ರಾನ್‌ಗಳಿಗೆ ಬೇಕಾಗಿದ್ದ ಭಾಗಗಳನ್ನು ಕೊಂಡು ಅದರ ಜೋಡಣೆಯ ಕೆಲಸ ಪ್ರಾರಂಭವಾದ್ದರಿಂದ ಅರ್‌ನೆಸ್ಟ್ ಲಾರೆನ್ಸ್‌ರ ಬಳಿ

ಕೆಲಸ ಮಾಡುತ್ತಿದ್ದ ಬಿ.ಡಿ. ನಾಗಚೌಧುರಿ ಯವರು ಸೈಕ್ಲೋಟ್ರಾನ್ ಅಧಿಕಾರಿಯಾಗಿ ಕೆಲಸ ಪ್ರಾರಂಭಿಸಿದರು. ಆದರೆ ಜಪಾನ್‌ನೊಡನೆ ಯುದ್ಧ ಪ್ರಾರಂಭವಾದ್ದರಿಂದ ಸೈಕ್ಲೋಟ್ರಾನ್‌ಗೆ ಅಗತ್ಯವಾಗಿ ಬೇಕಾಗಿದ್ದ ನಿರ್ವಾತ ಪಂಪ್‌ಘಾತತವನ್ನು ತಲುಪಲಿಲ್ಲ. ಆಗ ಸಿ.ಎಸ್.ಐ.ಆರ್. ನಿಂದ ಋಣಪಡೆದು ದೇಶಿಯ ಪಂಪನ್ನು ಅಭಿವೃದ್ಧಿ ಪಡಿಸಲು ಕಮಲೇಶರೇ ಪ್ರಯತ್ನಿಸಿದರು. ಆದರೆ ಈ ಪ್ರಯತ್ನ ನಿರೀಕ್ಷಿಸಿದಷ್ಟು ಯಶಸ್ಸು ಪಡೆಯಲಿಲ್ಲ. ಈ ಕ್ಷೇತ್ರದಲ್ಲಿ ಮುಂಚೂಣಿ ಯಲ್ಲಿದ್ದ ಅಮೆರಿಕಾ ಪರಮಾಣು ವಿಜ್ಞಾನದ ಸಂಶೋಧನೆಗಳನ್ನು ಇತರ ದೇಶಗಳೊಂದಿಗೆ ಹಂಚಿಕೊಳ್ಳಲು ನಿರಾಕರಿಸಿತು. ಈ ಎಲ್ಲಾ ಬೆಳವಣಿಗೆಗಳು ಸಹಾರನ್ನು ಅತ್ಯಂತ ಬಿಕ್ಕಟ್ಟಿಗೆ ಸಿಕ್ಕಿಸಿದವು. ಆದರೆ ಸಹಾ ತಮ್ಮ ಪ್ರಯತ್ನದಿಂದ ವಿಮುಖರಾಗುವ ಸ್ವಭಾವದವರಾಗಿರಲಿಲ್ಲ. ಅವರಿಗೆ ಪರಮಾಣು ಸಂಶೋಧನೆಗೆ ಒಂದು ಪ್ರತ್ಯೇಕ ಸಂಸ್ಥೆಯ ಅಗತ್ಯವಿದೆ ಎನ್ನಿಸಿತು. ಇದರ ಸ್ಥಾಪನೆಗೆ ಪ್ರಯತ್ನಿಸಿದಾಗ ಸರ್ಕಾರ ಸಹಾರ ಸಹಾಯಕ್ಕೆ ಬರುವ ಬದಲು ಅನೇಕ ಅಡಚಣೆಗಳನ್ನೊಡ್ಡಿತು. ಆದರೂ ದೇಶಾಭಿಮಾನದ ಕೊಡುಗೆಗಳು ಈ ಪ್ರಯತ್ನದ ಬೆಂಬಲವಾಗಿ ಹರಿದುಬಂದವು. ಸ್ವಾತಂತ್ರ್ಯ ದೊರೆತ ನಂತರ ಸಹಾ ನೆಹರೂರವರಿಂದ ಈ ಪ್ರಯತ್ನಕ್ಕೆ ಬೆಂಬಲ ಸಿಗುವುದೆಂದು ಆಶಿಸಿ ೨೧-೪-೧೯೪೮ ರಲ್ಲಿ "ಇನ್‌ಸ್ಟಿಟ್ಯೂಟ್ ಆಫ್, ನ್ಯೂಕ್ಲಿಯರ್ ಫಿಸಿಕ್ಸ್" ಪ್ರಾರಂಭಿಸಿದರು. ಭಾರತ ಸರ್ಕಾರದ ಆಗಿನ ಕೈಗಾರಿಕಾ ಸಚಿವರಾಗಿದ್ದ ಶ್ಯಾಮ್ ಪ್ರಸಾದ್ ಮುಖರ್ಜಿ ಸಂಸ್ಥೆಯ ಅಡಿಗಲ್ಲನಿಟ್ಟು ಪ್ರಾರಂಭಿಸಿ ಈ ಯೋಜನೆಗೆ ತಮ್ಮೆಲ್ಲಾ ಬೆಂಬಲವನ್ನೊದಗಿಸಿದರು. ಆದರೆ ಅಧಿಕೃತವಾಗಿ ಈ ಸಂಸ್ಥೆ ಜನವರಿ ೧೯೫೦ ರಲ್ಲಿ ಜಗದ್ವಿಖ್ಯಾತ ವಿಜ್ಞಾನಿ ಇರ್ನಿ ಜ್ಯುಲಿಯಟ್ ಕ್ಯೂರಿಯವರಿಂದ ಉದ್ಘಾಟಿಸಲ್ಪಟ್ಟಿತು. ಇದಲ್ಲದೆ ಫೆಡ್ರಿಕ್ ಜ್ಯುಲಿಯಟ್, ರಾಬರ್ಟ್ ರಾಬಿನ್‌ಸನ್ ಜೆ.ಡಿ. ಬರ್ನಾಲ್ ಮುಂತಾದ ಪ್ರಸಿದ್ಧ ವಿಜ್ಞಾನಿಗಳು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಪ್ರಾರಂಭದಲ್ಲಿ

ಇದು ಕಲ್ಕತ್ತಾ ವಿಶ್ವವಿದ್ಯಾಲಯದ ಅಧೀನ ಸಂಸ್ಥೆಯಾಗಿ ಕೆಲಸ ಮಾಡಿದರೂ ಆನಂತರ ಒಂದು ಸ್ವಾಯತ್ತ ಸಂಸ್ಥೆಯಾಯಿತು. ಸ್ವತಂತ್ರ ಸರ್ಕಾರದಿಂದ ಅಗತ್ಯವಾದ ನೆರವನ್ನು ಪಡೆದು ಶೀಘ್ರವಾಗಿ ಬೆಳೆಯಲಾರಂಭಿಸಿತು. ಸಹಾ ತಮ್ಮ ಮರಣದವರೆಗೂ ಈ ಸಂಸ್ಥೆಯ ಗೌರವ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಇವರ ಮರಣಾನಂತರ ಈ ಸಂಸ್ಥೆಯನ್ನು ಇವರ ಹೆಸರಿನಲ್ಲಿ "ಸಹಾ ಇನ್ಸಿಟ್ಯೂಟ್ ಆಫ್ ನ್ಯೂಕ್ಲಿಯರ್ ಫಿಸಿಕ್ಸ್" ಎಂದು ಪುನರ್ ನಾಮಕರಣ ಮಾಡಲಾಯಿತು.

●

ಅಧ್ಯಾಯ ೬

ವೈಜ್ಞಾನಿಕ ಕ್ಯಾಲೆಂಡರ್ ಮತ್ತು ಮನೋಧರ್ಮ

ವಿದ್ಯಾರ್ಥಿ ದೆಸೆಯಿಂದಲೂ ಸಹಾಗೆ ಗಣಿತ ಮತ್ತು ಇತಿಹಾಸದಲ್ಲಿ ಅಪಾರ ಆಸಕ್ತಿ. ಅವರು ಪ್ರಾಚೀನ ಭಾರತೀಯ ಇತಿಹಾಸವನ್ನು ಅಭ್ಯಾಸ ಮಾಡುವಾಗ ವಿವಿಧ ಪಂಚಾಂಗಗಳ ಪ್ರಕಾರ ಕಾಲದ ಗಣನೆ ಮಾಡುವುದನ್ನು ಅತ್ಯಂತ ಆಸಕ್ತಿಯಿಂದ ಅಭ್ಯಾಸ ಮಾಡಿದ್ದರು. ಖಗೋಳಶಾಸ್ತ್ರದಲ್ಲಿ ಸಂಶೋಧನೆ ನಡೆಸಿದ್ದ. ಸಹಾರಿಗೆ ಭಾರತೀಯ ಪಂಚಾಂಗದ ಕರ್ತೃಗಳು ಕೆಲವು ವೈಜ್ಞಾನಿಕ ತತ್ವಗಳನ್ನು ಉಲ್ಲಂಘಿಸಿ ತಮ್ಮದೇ ಆದ ಪಂಚಾಂಗ ರಚಿಸಿರುವುದನ್ನು ಗಮನಿಸಿ ಇಡೀ ದೇಶಕ್ಕೆ ಏಕರೂಪದ ಪಂಚಾಂಗ ಅಥವಾ ಕ್ಯಾಲೆಂಡರನ್ನು ರೂಪಿಸುವ ಅಗತ್ಯವಿದೆ ಎಂದು ಪ್ರಬಲವಾಗಿ ಪ್ರತಿಪಾದಿಸಿದರು. ಇವರ ಒತ್ತಾಯಪೂರ್ವಕ ಲೇಖನದ ಪರಿಣಾಮವೋ ಎಂಬಂತೆ ೧೯೫೨ ರಲ್ಲಿ ಸಿ.ಎಸ್.ಐ.ಆರ್. "ಕ್ಯಾಲೆಂಡರ್ ಪರಿಷ್ಕರಣಾ ಸಮಿತಿ"ಯನ್ನು ಸಹಾರ ನೇತೃತ್ವದಲ್ಲಿ ನೇಮಿಸಿತು. "ನಮಾಜು ಮಾಡಲು ಹೋದವನ ಮೇಲೆ ಮಸೀದಿ ಬಿದ್ದಂತೆ" ಈ ಕೆಲಸವನ್ನು ಇವರ ಕೊರಳಿಗೆ ಗಂಟು ಹಾಕಲಾಯಿತು. ಧಾರ್ಮಿಕ ಮತ್ತು ಸ್ಥಳೀಯ ಭಾವನೆಗಳ ಪ್ರಭಾವದಿಂದ ರೂಪಿತವಾಗಿದ್ದ ನಕ್ಷತ್ರ ತಿಥಿ ಆಧಾರಿತವಾಗಿದ್ದ ಪಂಚಾಂಗಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ

ಒಳಪಡಿಸಿದ ಸಹಾ ವೈಜ್ಞಾನಿಕ ಆಧಾರವುಳ್ಳ ಒಂದು ಕ್ಯಾಲೆಂಡರನ್ನು ವಿಕ್ರಮ ಶಕೆಯ ಆಧಾರದಲ್ಲಿ ರೂಪಿಸಿದರು.

ಇದರ ಪ್ರಕಾರ ವರ್ಷ ವಸಂತ ವಿಷುವತ್ಕಾಲದ ಮೂರನೇ ದಿನದಿಂದ ಪ್ರಾರಂಭವಾಗಬೇಕು. ಒಂದು ಸಾಮಾನ್ಯ ವರ್ಷದಲ್ಲಿ ೩೬೫ ದಿನಗಳಿದ್ದರೆ ಅಧಿಕ ವರ್ಷದಲ್ಲಿ ೩೬೬ ದಿನಗಳಿರಬೇಕು. "ಚೈತ್ರ" ವರ್ಷದ ಪ್ರಾರಂಭದ ತಿಂಗಳಾಗಿರಬೇಕು. ಚೈತ್ರದಿಂದ ಭಾದ್ರಪದದವರೆಗೆ ಪ್ರತಿತಿಂಗಳು ೩೧ ದಿನಗಳು ಉಳಿದ ತಿಂಗಳುಗಳು ೩೦ ದಿನಗಳನ್ನು ಹೊಂದಿರಬೇಕೆಂದು ಶಿಫಾರಸ್ಸು ಮಾಡಲಾಯಿತು. ಅನೇಕ ಪ್ರಗತಿಪರ ರಾಜ್ಯಗಳು ಕೂಡಲೇ ಈ ಪರಿಷ್ಕೃತ ಕ್ಯಾಲೆಂಡರನ್ನು ಬಳಸಲು ಪ್ರಾರಂಭಿಸಿದವು. ಭಾರತದಂತಹ ದೇಶದಲ್ಲಿ ಧಾರ್ಮಿಕ ಭಾವನೆಗಳಿಗೆ ಅಂಟಿಕೊಂಡ ಪಂಚಾಂಗಗಳ ನಾಡಿನಲ್ಲೂ ಇಂತಹ ಒಂದು ವೈಜ್ಞಾನಿಕ ಆಧಾರವುಳ್ಳ ಹಾಗೂ ಸರ್ವಸಮ್ಮತವಾಗುವಂತಹ ಒಂದು ಕ್ಯಾಲೆಂಡರನ್ನು ರೂಪಿಸುವುದು ಕಡಿಮೆ ಸಾಹಸದ ಕೆಲಸವಾಗಿರಲಿಲ್ಲ. ಅಂತಹ ಸವಾಲನ್ನು ಅತ್ಯಂತ ತೃಪ್ತಿಕರವಾಗಿ ನಿಭಾಯಿಸಿ ಸಹಾ ಈ ದೇಶಕ್ಕೆ ಒಂದು ಉತ್ತಮ ಸೇವೆ ಸಲ್ಲಿಸಿದ್ದಾರೆ. ನಮಗಿಂತಲೂ ಪ್ರಗತಿಪರ ಸಮಾಜವುಳ್ಳ ದೇಶಗಳವರೂ ಈ ಸಾಧನೆಯನ್ನು ಮಾಡಲು ವಿಫಲರಾಗಿದ್ದಾರೆ. ವಿಶ್ವಸಂಸ್ಥೆ ಇಡೀ ವಿಶ್ವಕ್ಕೆ ಮಾನ್ಯವಾಗಬಲ್ಲ ವೈಜ್ಞಾನಿಕ ಕ್ಯಾಲೆಂಡರೊಂದನ್ನು ರೂಪಿಸಿಕೊಳ್ಳಬೇಕೆಂಬ ಸಹಾರ ಸಲಹೆಯನ್ನು ಇವತ್ತಿನವರೆಗೂ ಒಪ್ಪಿಕೊಳ್ಳದೆ ಕ್ಯಾಲೆಂಡರ್‌ನಂತಹ ಸೂಕ್ಷ್ಮ ವಿಷಯದಲ್ಲಿ ದೃಢ ಹಾಗೂ ವೈಜ್ಞಾನಿಕ ತೀರ್ಮಾನ ತೆಗೆದುಕೊಳ್ಳಲು ಹಿಂಜರಿಯುತ್ತಿರುವುದು ಅತ್ಯಂತ ಖೇದದ ಸಂಗತಿಯಾಗಿದೆ. ಗ್ರಿಗೇರಿಯನ್ನ ಕ್ಯಾಲೆಂಡರ್‌ನಲ್ಲಿರುವ ದೋಷಗಳಿಗೆ ಇಂದೂ ಆ ಜನ ಕುರುಡಾಗುವಂತಾಗಿದೆ.

*   *   *   *

"ಮನುಷ್ಯ ತನ್ನನ್ನು ತಾನೇ ರೂಪಿಸಿಕೊಳ್ಳಬಲ್ಲ ಶಿಲ್ಪಿ–ವಿಜ್ಞಾನ ಮತ್ತು ತಂತ್ರಜ್ಞಾನಗಳೆಂಬ ಸಾಧನಗಳಿಂದ ಮನುಷ್ಯ ಇಷ್ಟೆಲ್ಲಾ ಸಾಧಿಸಿದ್ದಾನೆ" ಎಂದು ಬಲವಾಗಿ ನಂಬಿದ್ದ ವಿಜ್ಞಾನಿ ಸಹಾ. ಅವರೆಂದೂ ವಿಜ್ಞಾನವನ್ನು ಹೊಟ್ಟೆಪಾಡಿನ ವೃತ್ತಿಯ ಮಟ್ಟಕ್ಕಿಳಿಸಿರಲಿಲ್ಲ. ವೈಜ್ಞಾನಿಕ ಮನೋಭಾವ ಅವರ ಜೀವನದ ಉಸಿರಾಗಿತ್ತು. ವಿದ್ಯಾರ್ಥಿ ದೆಸೆಯಿಂದಲೇ ಅವರು ಪ್ರತಿಯೊಂದನ್ನು ನಿರ್ದಾಕ್ಷಿಣ್ಯವಾಗಿ ಪ್ರಶ್ನಿಸಿ ಉತ್ತರ ಹುಡುಕಿಕೊಳ್ಳುತ್ತಿದ್ದರು. ಸಂಪ್ರದಾಯದ ಗೊಡ್ಡು ಆಚರಣೆಗಳನ್ನೆಂದೂ ಅವರು ಯಾಂತ್ರಿಕವಾಗಿಯಾಗಲೀ ಒತ್ತಾಯಕ್ಕೆ ಕಟ್ಟುಬಿದ್ದಾಗಲೀ ಆಚರಿಸುತ್ತಿರಲಿಲ್ಲ.

ವಿಜ್ಞಾನ ತಂತ್ರಜ್ಞಾನಗಳಿರುವುದು ಮಾನವ ಕಲ್ಯಾಣಕ್ಕೆ ಅದರಿಂದ ಬಹುಪಾಲು ಜನ ಆಹಾರ ಆರೋಗ್ಯ, ವಸತಿ, ವಸ್ತ್ರ, ಮುಂತಾದ ಪ್ರಾಥಮಿಕ ಅಗತ್ಯಗಳನ್ನು ಪಡೆದುಕೊಂಡಾಗ ಮಾತ್ರ ವಿಜ್ಞಾನದ ಸಾರ್ಥಕತೆ ಎಂದು ಬಲವಾಗಿ ಪ್ರತಿಪಾದಿಸಿದರು. ಅವರ ಜೀವನದ ಕೊನೆಯ ಗಳಿಗೆಯವರೆಗೂ ವಿಜ್ಞಾನದ ಸದ್ಬಳಕೆಯ ಪ್ರಯತ್ನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು ಸಹಾ. ಶಿಯೋರ್ ತಲಿಯಲ್ಲಿರುವ ಅವರ ಮನೆಯಲ್ಲಿ ಪೂಜಾಗೃಹವಿದ್ದು ಅವರ ಕುಟುಂಬದ ಎಲ್ಲಾ ಸದಸ್ಯರು ಧಾರ್ಮಿಕ ಸಂಪ್ರದಾಯಗಳನ್ನು ಆಚರಿಸುತ್ತಿದ್ದರು. ಆದರೆ ಸಹಾ ಇಂತಹ ಗೊಡ್ಡು ಆಚರಣೆಗಳಿಗೆ ಚಿಕ್ಕವಯಸ್ಸಿನಲ್ಲಿಯೇ ಅತ್ಯಂತ ಧೈರ್ಯದಿಂದ ಏಕಾಂಗಿಯಾಗಿ ಪ್ರತಿಭಟಿಸುವ ಧೈರ್ಯ ತೋರಿದರು. ಹಾಗೆಯೇ ಉಚ್ಚ ನೀಚ ಮೇಲು ಕೀಳು ಎಂದು ಪ್ರತಿಪಾದನೆ ಮಾಡುತ್ತಿದ್ದ ಸಾಂಪ್ರದಾಯಿಕ ಹಿಂದೂಧರ್ಮದ ಬಗೆಗೆ ಸಹಾರಿಗೆ ತುಂಬಾ ತಿರಸ್ಕಾರವಿತ್ತು. ತಮ್ಮ ಹುಟ್ಟಿನಿಂದ ಬಂದಿದ್ದ ಜಾತಿ ಕಳಂಕ 'ಸಹಾ'ರಿಗೆ ಹಲವು ಬಾರಿ ನೋವುಂಟು ಮಾಡಿದ್ದರಿಂದ ಆ ಧರ್ಮದ ಬಗೆಗೆ ಅದರ ಪ್ರತಿಪಾದನೆಗಳ ಬಗೆಗೆ ಸಹಾರಿಗೆ ತುಂಬಾ ತಿರಸ್ಕಾರವಿದ್ದುದು ತುಂಬಾ

ಸ್ವಾಭಾವಿಕವೇ. ಅವರಿಗೆ ಸಾಮಾಜಿಕ ನ್ಯಾಯದ ಬಗೆಗೆ ಅಪಾರ ಕಾಳಜಿ. ಅವರ ಮನೆಯಲ್ಲಿ ಯಾರಾದರು ಮನೆಕೆಲಸದವರನ್ನು "ಸೇವಕ, ಎಂದು ಸಂಭೋಧಿಸಿದರೆ ಸಹಾ ಕೋಪಗೊಳ್ಳುತ್ತಿದ್ದರು." ಅವರು ಮನುಷ್ಯರಲ್ಲವೆ ಅವರಿಗೆ ಹೆಸರಿಲ್ಲವೇ ? ಹೆಸರಿನಿಂದಲೇ ಅವರನ್ನೇಕೆ ಕರೆಯುವುದಿಲ್ಲ ? ಎಂದು ಕುಪಿತರಾಗಿ ಹೇಳುತ್ತಿದ್ದರು.

ಸಹಾ ತಮ್ಮ "ತಾಪ ಅಯಾನೀಕರಣ ಸಿದ್ಧಾಂತ"ವನ್ನು ಮಂಡಿಸಿದ ಮೇಲೆ ಒಮ್ಮೆ ಢಾಕಾಕ್ಕೆ ಭೇಟಿಕೊಟ್ಟಾಗ ವಕೀಲರೊಬ್ಬರ ಭೇಟಿಯಾಯಿತು. ಅವರು ಸಹಾರ ಸಂಶೋಧನೆಯ ಬಗೆಗೆ ವಿಚಾರಿಸಿ ತಿಳಿದುಕೊಂಡ ನಂತರ "ನಿಮ್ಮ ಸಂಶೋಧನೆಯಲ್ಲಿ ಹೊಸದೇನಿಲ್ಲಾ, ಎಲ್ಲವೂ ವೇದದಲ್ಲಿ ಆಗಲೇ ಬಂದಿದೆ" ಎಂದು ಹೇಳಿದರು. ಆಗ ಸಹಾ "ಹಾಗಾದರೆ ದಯವಿಟ್ಟು ವೇದಗಳ ಯಾವ ಭಾಗದಲ್ಲಿ ನಕ್ಷತ್ರಗಳಲ್ಲಿನ ತಾಪ ಆಯಾನೀಕರಣ ಸಿದ್ಧಾಂತ ಪ್ರಸ್ತಾಪಿಸಲ್ಪಟ್ಟಿದೆ. ಎಂಬುದನ್ನು ದಯವಿಟ್ಟು ತಿಳಿಸಿ" ಎಂದು ಕೇಳಿದರು. ಆಗ ಆ ಮಹಾನುಭಾವರು ನಾನೇ ಸ್ವತಃ ವೇದಗಳನ್ನು ಓದಿಲ್ಲ. ಆದರೆ ನೀವು ಹೇಳುವ ಈ ವೈಜ್ಞಾನಿಕ ಸಂಶೋಧನೆಗಳು ವೇದಗಳಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಎಂದು ನನ್ನ ನಂಬಿಕೆ ಎಂದು ಜಂಬ ಕೊಚ್ಚಿದರು. ಇಂತಹ ಒಣಜಂಬದ ಅಂಧಾಭಿಮಾನವನ್ನು ಸಹಾ ತೀವ್ರವಾಗಿ ವಿರೋಧಿಸುತ್ತಿದ್ದರು. 'ಸಹಾ' ವೇದ ಉಪನಿಷತ್ತುಗಳು ಮತ್ತು ಪುರಾಣಗಳನ್ನು ಅತ್ಯಂತ ಶ್ರದ್ಧೆಯಿಂದಲೇ ಅಭ್ಯಾಸ ಮಾಡಿದವರು. ಅವರೆಂದೂ ಅವು ಪ್ರತಿಪಾದನೆ ಮಾಡುತ್ತಿದ್ದ ಒಳ್ಳೆಯ ಅಂಶಗಳನ್ನು ಮೆಚ್ಚಿಕೊಳ್ಳಲು ಹಿಂಜರಿಯುತ್ತಿರಲಿಲ್ಲ. ಆದರೆ ಅದೇ ಸಂದರ್ಭದಲ್ಲಿ ಅದು "ವೇದಗಳಲ್ಲಿ ಎಲ್ಲವೂ ಇದೆ" ಎಂಬ ಒಣ ಜಂಭದ ಮಾತಾದಾಗ ಅದನ್ನು ಅತ್ಯಂತ ಉಗ್ರವಾಗಿ ಖಂಡಿಸುತ್ತಿದ್ದರು. ನಮ್ಮ ಅಂಧ ರಾಷ್ಟ್ರಾಭಿಮಾನದಿಂದ ಪಾಶ್ಚಿಮಾತ್ಯ ಪ್ರಾಯೋಗಿಕ ವಿಜ್ಞಾನವನ್ನು ಕಡೆಗಣಿಸುವುದು ಮೂರ್ಖತನದ ಪರಮಾವಧಿಯೆಂದು ಸಹಾ ನಂಬಿದ್ದರು. ಸಹಾರಿಗೆ ತಮ್ಮ ಭವ್ಯ ಪರಂಪರೆಯ ಬಗೆಗೆ

ಭ್ರಮೆಗಳಿರಲಿಲ್ಲ. ವ್ಯಕ್ತಿಗತ ಜೀವನದಲ್ಲಿ ಧರ್ಮಗಳ ಮಹಾನ್ ಸಂಸ್ಥಾಪಕರು ಪ್ರತಿಪಾದಿಸಿದ ತತ್ವಗಳನ್ನ ಗುರಿಗಳನ್ನು ಆಧುನಿಕ ವಿಜ್ಞಾನ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಸಾಧಿಸಿದೆ ಎಂದು ಸಹಾ ಪ್ರತಿಪಾದಿಸುತ್ತಿದ್ದರು. ಹೀಗಾಗಿ ಈ ರಾಷ್ಟ್ರಗಳಲ್ಲಿ ವಿಜ್ಞಾನ ಧರ್ಮವನ್ನು ಸ್ಥಳಾಂತರಿಸಿದಂತಾಗಿದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಸುಭಾಸ್ ಚಂದ್ರಬೋಸರು ಬಂಗಾಳದ ಯುವಕರ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಲು ಸಹಾರವರನ್ನು ಆಹ್ವಾನಿಸಿದರು. ಅವರನ್ನುದ್ದೇಶಿಸಿ ಸಹಾ ಈ ಕೆಳಕಂಡಂತೆ ಮಾತನಾಡಿದರು.

"ಎರಡು ಸಾವಿರ ವರ್ಷಗಳ ಹಿಂದೆ ಚೀನೀಯರು ತಮ್ಮ ಉತ್ತರದ ಗಡಿಯಲ್ಲಿ ಒಂದು ಬೃಹತ್ ಗೋಡೆಯನ್ನು ನಿರ್ಮಿಸಿ ಶಾಶ್ವತವಾಗಿ ದಾಳಿಕೋರರನ್ನು ದೂರವಿಡುವುದಾಗಿ ಆಲೋಚಿಸಿದರು. ಹಾಗಾದರೂ ಅವರು ಪದೇ ಪದೇ ಮಂಚೂಗಳು, ಮೊಘಲರಿಂದ ಸೋಲಲ್ಪಟ್ಟರು. ನಮ್ಮ ಸಾಂಪ್ರದಾಯಿಕ ಹಿಂದೂ ಧರ್ಮದ ರಕ್ಷಕರು ಕೆಳಜಾತಿಗಳ ಜನರ ಮೇಲೆ ಆಳ್ವಿಕೆ ಮಾಡಲು ಕುರುಡು ನಂಬಿಕೆ ಮತ್ತು ಅಂಧಾಚಾರಣೆಗಳ ಮಹಾಗೋಡೆಯೊಂದನ್ನು ನಿರ್ಮಿಸಿದ್ದರ ಫಲವಾಗಿ ಭಾರತೀಯರೆಲ್ಲರೂ ತುರ್ಕರು, ಅಫ್‌ಘನ್ನರು ಮತ್ತು ಬ್ರಿಟೀಷರಿಂದ ಸಾವಿರಾರು ವರ್ಷಗಳ ಕಾಲ ಪರಕೀಯರ ಒದ್ದಾಟದ ಕಾಲ್ಚೆಂಡಾದರು. ಇಂತಹ ಹುಸಿ ಆದರ್ಶ ಭ್ರಮಾಲೋಕದಲ್ಲಿ ನಾವು ಇಂದಿಗೂ ಓಲಾಡುವುದು ಎಷ್ಟು ಸಮಂಜಸ?" ಎಂದು ಯುವಕರನ್ನು ಪ್ರಶ್ನಿಸಿದರು.

ಇಂದಿನ ನಾಗರಿಕತೆಯ ಕೀಲಿಕೈ ವಿಜ್ಞಾನ. ನಾವು ಬದುಕುಳಿಯಲು ಪ್ರಕೃತಿಯೊಂದಿಗೆ ಹೋರಾಡಬೇಕಿದೆ. ಈ ಹೋರಾಟದಲ್ಲಿ ಗೆಲ್ಲಲು ವಿಜ್ಞಾನ ಒಂದು ಸಾಧನ ಎಂದು ಸಹಾ ಪ್ರತಿಪಾದಿಸಿದರು.

ಮೇಘನಾದ ಸಹಾ ೯ನೇ ಶತಮಾನದ ಸಂಸ್ಕೃತದ ರಸೇಂದ್ರ ಚಿಂತಾಮಣಿಯ ಒಂದು ಭಾಗವನ್ನು ಪದೇ ಪದೇ ಉದ್ಧರಿಸುತ್ತಿದ್ದರು.

"ನಾನು ಪಂಡಿತರ ತುಟಿಗಳಿಂದ ಬಹಳಷ್ಟು ಕೇಳಿದ್ದೇನೆ. ನಾನು ಪವಿತ್ರ ಗ್ರಂಥಗಳಲ್ಲಿ ಸಾಧಿಸಿರುವ ಅನೇಕ ಸೂತ್ರಗಳನ್ನು ನೋಡಿದ್ದೇನೆ. ಆದರೆ ನಾನೇ ಸ್ವತಃ ಮಾಡದಿರುವ ಯಾವುದನ್ನೂ ದಾಖಲಿಸುತ್ತಿಲ್ಲ. ನಾನು ನನ್ನ ಕ್ರಿಯಿಂದಲೇ ಹಿರಿಯರೆದುರು ಮಾಡಿದವುಗಳನ್ನು ಮಾತ್ರ ನಿರ್ಭಯವಾಗಿ ದಾಖಲಿಸುತ್ತಿದ್ದೇನೆ. ಪ್ರಯೋಗಗಳ ಮೂಲಕ ತಾವು ಶೋಧಿಸುವುದನ್ನು ಮಾಡಿ ತೋರಿಸಬಲ್ಲವರು ಮಾತ್ರ ನಿಜವಾದ ಗುರುಗಳು. ತಮ್ಮ ಗುರುಗಳಿಂದ ಕಲಿತು ಪ್ರಯೋಗಗಳನ್ನು ಸ್ವತಃ ಮಾಡಿ ಅವನ್ನು ಉತ್ತಮಪಡಿಸುವವರು ಮಾತ್ರ ಅರ್ಹ ಶಿಷ್ಯರು. ಉಳಿದವೆಲ್ಲರೂ ಕೇವಲ ರಂಗಮಂಚದ ನಟರು ಮಾತ್ರ."

ಹೀಗೆ ವಿಜ್ಞಾನ ಎಂಬುದು ಸಹಾರಿಗೆ ಕೇವಲ ಒಂದು ವೃತ್ತಿ ಮಾತ್ರವಾಗಿರಲಿಲ್ಲ, ಅದು ಅವರ ಜೀವನ ಕ್ರಮವಾಗಿತ್ತು. ವೈಜ್ಞಾನಿಕ ವಿಧಾನವನ್ನು ಪ್ರಯೋಗಾಲಯಗಳಲ್ಲಿ ಮಾತ್ರ ಅನುಸರಿಸಿ ಮನೆಯಲ್ಲಿ ಅರ್ಥಹೀನ ಆಚರಣೆಗಳಲ್ಲಿ ಮುಳುಗುವ ದ್ವಿಮುಖ ನೀತಿಯನ್ನು ಅವರೆಂದೂ ಅನುಸರಿಸಿದವರಲ್ಲ. ಇದರ ಬಗೆಗೆ ಅವರದು ಸದಾ ನೇರ ಹಾಗೂ ನಿರ್ಭಯ ನಡೆ. ಸಹಾರ ತಂದೆತಾಯಿಗಳು ತೀರಿಕೊಂಡಾಗ ಸಹಾ ಅವರ ಶ್ರಾದ್ಧವನ್ನು ಮಾಡುವ ಗೋಜಿಗೇ ಹೋಗಲಿಲ್ಲ. ಬಡುಬಡವರನ್ನು ಕರಿಸಿ ಅವರಿಗೆ ಸಂತೃಪ್ತಿಯ ಊಟ ಹಾಕಿಸಿ ವಿನೂತನ ರೀತಿಯಲ್ಲಿ ತಮ್ಮ ತಂದೆ ತಾಯಿಗಳ ಮರಣಕ್ಕೆ ಶ್ರದ್ಧಾಂಜಲಿ ಅರ್ಪಿಸಿದರು. ಅವರ ನಡೆ ಮತ್ತು ನುಡಿಯಲ್ಲಿ ಯಾವುದೇ ವ್ಯತ್ಯಾಸವಿಲ್ಲದಂತೆ ನಡೆದುಕೊಳ್ಳುತ್ತಿದ್ದವರು ಸಹಾ.

ಅಧ್ಯಾಯ ೭

ದೇಶ ಕಟ್ಟುವ ಕೆಲಸ

ಸಂಯುಕ್ತ ಪ್ರಾಂತ್ಯಗಳ ಪ್ರಥಮ ಕಾಂಗ್ರೆಸ್ ಸರ್ಕಾರದ ಕೈಗಾರಿಕಾ ಸಚಿವರಾಗಿದ್ದ ಡಾ|| ಖಟ್ಜುರವರನ್ನು ೧೯೩೮ರಲ್ಲಿ ಬೆಂಕಿಪೊಟ್ಟಣ ತಯಾರಿಕಾ ಕಾರ್ಖಾನೆಯನ್ನು ಉದ್ಘಾಟಿಸಲು ಕರೆಯಲಾಗಿತ್ತು. ಅದನ್ನು ಉದ್ಘಾಟಿಸುತ್ತಾ ಖಟ್ಜು ಮೈದುಂಬಿ ಮಾತನಾಡಿ "ಬೃಹತ್ ಕೈಗಾರೀಕರಣದ ದಿಸೆಯಲ್ಲಿ ಈ ಕಾರ್ಖಾನೆಯ ಸ್ಥಾಪನೆ ಒಂದು ಮಹಾನ್ ಹೆಜ್ಜೆಯೆಂದು ಘೋಷಿಸಿದರು. ಇದನ್ನು ತಿಳಿದ ಮೇಘನಾದರಿಗೆ ಗಾಬರಿಯಾಯಿತು. ಕೈಗಾರಿಕಾ ಕ್ಷೇತ್ರ ಅಭಿವೃದ್ಧಿಯ ಹೊಣೆ ಹೊತ್ತ ಮಂತ್ರಿಯೊಬ್ಬರ ಇಂತಹ ಅಸಂಬದ್ಧ ಮಾತುಗಳು ಸಹಾರನ್ನು ಸುಮ್ಮನೆ ಕೂಡಲು ಬಿಡಲಿಲ್ಲ. ತಮ್ಮ ಕಾಲೇಜು ಸಹಪಾಠಿ ಹಾಗೂ ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸುಭಾಸ್ ಚಂದ್ರಬೋಸರಲ್ಲಿಗೆ ತೆರಳಿ ನಿಮ್ಮ ಮುಖಂಡರು ಕೈಗಾರೀಕರಣದ ಬಗೆಗೆ ಇಂತಹ ಅಭಿಪ್ರಾಯಗಳನ್ನು ಹೊಂದಿದ್ದರೆ ದೇಶಕ್ಕೆ ದುರ್ದಿನಗಳು ಬರುವ ಕಾಲ ದೂರವಿಲ್ಲ. ಸ್ವಾತಂತ್ರ್ಯ ಹೋರಾಟದಿಂದ ರಾಜಕೀಯ ಸ್ವಾತಂತ್ರ್ಯ ಮಾತ್ರ ಪಡೆದರೆ ಸಾಲದು. ಹಸಿವು, ಅನಾರೋಗ್ಯ ಅನಕ್ಷರತೆ, ಬಡತನ, ನಿರುದ್ಯೋಗ, ನಿರ್ವಸತಿ ಮುಂತಾದ ಸಮಸ್ಯೆಗಳಿಂದ ದೇಶದ

ಬಹುಸಂಖ್ಯಾತ ಜನರನ್ನು ಬಿಡುಗಡೆ ಮಾಡಿದಾಗ ಮಾತ್ರ ಈ ದೇಶವ ರಾಜಕೀಯ ಸ್ವಾತಂತ್ರ್ಯಕ್ಕೆ ಒಂದು ಅರ್ಥ ಬರುತ್ತವೆ. ಈ ದೇಶಕ್ಕೆ ಬ್ರಿಟೀಷರು ಸ್ವಾತಂತ್ರ್ಯ ನೀಡಿದಾಗ ಹೇಗೆ ದೇಶ ಕಟ್ಟಬೇಕೆಂದು ಆಲೋಚಿಸುವ ಬದಲು ಈಗಿನಿಂದಲೇ ಅದರ ಕಡೆ ಕಾಂಗ್ರೆಸ್ ಆಲೋಚಿಸುವಂತಾಗಬೇಕೆಂದು ಒತ್ತಾಯ ಮಾಡಿದರು. ಇವರ ಒತ್ತಾಯಕ್ಕೆ ಮಣಿದು ಸುಭಾಷರು ಅವರ ಸಲಹೆಯಂತೆ "ರಾಷ್ಟ್ರೀಯ ಯೋಜನಾ ಆಯೋಗ"ವೊಂದನ್ನು ರಚಿಸಲು ಮುಂದಾದರು. ೧೯೩೮ ರಲ್ಲಿ ಇಂತಹ ಆಯೋಗವೊಂದು ನೆಹರು ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟು ಹುರುಪಿನಿಂದ ಕೆಲಸ ಪ್ರಾರಂಭಿಸಿತು. ಕೆ.ಟಿ. ಷಾ ಅದರ ಕಾರ್ಯದರ್ಶಿಗಳಾದರು. ಈ ಯೋಜನಾ ಆಯೋಗ ೨೯ ಉಪ ಸಮಿತಿಗಳನ್ನು ಹೊಂದಿತ್ತು. ಅದರಲ್ಲಿ "ಇಂಧನ ಮತ್ತು ವಿದ್ಯುಚ್ಛಕ್ತಿ" ಉಪಸಮಿತಿಯ ಅಧ್ಯಕ್ಷರಾಗಿ ಸಹ ಆಯ್ಕೆಯಾದರು.

ಈ ಕಾಲಕ್ಕಾಗಲೇ ಸಹಾ ಸೋವಿಯತ್ ಗಣರಾಜ್ಯದ ಯೋಜನಾ ಮಾದರಿಯನ್ನು ಅಭ್ಯಾಸ ಮಾಡಿ ಅದರಿಂದ ತುಂಬಾ ಪ್ರಭಾವಿತ ರಾಗಿದ್ದರು. ಇದರ ಬಗೆಗೆ ಸಹಾ ತಮ್ಮ "ಸೈನ್ಸ್ ಅಂಡ್ ಕಲ್ಚರ್" ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಬರೆದಿದ್ದರು. "ರಷ್ಯನ್ನರು ಮಾಡಿದಂತೆ ಕೈಗಾರಿಕಾ ಯೋಜನೆ ಟೆನ್ನಿಸಿಯ ಕಣಿವೆಯೋಜನೆಯಂತೆ ನದಿ ನಿಯಂತ್ರಣ" ಎಂಬುದು ಅವರ ಮುಖ್ಯ ಆದರ್ಶವಾಗಿತ್ತು. ರಷ್ಯನರು ಈ ಯೋಜನೆಗಳನ್ನು ವೈಜ್ಞಾನಿಕವಾಗಿ ರೂಪಿಸಲು ಅಲ್ಲಿಯ "ಅಕಾಡೆಮಿ ಆಫ್ ಸೈನ್ಸ್‌ನ್ನು" ಬಳಸಿಕೊಂಡ ಕ್ರಮದಿಂದ ಅವರು ತುಂಬಾ ಪ್ರಭಾವಿತರಾಗಿದ್ದರು. ಯೋಜನೆಗೆ ಸಂಬಂಧಿಸಿದಂತೆ ಅವರು ತುಂಬಾ ಸ್ವಾಭಾವಿಕವಾಗಿ "ಒಂದು ದೇಶದ ಉತ್ಪಾದನಾ ಆರ್ಥಿಕ ವ್ಯವಸ್ಥೆ ಆದೇಶದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ನಿರ್ಧರಿಸುತ್ತವೆ" ಎಂಬ ಮಾರ್ಕ್ಸವಾದಿ ದೃಷ್ಟಿಕೋನದ ಸಮೀಪ ಬಂದಿದ್ದರು.

ಸ್ವತಂತ್ರ ಭಾರತ ದೇಶವನ್ನು ಹೇಗೆ ಕಟ್ಟಬೇಕೆಂಬ ಬಗೆಗೆ ಅವರು ತಮ್ಮದೇ ಆದ ಅನೇಕ ವೈಜ್ಞಾನಿಕ ಮಾದರಿಯನ್ನು ಪ್ರತಿಪಾದಿಸಿದರು. ಇಂತಹ ಪ್ರತಿಪಾದನೆಗಳಲ್ಲಿ ಸಹಾ ರಾಷ್ಟ್ರಪಿತ ಗಾಂಧೀಜಿಯವರನ್ನು ಅತ್ಯುಗ್ರವಾಗಿ ಖಂಡಿಸಲು ಸ್ವಲ್ಪವೂ ಹಿಂಜರಿಯಲಿಲ್ಲ. ಸ್ವಾತಂತ್ರ್ಯ ಹೋರಾಟದ ನಿರ್ವಿವಾದ ರಾಷ್ಟ್ರೀಯ ನಾಯಕನ ಪರಿಕಲ್ಪನೆಗಳನ್ನು ಅತ್ಯಂತ ಉಗ್ರವಾಗಿ ವಿರೋಧಿಸುವ ಎದೆಗಾರಿಕೆಯನ್ನು ಸಹಾರಂತವರು ಮಾತ್ರ ತೋರಿಸಲು ಸಾಧ್ಯ. ಗಾಂಧೀಜಿಯವರ "ಖಾದಿ ಮತ್ತು ಚರಕ" "ಮರಳಿ ಹಳ್ಳಿಗೆ" ಸಿದ್ಧಾಂತಗಳನ್ನು ಅಕಾಲಿಕ ಮತ್ತು ರೋಮಾಂಚಕ ಆದರ್ಶ ಕಲ್ಪನೆಗಳೆಂದು ಜರಿದರು. ಎಲ್ಲರಿಗೂ ಸನ್ಯಾಸವನ್ನು ಬೋಧಿಸುವ ಗಾಂಧೀಜಿಯವರನ್ನು 'ಸಹಾ' ತರಾಟೆಗೆ ತೆಗೆದುಕೊಂಡರು. "ಗಾಂಧೀಜಿಯವರ ಸನ್ಯಾಸ ಜೀವನ ಎಷ್ಟೇ ಮಹೋನ್ನತವಾದರೂ ಅದು ಅಸಂಖ್ಯಾತ ಸಾಮಾನ್ಯ ಹುಲು ಮಾನವರನ್ನು ಸಂತೃಪ್ತಿಗೊಳಿಸಲಾರದು. ನಾಲ್ಕುನೂರು ಮಿಲಿಯನ್ ಜನರಲ್ಲಿ ಕೇವಲ ಒಬ್ಬ ಮಹಾತ್ಮ ಮಾತ್ರ ಇದ್ದಾನೆ". ಅರ್ಥಶಾಸ್ತ್ರ ಮತ್ತು ರಾಷ್ಟ್ರೀಯ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ದುರಾದೃಷ್ಟವಶಾತ್ ಗಾಂಧೀಜಿಯವರು ತಪ್ಪು ಮಾಹಿತಿಯುಳ್ಳ ನಂಬಲನರ್ಹವಾದ ಉನ್ಮತ್ತಾಭಿಮಾನಿಗಳಿಂದ ಸುತ್ತುವರಿಯಲ್ಪಟ್ಟಿದ್ದಾರೆ. ಚರಕ ಮತ್ತು ಎತ್ತಿನ ಗಾಡಿಯ ಸಿದ್ಧಾಂತಿಗಳು ಸತ್ಯವನ್ನು ತಮ್ಮ ಸಮೀಪ ಸುಳಿಯಲು ಕೂಡಾ ಬಿಡುತ್ತಿಲ್ಲ. ಇದಲ್ಲದೆ ಗಾಂಧೀಜಿ ಅಸಂಖ್ಯಾತ ಆಷಾಢ ಭೂತಿಗಳಿಂದಲೂ ಸುತ್ತುವರಿಯಲ್ಪಟ್ಟಿದ್ದಾರೆ. ಈ ಆಷಾಢಭೂತಿ ದುಡ್ಡಿನ ಥೈಲಿಗಳು ತಮ್ಮ ಅನುಕೂಲಕ್ಕಾಗಿ ಚರಕ ಮತ್ತು ಹಳ್ಳಿಯ ಗಾಣವನ್ನು ಜಾಹಿರಾತು ಮಾಡುತ್ತಿದ್ದಾರೆ. ಇದು ಬಹಳ ಸೂಕ್ಷ್ಮವಾದ ಆಷಾಢಭೂತಿತನ. ಉನ್ಮತ್ತಾಭಿಮಾನ ಕಣ್ಣಿಗೆ ರಾಚುವಂತೆ ಕಾಣುತ್ತದೆ. ಆದರೆ ಈ ಆಷಾಢಭೂತಿತನ ಅಷ್ಟು ಸುಲಭವಾಗಿ ಗೋಚರಿಸುವುದಿಲ್ಲ.

ಇವರ ಬಗೆಗೆ ನಾವು ಅತಿಹೆಚ್ಚು ಜಾಗರೂಕರಾಗಿರಬೇಕಾಗಿದೆ' ಎಂದು ಎಚ್ಚರಿಸಿದರು.

ಯೋಜನಾ ಆಯೋಗದ "ವಿದ್ಯುಚ್ಛಕ್ತಿ ಮತ್ತು ಇಂಧನ" ಉಪಸಮಿತಿಯ ಅಧ್ಯಕ್ಷರಾಗಿ ಹೊಸ ಸರ್ಕಾರದ ಮೊದಲ ಕರ್ತವ್ಯ ವಿದ್ಯುಚ್ಛಕ್ತಿ ಮತ್ತು ಇಂಧನಗಳನ್ನು ಅಭಿವೃದ್ಧಿ ಪಡಿಸುವುದಾಗಬೇಕೆಂದು ಪ್ರತಿಪಾದಿಸಿದರು. ಈ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಿ ನಾವು ಬೃಹತ್ ಕೈಗಾರಿಕೀಕರಣದೆಡೆಗೆ ದಾಪುಗಾಲು ಹಾಕಬೇಕಾಗಿದೆ. ಈ ದೇಶದಲ್ಲಿ ವಿಪುಲವಾಗಿರುವ ಖನಿಜ ಸಂಪತ್ತನ್ನು ಬಳಸಿಕೊಂಡು ಕಾಸ್ಟಿಕ್ ಸೋಡಾ, ಗಂಧಕಾಮ್ಲ, ತಾಮ್ರ, ಕಬ್ಬಿಣ, ಅಲ್ಯುಮಿನಿಯಂ ಮುಂತಾದ ಲೋಹಗಳನ್ನು ಉತ್ಪಾದಿಸುವ ಕಾರ್ಖಾನೆಗಳನ್ನು ಸ್ಥಾಪಿಸಬೇಕಾಗಿದೆ. ಇಪ್ಪತ್ತಕ್ಕೂ ಹೆಚ್ಚು ಟಾಟ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳನ್ನು ಸ್ಥಾಪಿಸಬಹುದಾಗಿದೆ. ಗುಂಡು ಸೂಜಿಯಿಂದ ಹಿಡಿದು ಯಂತ್ರೋಪ ಕರಣಗಳವರೆಗೆ ಎಲ್ಲವನ್ನೂ ವಿದೇಶದಿಂದ ಆಮದು ಮಾಡಿಕೊಳ್ಳುವ ಪ್ರವೃತ್ತಿ ಈ ಕೂಡಲೇ ನಿಲ್ಲಬೇಕು. ಜನಸಾಮಾನ್ಯರ ಬಳಕೆಗೆ ಅವರ ಕೊಳ್ಳುವ ಸಾಮರ್ಥ್ಯಕ್ಕೆ ಅಗತ್ಯ ವಸ್ತುಗಳನ್ನೊದಗಿಸಲು ಬೃಹತ್ ಕೈಗಾರಿಕೀಕರಣವೇ ಮದ್ದು. ಇದನ್ನು ಬಿಟ್ಟು ನಮಗೆ ಬೇರೆ ಮಾರ್ಗವೇ ಇಲ್ಲ ಎಂಬ ಘೋಷಣೆಯೊಂದಿಗೆ ಗಾಂಧೀಜಿಯವರಷ್ಟೇ ಅತ್ಯುಗ್ರವಾಗಿ ರಾಷ್ಟ್ರೀಯ ಸ್ವಾವಲಂಬನೆಯನ್ನು ಸಹಾ ಪ್ರತಿಪಾದಿಸಿದರು. ಟ್ರಾಕ್ಟರ್ ಮತ್ತು ಬೃಹತ್ ಯಂತ್ರಗಳ ಪರ ಅವರು ಬಡತನವನ್ನು ಮೂಲೋತ್ಪಾಟನೆ ಮಾಡಲೂ ಜನ ಜೀವನ ಮಟ್ಟ ಸುಧಾರಿಸಲು ಶೀಘ್ರ ಕೈಗಾರಿಕೀಕರಣ ಅತ್ಯಗತ್ಯ ಎಂದು ಪ್ರಬಲವಾಗಿ ಪ್ರತಿಪಾದನೆ ಮಾಡಿದರು. ಸಹಾರವರ ಪ್ರಕಾರ ರಾಷ್ಟ್ರೀಯ ಯೋಜನಾ ಆಯೋಗದ ಕೆಲಸ ರಾಷ್ಟ್ರೀಯ ಪುನರ್ ನಿರ್ಮಾಣದ ಸಮಸ್ಯೆಯನ್ನೇ ಸರಿಯಾದ ರೀತಿಯಲ್ಲಿ ನಿಭಾಯಿಸುವುದು. ಯೋಜನೆ ಎನ್ನುವುದು ರಾಷ್ಟ್ರೀಯ ಚಟುವಟಿಕೆ ಗಳಾದ ವ್ಯವಸಾಯ, ಪ್ರಾಥಮಿಕ ಶಿಕ್ಷಣ, ಆರೋಗ್ಯಗಳಂತಹ

ಯಾವುದಾದರೂ ಒಂದು ಅಂಶಕ್ಕೆ ಮಾತ್ರ ಮೀಸಲಾಗಿರಬಾರದು. ಅದು ಜೀವನದ ಎಲ್ಲಾ ಅಂಶಗಳನ್ನು ಒಳಗೊಳ್ಳಬೇಕು. ಅವರು ಕೈಗಾರಿಕೆಗಳು ಮತ್ತು ನದೀ ಕಣಿವೆ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಡದೇ ಇದ್ದದ್ದಕ್ಕಾಗಿ ಬಂಗಾಳ ಯೋಜನೆಯನ್ನು ಅತ್ಯಂತ ತೀವ್ರವಾಗಿ ಟೀಕಿಸಿದರು. ದೇಶದ ಜನ ಗೌರವಯುತವಾದ ಯೋಗ್ಯ ಜೀವನ ಮಟ್ಟವನ್ನು ಹೊಂದಲು ಯೋಜನೆ ಬೃಹತ್ ಕೈಗಾರಿಕೆಗಳು ಮತ್ತು ಕೃಷಿ ಆಧಾರಿತ ಕೈಗಾರಿಕೆಗಳಾದ ಸಕ್ಕರೆ, ಕಾಗದ, ಬಟ್ಟೆ, ಎಣ್ಣೆ ಉತ್ಪಾದನೆಯ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಪ್ರತಿಪಾದಿಸಿದರು. ಸಹಾರು ಬೃಹತ್ ಕೈಗಾರಿಕೀಕರಣದ ಕಟ್ಟಾ ಪ್ರತಿಪಾದಕರಾಗಿದ್ದರು. ಅವರು ಕೃಷಿಯನ್ನೆಂದೂ ಕಡೆಗಣಿಸಿರಲಿಲ್ಲ.

ಭಾರತದಂತಹ ಕೃಷಿ ಪ್ರಧಾನ ದೇಶದಲ್ಲಿ ವ್ಯವಸಾಯವನ್ನು ಕಡೆಗಣಿಸುವುದು ಸಾಧ್ಯವೇ ಇಲ್ಲ. ಸಿಂಧೂನದಿ ನಾಗರಿಕತೆಯಿಂದಲೂ ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಇನ್ನು ಕೃಷಿಗೆ ದೊರಕಬೇಕಾಗಿದ್ದ ಪ್ರಾಮುಖ್ಯತೆ ದೊರೆಯದಿದ್ದುದ್ದನ್ನು ಸಹ ಪ್ರಬಲವಾಗಿ ಖಂಡಿಸುತ್ತಿದ್ದರು. ತಮ್ಮ ಹಳ್ಳಿಯ ಬಾಲ್ಯದ ದಿನಗಳಲ್ಲಿ ಪ್ರವಾಹ ಬಂದಾಗ ಜನರು ಅನುಭವಿಸುವ ತೊಂದರೆಗಳು, ಸಾವು – ಕಷ್ಟ – ನಷ್ಟಗಳು ಸಹಾರ ಎಳೆಯ ಮನಸ್ಸನ್ನು ಆಳವಾಗಿ ಕಲಕಿದ್ದವು. ೧೯೧೩ ಮತ್ತು ೧೯೩೫ರ ಧಾಮೋದರ್ ನದಿಯ ಪ್ರವಾಹದ ಪ್ರಕೋಪಗಳು ಸಹಾರ ಮನಸ್ಸಿನ ಮೇಲೆ ಮಾಯಲಾಗದ ಗಾಯವನ್ನುಂಟು ಮಾಡಿದ್ದವು. ಪಿ.ಸಿ. ರೇಯವರ ಪರಿಹಾರ ತಂಡದಲ್ಲೂ ಸಹಾ ಕೆಲಸ ಮಾಡಿದ್ದರು. ಬರಗಾಲದ ಕಮಿಷನ್‌ಗಳು ತಮ್ಮ ವರದಿಗಳಲ್ಲಿ ಪದೇ ಪದೇ ವಿಶಾಲ ಜನಸಮೂಹಗಳು ಬರಗಾಲದ ದವಡೆಗೆ ಸಿಕ್ಕಿ ಸಾಯುವುದನ್ನು ವಿವರಿಸಿದ್ದವು. ಇವೆಲ್ಲವುಗಳಿಂದ ಪ್ರಭಾವಿತರಾದ ಸಹಾ ಸ್ವಾಭಾವಿಕವಾಗಿ ಯೋಜನೆಯಲ್ಲಿ ಕೃಷಿಗೂ ಪ್ರಥಮ ಆದ್ಯತೆ ನೀಡಿದರು. ಈ ದೇಶದಲ್ಲಿ ಹರಿಯುವ ಅನೇಕ ನದಿಗಳ ಶಕ್ತಿಯನ್ನು ಕೈಗಾರಿಕೆಗಳಿಗೆ

ವಿದ್ಯುಚ್ಛಕ್ತಿಯನ್ನೊದಗಿಸಲು ಬಳಸಬೇಕೆಂದು ಪ್ರತಿಪಾದಿಸಿದರು. ಇದಕ್ಕಾಗಿ ಅವರು ಅಮೆರಿಕಾದ ಟೆನ್ನೆಸಿಯಾ ನದಿ ಕಣಿವೆ ಯೋಜನೆಯನ್ನು ಹೋಗಿ ನೋಡಿ ಅದರಿಂದ ತುಂಬಾ ಪ್ರಭಾವಿತರಾದರು. ಆ ಯೋಜನೆಯಲ್ಲಿ ಕೆಲಸ ಮಾಡಿದ್ದ ವರುಡೆನ್ನರಂತಹ ಅನೇಕ ಪ್ರಖ್ಯಾತರನ್ನು ಭಾರತಕ್ಕೆ ಆಹ್ವಾನಿಸಿ ಅವರಿಂದ ಈ ದೇಶದ ನದೀ ಕಣಿವೆ ಯೋಜನೆಗಳ ಬಗೆಗೆ ಪರಿಣಿತ ಅಭಿಪ್ರಾಯವನ್ನು ಸಲಹೆ ಮತ್ತು ಮಾರ್ಗದರ್ಶನವನ್ನು ಪಡೆದರು. ದಾಮೋದರ್ ನದೀ ಕಣಿವೆ ಯೋಜನೆಯ ಕನಸನ್ನು ನನಸಾಗಿಸಲು ತುಂಬಾ ಶ್ರಮಪಟ್ಟರು. ೧೯೪೩ ರಲ್ಲಿ ಪ್ರವಾಹ ಅಪಾರ ಹಾನಿಯುಂಟು ಮಾಡಿದಾಗ ಈ ಸಮಸ್ಯೆಯನ್ನು ಸಹಾ ಮತ್ತವರ ತಂಡ ತೀವ್ರವಾಗಿ ತೆಗೆದುಕೊಂಡು ತಮ್ಮ ಸೈನ್ಸ್ ಅಂಡ್ ಕಲ್ಚರ್‌ನಲ್ಲಿ ಈ ವಿಷಯದಲ್ಲಿ ಸಮಗ್ರ ಮಾಹಿತಿ ಪೂರ್ಣವಾದ ಲೇಖನಗಳನ್ನು ಪ್ರಕಟಿಸಿದರು. ಸಹಾರ ಒತ್ತಾಯದ ಮೇರೆಗೆ ಸ್ವತಂತ್ರ ಭಾರತದ ಸರಕಾರ ವಿವಿದ್ದೋದ್ದೇಶ ನದೀ ಕಣಿವೆ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವಂತಾಯಿತು. ಸದಾ ಈ ದೇಶದ ದೀನ ದರಿದ್ರರಿಗೆ ಲಾಭವಾಗಬಲ್ಲಂತಹ, ಯುವ ಜನರಿಗೆ ಉದ್ಯೋಗ ದೊರಕಿಸಬಲ್ಲಂತಹ ಯೋಜನೆಗಳನ್ನು ಪ್ರತಿಪಾದಿಸಿ ಸ್ವತಂತ್ರ ಭಾರತದ ರಾಷ್ಟ್ರೀಯ ನಿರ್ಮಾಣ ಕಾರ್ಯದಲ್ಲಿ ಅತ್ಯುತ್ತಮ ಕೊಡುಗೆ ಕೊಟ್ಟವರು ಸಹಾ.

ನಮ್ಮಲ್ಲಿ ರಾಜಕೀಯವೆಂದರೆ ಮೂಗು ಮುರಿಯುವವರು ತುಂಬಾ. ಅದನ್ನು ದೂರದಿಂದಲೇ ಕಡ್ಡಿಯಿಂದ ಮುಟ್ಟಿ ಮೈಲಿಗೆ ಪ್ರದರ್ಶಿಸುವ ಬೋಡಮ್ಮಜ್ಜಿಯ ಸ್ವಭಾವದವರು ಬಹಳ. ವಿದ್ಯಾರ್ಥಿಗಳಿಗೆ ವೈದ್ಯರಿಗೆ, ಶಿಕ್ಷಕರಿಗೆ, ವಿಜ್ಞಾನಿಗಳಿಗೆ, ಸಾಹಿತಿಗಳಿಗೆ, ಕಲಾವಿದರಿಗೆ, ಕಾರ್ಮಿಕರಿಗೆ ರಾಜಕೀಯ ಬೇಡವೆಂದು ಪ್ರತಿಪಾದಿಸುವ ಸ್ವಾರ್ಥ ರಾಜಕಾರಣಿಗಳಿಗೆ ಅಭಾವವೇ ಇಲ್ಲ. ಆದರೆ ಸಹಾ ಇದಕ್ಕೆ ಹೊರತು. ತಾವು ಮತ್ತು ತಮ್ಮ ಸಹೋದ್ಯೋಗಿಗಳು ತುಂಬಾ

ಶ್ರಮಪಟ್ಟು ಸಿದ್ಧಪಡಿಸಿದ ಯೋಜನಾ ದಾಖಲೆಯನ್ನು ನೆಹರೂ ತಮಗೆ ತೋಚಿದಂತೆ, ಬಲಾಢ್ಯರ ಹಾಗೂ ಸ್ಥಾಪಿತ ಹಿತಾಸಕ್ತಿಗಳ ಒತ್ತಡಕ್ಕೆ ಬಲಿಯಾಗಿ ತಿರುಚುವುದನ್ನು ಕಂಡು ಸಹಾ ಕೋಪಗೊಂಡರು. ಅಂತಹ ಪ್ರಯತ್ನಗಳನ್ನು ಖಂಡಿಸಿ "ಸೈನ್ಸ್ ಅಂಡ್ ಕಲ್ಚರ್" ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಬರೆದರು. ಆದರೆ ತಮಗೆ ಸರಿಕಂಡದನ್ನು ಅತ್ಯಂತ ಸಮರ್ಥವಾಗಿ ಸಾರ್ವಜನಿಕವಾಗಿ ಪ್ರತಿಪಾದಿಸಲು ಅವರು ಸಂಸತ್ ಚುನಾವಣೆಗೆ ನಿಲ್ಲಲು ಹಿಂದೆ ಮುಂದೆ ನೋಡಲಿಲ್ಲ. ಕಲ್ಕತ್ತಾ ನಾರ್ತ್-ವೆಸ್ಟ್ ಚುನಾವಣಾ ಕ್ಷೇತ್ರದಿಂದ ಎಡ ಪಕ್ಷಗಳ ಬೆಂಬಲ ಪಡೆದು ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಿ ಅತಿ ಹೆಚ್ಚು ಮತಗಳಿಂದ ೧೯೫೨ ನಲ್ಲಿ ಸಂಸತ್ ಸದಸ್ಯರಾಗಿ ಆಯ್ಕೆಯಾದರು. ೧೯೫೬ ರಲ್ಲಿ ಅವರು ಸಾಯುವವರೆಗೆ ಅತ್ಯಂತ ಕ್ರಿಯಾಶೀಲ ಸಂಸತ್ ಪಟುವಾಗಿ ಉತ್ತಮ ಕೆಲಸಮಾಡಿದರು. ಉತ್ತಮ ಜ್ಞಾನವುಳ್ಳ ವಿರೋಧ ಪಕ್ಷಗಳಿಂದ ಮಾತ್ರ ಪ್ರಜಾಪ್ರಭುತ್ವ ಬದುಕುಳಿಯುತ್ತದೆ ಎಂಬ ಹೇಳಿಕೆಯನ್ನು ಸಾಕಾರಗೊಳಿಸಿದರು ಸಹಾ. ಸಂಸತ್ತಿನಲ್ಲಿ ಅತ್ಯಗತ್ಯ ಪ್ರಮುಖ ಪ್ರಶ್ನೆಗಳನ್ನೆತ್ತಿ, ಚರ್ಚೆಗಳನ್ನು ಪ್ರಾರಂಭಿಸಿ ಸದಾ ಜನಪರ ಕಾರ್ಯಗಳಿಗೆ ಸರ್ಕಾರವನ್ನು ಒತ್ತಾಯಿಸುತ್ತಿದ್ದರು. ಹಲವು ಬಾರಿ ಸರ್ಕಾರದ ಕ್ರಮಗಳನ್ನು ಆಧಾರ ಸಹಿತವಾಗಿ ಯಾವ ಮುಲಾಜಿಗೂ ಒಳಗಾಗದೆ ಅತ್ಯುಗ್ರವಾಗಿ ಟೀಕಿಸುತ್ತಿದ್ದರು. ಪ್ರಧಾನ ಮಂತ್ರಿಯಾಗಿದ್ದ ನೆಹರೂರವರಿಂದ ಹಿಡಿದು ಅನೇಕ ಮಂತ್ರಿಗಳವರೆಗೆ ಅವರ ದಾಳಿ ಅವ್ಯಾಹತವಾಗಿ ಆಧಾರ ಪೂರಿತವಾಗಿ ನಡೆಯುತ್ತಿತ್ತು. ಅತ್ಯಂತ ಪೇಚಿನ ಪ್ರಸಂಗಗಳಿಗೆ ಸಿಕ್ಕಾಗ ಆಳುವ ಪಕ್ಷದವರು ನಿರಾಶರಾಗಿ ಸಹಾರನ್ನು ರಾಜಕೀಯಕ್ಕೆ ಬಂದಿದ್ದಕ್ಕಾಗಿಯೇ ದೂಷಿಸುತ್ತಿದ್ದರು. ಪಾರ್ಲಿಮೆಂಟ್ ಸದಸ್ಯರಾಗಿ ಸಹಾ ಪರಮಾಣು ಶಕ್ತಿಯ ಅಭಿವೃದ್ಧಿಯ ಬಗೆಗೆ ಪ್ರಬಲ ಪ್ರತಿಪಾದನೆ ಮಾಡಿದರು. ಬೈಜಿಕ ಶಕ್ತಿಯೇ ಬಳಕೆಯ ಬಗೆಗೆ ಸರ್ಕಾರದ

ಅರೆಮನಸ್ಸಿನ ಧೋರಣೆಗಳನ್ನು ಯಾವ ಮುಲಾಜಿಗೂ ಒಳಗಾಗದೇ ಟೀಕಿಸಿದರು.

ಪರಮಾಣು ಶಕ್ತಿಯ ಅಭಿವೃಧ್ಧಿಯ ಬಗೆಗೆ ನೆಹರು ಬಾಬಾರವರ ಸಲಹೆಯನ್ನು ಹೆಚ್ಚಾಗಿ ಅವಲಂಬಿಸಿದ್ದರು. ಅದು ಸರ್ಕಾರ ನೀತಿಯಾದಾಗ ಅದನ್ನು ಸಹಾ ಅತ್ಯುಗ್ರವಾಗಿ ಸಕಾರಣವಾಗಿ ವಿರೋಧಿಸಿದರು. ಹೀಗಾಗಿ ಸಹಾ ವಿಜ್ಞಾನ ಲೋಕದ ಮತ್ತೊಬ್ಬ ಪ್ರತಿಭಾನ್ವಿತ ವಿಜ್ಞಾನಿ ಬಾಬಾರೊಡನೆಯೂ ರಾಮನ್‌ರಂತೆಯೇ ವಿರೋಧ ಕಟ್ಟಿಕೊಂಡರು. ಒಂದು ಕಾಲದಲ್ಲಿ ಗಾಂಧೀಜಿಯ ಅಭಿವೃದ್ಧಿ ಮಾರ್ಗವನ್ನು ವಿರೋಧಿಸಿ ನೆಹರು ಅಭಿವೃದ್ಧಿಯ ಮಾರ್ಗವನ್ನು ಸಹಾ ಮೆಚ್ಚಿಕೊಂಡು ಅವರ ನಾಯಕತ್ವದ ಬಗೆಗೆ ಅತಿ ಭರವಸೆಯ ಮಾತುಗಳನ್ನಾಡಿದರು. ಅವರ ಯೋಜನೆಗಳು ಜನಪರವಾಗುವಲ್ಲಿ ವಿಫಲವಾದಾಗ ಅವರು ಒತ್ತಡಗಳಿಗೆ ಬಲಿಯಾಗಿ ಸರಿದಾರಿಯನ್ನು ಕಡೆಗಣಿಸಿದಾಗ ಸಹಾ ನೆಹರೂರವರನ್ನು ಅತ್ಯುಗ್ರವಾಗಿ ಟೀಕಿಸಿದರು. ಬಾಬಾ ಕೇವಲ ಪರಮಾಣು ಶಕ್ತಿಯ ಅಭಿವೃದ್ಧಿಗಾಗಿ ತಮ್ಮನ್ನು ತೊಡಗಿಸಿಕೊಂಡರೆ ಸಹಾರ ಆಸಕ್ತಿ ಬರೀ ಅದಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅವರ ಆಸಕ್ತಿಗಳಲ್ಲಿ ಅಪಾರ ವೈವಿಧ್ಯತೆಯಿತ್ತು. ಸಹಾ ಬೈಜಿಕ ಶಕ್ತಿ ಅಭಿವೃದ್ಧಿ ಆಯೋಗದ ನಿಧಾನಗತಿಯ ಬಗೆಗೆ ಗೌಪ್ಯತೆಯ ಸ್ವಭಾವದ ಬಗೆಗೆ ಅತ್ಯುಗ್ರ ಟೀಕೆಗಳನ್ನು ಮಾಡಿದರು. ವಿಶ್ವವಿದ್ಯಾಲಯದ ಶಿಕ್ಷಣದ ಬಗೆಗೆ, ವಿವಿದೋದ್ದೇಶ ನದಿ ಕಣಿವೆ ಯೋಜನೆಗಳ ಬಗೆಗೆ ಬೃಹತ್ ಕೈಗಾರಿಕೀಕರಣದ ಬಗೆಗೆ ಸರ್ಕಾರ ಸರಿಯಾದ ನಿಲುಮೆಯನ್ನು ತೆಗೆದುಕೊಳ್ಳದ ಕಾರಣ ಸಾರ್ವಜನಿಕ ಹಣ ಹೇಗೆ ಅಪವ್ಯಯವಾಗುತ್ತಿದೆ ಎಂಬುದನ್ನು ಸಹಾ ಆಧಾರ ಸಹಿತವಾಗಿ ಟೀಕಿಸಿದರು. ವಿಶ್ವವಿದ್ಯಾಲಯಗಳಿಗೆ ಬೆಂಬಲ ನೀಡದೆ ರಾಷ್ಟ್ರೀಯ ಪ್ರಯೋಗಾಲಯಗಳಿಗೆ ಹಣ ಒದಗಿಸಿದ್ದರಿಂದಾದ ದುಷ್ಪರಿಣಾಮಗಳ ಬಗೆಗೆ ಸಹಾ ಸಂಸತ್ತಿನಲ್ಲಿ ಟೀಕೆಗಳನ್ನು ಮಾಡಿದರು. ದಾಮೋದರ್ ನದೀ

ಕಣಿವೆ ಯೋಜನೆಯ ಕೆಲಸ ಸರಿಯಾಗಿ ನಡೆದಿಲ್ಲವೆಂದು ಕಂಡು ಬಂದಾಗ ಸಹಾ ತಂತ್ರಜ್ಞರ ಎತ್ತರದ ಸಾಧನೆಗಳ ಬೆಲೂನುಗಳನ್ನು ಪಂಕ್ಚರ್ ಮಾಡಲು ಹಿಂದೆ ಮುಂದೆ ನೋಡಲಿಲ್ಲ. ಪರಿಸರಾತ್ಮಕವಾಗಿ ಪರಿಗಣಿಸಬೇಕಾಗಿದ್ದ ಕೆಲವು ಅಗತ್ಯ ಅಂಶಗಳನ್ನು ಕಡೆಗಣಿಸಿದ್ದಕ್ಕೆ ತಂತ್ರಜ್ಞರು ಸಹಾರ ಉಗ್ರ ಟೀಕೆಗಳಿಗೆ ಗುರಿಯಾಗಬೇಕಾಯಿತು. ಸಹಾ ಬೃಹತ್ ನೀರಾವರಿ ಯೋಜನೆಗಳನ್ನು ಪ್ರತಿಪಾದಿಸಿದರೂ ಅವರೆಂದೂ ಪರಿಸರದ ಅಂಶಗಳ ಬಗ್ಗೆ ಆ ಕಾಲದಲ್ಲಿಯೂ ಕುರುಡಾಗಿರಲಿಲ್ಲ. ನಮ್ಮ ಇಂದಿನ ಬಹುಪಾಲು ಅಭಿವೃದ್ಧಿ ಯೋಜನೆಗಳನ್ನು ಒಂದಲ್ಲ ಒಂದು ನೆಪವೊಡ್ಡಿ ಟೀಕಿಸುವ ಪರಿಸರವಾದಿ ಗೆಳೆಯರು ಸಹಾರ ಪರಿಸರ ಪೂರಕ ಅಭಿವೃದ್ಧಿ ಯೋಜನೆಗಳ ಬಗೆಗೆ ಹೆಚ್ಚು ತಿಳಿಯುವ ಅಗತ್ಯವಿದೆ. ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವಾಗ ವಿದೇಶಿಯರಿಂದ ಪ್ರಭಾವಿತರಾದರೂ ನಮ್ಮ ಪರಿಸ್ಥಿತಿಗೆ ಅಗತ್ಯಗಳಿಗೆ ಯೋಜನೆಗಳನ್ನು ಮಾರ್ಪಡಿಸಿಕೊಳ್ಳಲು ಸಹಾ ಕರೆ ನೀಡಿದರು. ಹಿರಾಕುಡ್ ಅಣೆಕಟ್ಟೆಯ ಬಗೆಗ ಚರ್ಚೆ ಬಂದಾಗ ಇಡೀ ವ್ಯವಸ್ಥೆಯನ್ನು ಸರಿಪಡಿಸುವವರೆಗೆ ಒಂದು ಪೈಸೆಯಷ್ಟು ಹಣವನ್ನು ಬಿಡುಗಡೆ ಮಾಡಬಾರದೆಂದು ಒತ್ತಾಯ ಮಾಡಿದರು. ಹೀಗೆ ಸಹಾ ಸಂಸತ್ತಿನಲ್ಲಿ ಅತ್ಯಂತ ಕ್ರಿಯಾಶೀಲರಾಗಿ ಹಲವು ಬಾರಿ ಸರ್ಕಾರದ ತಪ್ಪು ನೀತಿಗಳ ಬಗೆಗೆ ಉಗ್ರವಾಗಿ ಪ್ರತಿಭಟನೆ ಮಾಡಿ ಯೋಜನೆಗಳು ಕೇವಲ ಘೋಷಣೆಗಳಾಗದೆ ಅವುಗಳನ್ನು ಸಾಧ್ಯವಾದಷ್ಟು ಜನಪರವಾಗುವಂತೆ ಮಾಡಲು ಶ್ರಮಿಸಿದರು.

ಮೇಘನಾದರು ಪಾರ್ಲಿಮೆಂಟ್ ಸದಸ್ಯರಾದರೂ ಪಾರ್ಲಿಮೆಂಟರಿ ವ್ಯವಹಾರಗಳಲ್ಲಿಯೇ ಮುಳುಗಿ ಹೋಗಿದ್ದ ರಾಜಕಾರಣಿಯಾಗಿರಲಿಲ್ಲ. ತಮ್ಮ ಭೈಜಿಕ ಸಂಶೋಧನಾ ಸಂಸ್ಥೆಯಲ್ಲಿ ಮತ್ತು ವಿಜ್ಞಾನರಂಗದಲ್ಲಿ ಆಗುತ್ತಿದ್ದ ಬದಲಾವಣೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸು ತ್ತಿದ್ದರು. ತಮ್ಮ ಜೀವನ ಕ್ರಮವನ್ನು ಅತ್ಯಂತ ವೈಜ್ಞಾನಿಕವಾಗಿ

ರೂಪಿಸಿಕೊಂಡಿದ್ದರು. ಸಂಸತ್ ಸದಸ್ಯರಾದ ಸಹಾರವರ ಸಹಾಯವನ್ನು ಅಪೇಕ್ಷಿಸುವವರು ಅವರನ್ನು ನಿರ್ದಿಷ್ಟ ಅವಧಿಗಳಲ್ಲಿ ನಿಗದಿಪಡಿಸಿದ ಸ್ಥಳಗಳಲ್ಲಿ ಮುಕ್ತವಾಗಿ ಕಾಣಬಹುದಿತ್ತು. ಸಾರ್ವಜನಿಕರು ಹೇಳಿದ ಕೆಲಸಗಳನ್ನು ಅತ್ಯಂತ ತಾಳ್ಮೆಯಿಂದ ಕೇಳಿ ಅದು ಸಾಧ್ಯವಾಗುವುದಾದರೆ ತಮ್ಮ ಎಲ್ಲಾ ಗಮನವನ್ನು ಅದಕ್ಕೆ ನೀಡಿ ಆ ಕೆಲಸವನ್ನು ಮಾಡುತ್ತಿದ್ದರು. ಸಾಧ್ಯವಾಗದ ಕೆಲಸಗಳನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ಮತ್ತು ನೇರವಾಗಿ ಸಾಧ್ಯವಿಲ್ಲವೆಂದು ಹೇಳಿ ಕಳುಹಿಸುತ್ತಿದ್ದರು. ಸಹಾ ಕೇವಲ ನಾಲ್ಕು ವರ್ಷಗಳು ಮಾತ್ರ ಸಂಸತ್ ಸದಸ್ಯರಾಗಿದ್ದರು. ಅವರು ಪಾರ್ಲಿಮೆಂಟರಿ ಸಂಪ್ರದಾಯಕ್ಕೆ ಕೊಟ್ಟ ಕೊಡುಗೆಗಳು ಅಪಾರ.

ಸಹಾರು ತಮ್ಮ ಜೀವನದ ಕೊನೆಯ ದಿನಗಳಲ್ಲಿ ರಾಜ್ಯಗಳ ಪುನರ್ ವಿಂಗಡಣೆಯ ಬಗೆಗೆ ಹೆಚ್ಚು ಕಾಳಜಿ ತೋರಿದರು. ಸಹಾ ಅಲಹಾಬಾದ್‌ನಲ್ಲಿದ್ದಾಗಲೂ ಸ್ವತಃ ಭಾಷಾ ಅಲ್ಪಸಂಖ್ಯಾತರಾಗಿ ಜೀವನಾನುಭವವನ್ನು ಪಡೆದಿದ್ದರು. ಆದ್ದರಿಂದ ಸಹಾ ಹೆಚ್ಚು ವೈಜ್ಞಾನಿಕ ಆಧಾರವನ್ನು ಭಾಷಾವಾರು ರಾಜ್ಯ ವಿಂಗಡನೆಯ ಬಗೆಗೆ ಪ್ರತಿಪಾದಿಸಿದರು. ಭಾರತದಂತಹ ಬಹುಭಾಷೆಯ ರಾಷ್ಟ್ರದಲ್ಲಿ ಪ್ರತಿರಾಜ್ಯವು ತನ್ನದೇ ಆದ ಭಾಷಾ ಅಲ್ಪಸಂಖ್ಯಾತರ ಸಮಸ್ಯೆಯನ್ನು ಹೊಂದಿರುತ್ತದೆ. ಅದನ್ನು ಸರಿಯಾಗಿ ನಿಭಾಯಿಸದೆ ಇದ್ದಲ್ಲಿ ಅದು ವಿಘಟನೆಗೆ ಹಾದಿ ಮಾಡುವ ಅಪಾಯವನ್ನು ಸ್ಪಷ್ಟವಾಗಿ ಮನಗಂಡಿದ್ದರು. ಏಕೀಕೃತ ಭಾರತ ರಾಷ್ಟ್ರದ ಅಸ್ತಿತ್ವವೇ ಅದರ ವೈವಿಧ್ಯತೆಯನ್ನು ಆಧರಿಸಿದೆ ಎಂದು ಸಹಾ ಬಲವಾಗಿ ನಂಬಿದ್ದರು. ಬಾಷಾ ಸಮಸ್ಯೆಯನ್ನು ರಷ್ಯಾ ಬಗೆಹರಿಸಿಕೊಂಡ ಬಗ್ಗೆಯೂ ಸಹಾರಿಗೆ ತುಂಬಾ ಮೆಚ್ಚುಗೆ ಇತ್ತು. ಪ್ರತಿ ರಾಜ್ಯಕ್ಕೂ ತನ್ನ ಭಾಷೆಯನ್ನು ಆಡಳಿತದಲ್ಲಿ ಬಳಸಲು ಪೂರ್ಣ ಮತ್ತು ಸಮಾನ ಅವಕಾಶವಿರಬೇಕು. ಎಲ್ಲಾ ಭಾಷೆಗಳ ಅಭಿವೃದ್ಧಿಗೂ ಸಮಾನ ಅವಕಾಶಗಳಿರಬೇಕು. ಯಾವುದೇ ಭಾಷೆಯನ್ನು ಬಲಾತ್ಕಾರವಾಗಿ ಹೇರಬಾರದು ಮತ್ತು

ಭಾಷಾ ನೀತಿಯನ್ನು ರೂಪಿಸುವಾಗ ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿಗಳಿಗೆ ಗೌರವ ನೀಡಬೇಕೆಂದು ಪ್ರತಿಪಾದಿಸಿದರು. ಮಾತೃಭಾಷೆಯ ಬಳಕೆಯ ಹಕ್ಕು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು. ಅದನ್ನು ನಿರಾಕರಿಸುವುದು ಪ್ರಜಾಸತ್ತಾತ್ಮಕ ಸಿದ್ಧಾಂತದ ವಿರುದ್ಧ ಹೋಗುವುದೇ ಆಗಿರುತ್ತದೆ.

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಮೂಡಿದ್ದ ರಾಷ್ಟ್ರೀಯ ಐಕ್ಯತೆಯ ಮನೋಭಾವ ಸ್ವಾತಂತ್ರ್ಯಾನಂತರ ಹಾಳಾಗಿ ಅದು ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ತರಬಲ್ಲದೆಂಬುದನ್ನು ಸಹಾ ಊಹಿಸಿದರು. ಈಗ ಸುಪ್ತಾವಸ್ಥೆಯಲ್ಲಿರುವ ಕೃತಕ ಅಡ್ಡಗೋಡೆಗಳಾದ ಜಾತಿ, ಧರ್ಮ, ಪ್ರಾಂತ್ಯ ಮತ್ತು ಭಾಷಾ ಸಮಸ್ಯೆಗಳು ಖಂಡಿತವಾಗಿಯೂ ಮುಂದೆ ಪ್ರಮುಖ ಸಮಸ್ಯೆಗಳಾಗಿ ಹೊರ ಹೊಮ್ಮುತ್ತವೆ. ಇವುಗಳ ಬಗ್ಗೆಯೇ ಹೆಚ್ಚು ಆಸಕ್ತರಾದ ಜನರು ರಾಷ್ಟ್ರೀಯ ಪುನರ್ ನಿರ್ಮಾಣದ ಪ್ರಶ್ನೆಯನ್ನೇ ಕಡೆಗಣಿಸಿ ಇಂತಹ ದುರಭಿಮಾನಗಳ ಮೇಲೆ ಜನರನ್ನು ಸಂಘಟಿಸಿ ದೇಶದ ಐಕ್ಯಪರಂಪರೆಗೆ ಆಘಾತ ನೀಡಿ ನಮ್ಮ ಮುಂದಿನ ಜನಾಂಗಕ್ಕೆ ಬರ್ಬರವಾದ ಭವಿಷ್ಯವನ್ನು ಸೃಷ್ಟಿಸುತ್ತಾರೆಂದು ಎಚ್ಚರಿಸಿದ್ದರು. ಆದುದರಿಂದ ಪ್ರತಿಯೊಬ್ಬ ಭಾರತೀಯನೂ ಪೂರ್ಣ ಪ್ರಮಾಣದಲ್ಲಿ ತನ್ನನ್ನು ತಾನು ರಾಷ್ಟ್ರಕ್ಕೆ ಅರ್ಪಿಸಿಕೊಳ್ಳಬಲ್ಲ ಕೆಲವು ಸಾಮಾನ್ಯ ಸಮಸ್ಯೆಗಳ ಆಧಾರದಲ್ಲಿ ಐಕ್ಯತೆಯನ್ನು ಸಾಧಿಸಲು ಕರೆನೀಡಿದರು. ಪ್ರತಿಯೊಬ್ಬ ಭಾರತೀಯನೂ ನಮ್ಮ ದೇಶ ಪೂರ್ಣ ರಾಷ್ಟ್ರೀಯತೆಯನ್ನು ಹೊಂದುವುದನ್ನು ಹಾಗೂ ಪ್ರಜೆಗಳು ಸಾರ್ವಭೌಮತ್ವವನ್ನು ಪಡೆಯುವುದನ್ನು ಅಪೇಕ್ಷಿಸುತ್ತಾನೆ.

ಆದರೆ ಮಿಲಿಯಗಟ್ಟಲೆ ಜನರಿಗೆ ಬದುಕಲು ಇರುವ ಸಮಸ್ಯೆಗಳನ್ನು ಕಡೆಗಣಿಸಲಾಗದು. ಅವುಗಳನ್ನು ಮುಂದೂಡುವ ಪರಿಪಾಠ ಕೂಡ ನಿಲ್ಲಬೇಕು. ರಾಜಕೀಯ ಕ್ಷೇತ್ರದಲ್ಲಿ ಇಂದು ಇಲ್ಲದಿರುವ ಆಲೋಚನಾ ಐಕ್ಯತೆ, ಉದ್ದೇಶದ ಐಕ್ಯತೆಯನ್ನು ಬೆಳೆಸಲು

ನಾವು ಈ ಮಿಲಿಯಾಂತರ ಜನರ ಜೀವನ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ರಾಷ್ಟ್ರೀಯ ಉದ್ದೇಶವುಳ್ಳ ಯೋಜನೆ ತಯಾರಿಸಿ ಅದರ ಬೆಂಬಲಕ್ಕೆ ಇಡೀ ಜನಸಮೂಹವನ್ನು ಅಣಿಗೊಳಿಸಬೇಕಾಗಿದೆ. ಇಂತಹ ಸ್ಫೂರ್ತಿದಾಯಕ ನಾಯಕತ್ವ ನೀಡಿದಾಗ ಮಾತ್ರ ವಿಚ್ಛಿದ್ರಕಾರಿ ಬೆಳವಣಿಗೆಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದಲ್ಲಿ ಈ ದೈತ್ಯಶಕ್ತಿಗಳೇ ಮೇಲ್ಮೈ ಸಾಧಿಸಿ ಇಡೀ ದೇಶವನ್ನು ನಿರ್ನಾಮ ಮಾಡುತ್ತವೆ.

ನಮ್ಮ ದೇಶದ ಅನೈಕ್ಯತೆಯ, ಅಸಹನೆಯ, ಅಸಮಾನತೆಯ, ಅವನತಿಯ ಕರಾಳ ಇತಿಹಾಸ ಮರುಕಳಿಸದಂತೆ ನೋಡಿಕೊಳ್ಳಲು ನಮಗೆ ಯಾವ ಆದರ್ಶವಿರಬೇಕೆಂಬುದರ ಬಗ್ಗೆ ಸಹಾರಿಗೆ ಅತ್ಯಂತ ಸ್ಪಷ್ಟವಾದ ಅಭಿಪ್ರಾಯವಿತ್ತು. ಸ್ವಾತಂತ್ರ್ಯೋತ್ತರ ಭಾರತದ ವಿಭಜನೆ ಮತ್ತು ಅದರಿಂದುಂಟಾದ ಮತೀಯ ಗಲಭೆಗಳು, ಸಾವುನೋವುಗಳು ಸಹಾರನ್ನು ಆಳವಾಗಿ ಕಲಕಿದ್ದವು. ಧಾರ್ಮಿಕ ಅಂಧಾಭಿಮಾನ ಎಂತಹ ಅಪಾಯವನ್ನು ತಂದೊಡ್ಡಬಲ್ಲದೆಂಬುದನ್ನು ಸಹಾ ಕಣ್ಣಾರೆ ಕಂಡು ಅದನ್ನು ಅತ್ಯುಗ್ರವಾಗಿ ವಿರೋಧಿಸಿದರು. "ನಮ್ಮ ದೇಶದಲ್ಲಿ ಕೆಲವರು ಧರ್ಮ ಅಥವಾ ಧಾರ್ಮಿಕ ಪೂರ್ವಾಗ್ರಹಗಳನ್ನು ಪುನರುಜ್ಜೀವನ ಗೊಳಿಸಲು ಅಪೇಕ್ಷಿಸುತ್ತಾರೆ, ಇನ್ನೂ ಕೆಲವರು ನಮ್ಮ ಪ್ರಾಚೀನ ಸಂಸ್ಕೃತಿಯ ನಿರ್ದಿಷ್ಟರೂಪಗಳಿಗೆ ಅಂಟಿಕೊಳ್ಳಲು ಅಪೇಕ್ಷಿಸುತ್ತಾರೆ. ಆದರೆ ಇಂತಹ ಧೋರಣೆಗಳ ಪ್ರತಿಪಾದನೆ ದೇಶದ ಜನರ ನಡುವೆ ಭೇದಿಸಲಾಗದ ಅಡ್ಡಗೋಡೆಗಳನ್ನು ಮಾತ್ರ ನಿರ್ಮಿಸುತ್ತವೆ. ಅದು ಎಂದಿಗೂ ಜನರ ನಡುವೆ ಸಾಮರಸ್ಯವನ್ನು ಪೋಷಿಸುವುದಿಲ್ಲ." ಹೀಗೆ ಸಹಾ ಖಂಡಿತವಾಗಿ ಧಾರ್ಮಿಕ ಮೂಲಭೂತವಾದ ಹೇಗೆ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಅಡ್ಡಿಯನ್ನುಂಟು ಮಾಡುತ್ತದೆಂಬುದನ್ನು ಸಹಾ ಪ್ರತಿಪಾದಿಸಿದರು. ಭಾರತ ವಿಶ್ವದ ರಾಷ್ಟ್ರಗಳ ಸಾಲಿನಲ್ಲಿ ಗೌರವಯುತವಾದ ಸ್ಥಾನವನ್ನು ಹೊಂದಲು, ನಮ್ಮ ಪ್ರಾಚೀನ

ನಾಗರಿಕತೆಯ ಉತ್ತಮ ಅಂಶಗಳ ಭವ್ಯಪರಂಪರೆಗೆ ಚೈತನ್ಯ ತುಂಬಲು, ನಮ್ಮ ಮುಂದಿನ ಜನಾಂಗಗಳಿಗೆ ಭರವಸೆಯ ಭವಿಷ್ಯವನ್ನು ರೂಪಿಸಲು ಇರುವ ಏಕೈಕ ಮಾರ್ಗವೆಂದರೆ ನಾವು ನಮ್ಮ ಮಧ್ಯದಲ್ಲಿನ ಮೂಢನಂಬಿಕೆಗಳನ್ನು ಮತ್ತು ಅವೈಜ್ಞಾನಿಕ ಪೂರ್ವಾಗ್ರಹಗಳನ್ನು ಕೈಬಿಡುವುದು ಮತ್ತು ತಾಯ್ನಾಡಿನ ಸೇವೆಗಾಗಿ ಎಂಬ ವೇದಿಕೆಯಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡುವುದಾಗಿದೆ. ಇಂತಹ ವಿಶಾಲ ಜನಸಮೂಹದ ಐಕ್ಯತೆ ಯಾವುದೇ ಒಂದು ಭಾಷೆ, ಧರ್ಮ, ಜಾತಿ ಅಥವಾ ಪ್ರಾಂತ್ಯಾಭಿಮಾನದ ಆಧಾರದಲ್ಲಿ ಮೂಡುವುದು ಸಾಧ್ಯವಿಲ್ಲ. ಮಿಲಿಯಾಂತಾರ ಭಾರತೀಯರು ದಿನನಿತ್ಯ ಅನುಭವಿಸುತ್ತಿರುವ ಕಷ್ಟಕಾರ್ಪಣ್ಯಗಳ ನಿವಾರಣೆಯ ಆದರ್ಶ ಮಾತ್ರ ಎಲ್ಲಾ ಭಾಷಿಕರ, ಎಲ್ಲಾ ಧರ್ಮೀಯರ, ಎಲ್ಲಾ ಜಾತಿಗಳ ಜನರನ್ನು ಒಗ್ಗೂಡಿಸಬಲ್ಲದು. ಹೀಗೆ ರಾಷ್ಟ್ರೀಯ ಪುನರ್ ನಿರ್ಮಾಣದ ಆದರ್ಶ ಎಲ್ಲರಿಗೂ ಆಹಾರ, ವಸತಿ, ವಿದ್ಯಾಭ್ಯಾಸ, ಆರೋಗ್ಯ, ಉದ್ಯೋಗಗಳನ್ನು ಒದಗಿಸಬಲ್ಲ ಆದರ್ಶವಾದಾಗ ಮಾತ್ರ ಅದು ಎಲ್ಲಾ ಭಾರತೀಯರ ಬೆಂಬಲ ಪಡೆಯುತ್ತದೆ. ಅಂತಹ ಐಕ್ಯತೆ ಮಾತ್ರ ವೈಜ್ಞಾನಿಕ ತಳಹದಿಯನ್ನು ಹೊಂದಿರುತ್ತದೆ ಮತ್ತು ಅಂತಹ ಆದರ್ಶಕ್ಕಾಗಿ ಜನರನ್ನು ಒಗ್ಗೂಡಿಸಿ ದೇಶವನ್ನು ಪುನರ್ ನಿರ್ಮಾಣ ಮಾಡಬಹುದು. ಮತ್ಯಾವುದೇ ಹುಸಿ, ಆದರ್ಶಗಳ ಭ್ರಮೆಗಳು ನಮ್ಮ ಜನರನ್ನು ಒಗ್ಗೂಡಿಸಲಾರವು.

●

ಅಧ್ಯಾಯ ೮

ವಿಜ್ಞಾನ ಲೋಕದ ವಿಶ್ವಾಮಿತ್ರ

ಮೇಘನಾದ ಸಹಾ ಅತ್ಯಂತ ಚಿಕ್ಕವಯಸ್ಸಿನಿಂದಲೂ ತನಗೆ ಸರಿಕಂಡದ್ದನ್ನು ಮಾತ್ರ ಮಾಡುತ್ತಿದ್ದ ಬಾಲಕ. ತನ್ನ ಅಪೇಕ್ಷೆಗೆ ಎಂತಹ ಪ್ರಬಲ ಅಡಚಣೆ ಬಂದರೂ ಅದನ್ನು ಲೆಕ್ಕಿಸದೇ ಮುನ್ನುಗುತ್ತಿದ್ದ, ಹುಟ್ಟಿನೊಂದಿಗೆ ಪ್ರಕೃತಿ ವಿಕೋಪದೊಂದಿಗೆ ಸೆಣಸಿ ಬದುಕುಳಿದ ಬಾಲಕ. ಓದಿಗಾಗಿ ಬಡತನದ ಕಷ್ಟಕಾರ್ಪಣ್ಯಗಳ ಸರಮಾಲೆಯನ್ನು ಧಿಕ್ಕರಿಸಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯುವಲ್ಲಿ ಯಶಸ್ವಿಯಾದ. ಎಲ್ಲರೂ ಗೌರವಿಸುತ್ತಿದ್ದ, ಪೂಜಾರಿಯನ್ನು ಹಾಗೂ ಪೂಜೆಗಳನ್ನು ಎಳೆಯ ವಯಸ್ಸಿನಲ್ಲಿಯೇ ತನ್ನ ಸ್ವಬುದ್ಧಿಯಿಂದ ಸ್ವಾನುಭವದ ಆಧಾರದಲ್ಲಿ ದಿಕ್ಕರಿಸಿದ ಧೀರ ಬಾಲಕ. ಚಿಕ್ಕ ವಯಸ್ಸಿನಿಂದಲೇ ಯಾರನ್ನು ಬೇಕಾದರೂ ಎದುರಿಸಲು ಹಿಂದೆ ಮುಂದೆ ನೋಡದ ಮನೋಭಾವದ, ಸರ್ಕಾರದ ಉನ್ನತ ಹುದ್ದೆಯನ್ನು ಎಲ್ಲಾ ಅರ್ಹತೆಯಿದ್ದು ಪಡೆಯಲಾಗದಿದ್ದಾಗ ಆ ಹುದ್ದೆಯನ್ನೇ ತಿರಸ್ಕರಿಸಿ ತಾನೂ ಕೈಗೊಂಡ ಹುದ್ದೆಗೆ ಎಲ್ಲಾ ಘನತೆಯನ್ನು ಸಂಪಾದಿಸಿ ಪ್ರತಿಸ್ಪರ್ಗದ ನಿರ್ಮಾಣಕ್ಕೆ ಕೈ ಹಚ್ಚಿದ ಮಹಾನ್ ಛಲವಾದಿ ಮೇಘನಾದ ಸಹಾ. ಬ್ರಿಟೀಷ್ ಸರ್ಕಾರದ ಅಸಹಕಾರ ಮತ್ತು ಪ್ರತಿರೋಧದ

ನಡುವೆಯೂ ಕಲ್ಕತ್ತಾ ವಿಶ್ವವಿದ್ಯಾಲಯದ ವಿಜ್ಞಾನ ಕಾಲೇಜನ್ನು ಅನುಭವಿಗಳ ಮಾರ್ಗದರ್ಶನವಿಲ್ಲದೇ ರೂಪಿಸಿದ ಮಹಾನ್ ಶಿಲ್ಪಿ. ಪ್ರಯೋಗಾಲಯಗಳ ಸೌಲಭ್ಯವಿಲ್ಲದಿದ್ದರೂ ತ್ರಿವಿಕ್ರಮ ಛಲದೊಂದಿಗೆ ಸಂಶೋಧನೆಗೆ ತೊಡಗಿ ಅಂತರಾಷ್ಟ್ರೀಯ ಮಾನ್ಯತೆ ಪಡೆದ ಪ್ರತಿಭೆ ಸಹಾ. ತನ್ನ ಆದರ್ಶಕ್ಕನುಗುಣವಾಗಿ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಲಾಗದಿದ್ದಾಗ ಅವರನ್ನು ಪ್ರೋತ್ಸಾಹಿಸಿದ ಅಸುತೋಷ್ ಮುಖರ್ಜಿಯವರನ್ನು ಹಾಗೂ ಕಲ್ಕತ್ತಾ ವಿಶ್ವವಿದ್ಯಾಲಯವನ್ನು ಧಿಕ್ಕರಿಸಲು ಹಿಂದೆ ಮುಂದೆ ನೋಡಲಿಲ್ಲ. ಅಲಹಾಬಾದನ್ನೇ ತನ್ನ ಹೊಸ ಕಾರ್ಯಕ್ಷೇತ್ರವನ್ನಾಗಿಸಿಕೊಂಡು ವಿಜ್ಞಾನ ಲೋಕದ ಬರಡು ಭೂಮಿಯಂತಿದ್ದ ಅಲಹಾಬಾದ್‌ನಲ್ಲೂ ವೈಜ್ಞಾನಿಕ ಸಂಶೋಧಕರ ತಂಡವನ್ನೇ ಕಟ್ಟಿ ಅಲ್ಲಿಂದಲೂ ವಿಜ್ಞಾನ ಸಂಶೋಧನಾ ಕ್ಷೇತ್ರಕ್ಕೆ ಉತ್ತಮ ಕೊಡುಗೆಗಳು ಬರುವಂತೆ ಅಹರ್ನಿಶಿ ದುಡಿದವರು ಸಹಾ. ಒಂದು ಸ್ಥಳವಲ್ಲಿ ತನ್ನ ಪ್ರತಿಭೆಯ ವಿಕಾಸಕ್ಕೆ ಅವಕಾಶ ದೊರೆಯದಿದ್ದಾಗ ಅದಕ್ಕಾಗಿ ಹಂಬಲಿಸಿ ಹತಾಶರಾಗಿ ವಿಧಿಯನ್ನು ದೂಷಿಸಿ ಕೈಕಟ್ಟಿ ಕೂಡುವ ಸ್ವಭಾವ ಅವರಿಗಿರಲಿಲ್ಲ.

ತನಗೆ ಅವಕಾಶ ಸಿಕ್ಕಲ್ಲಿಯೇ ತನ್ನ ಪ್ರತಿಭೆ ಹಾಗೂ ಶ್ರಮವನ್ನು ಧಾರೆಯೆರೆದು ತನಗನಿಸಿದ್ದನ್ನು ಎಷ್ಟೇ ಅಡ್ಡಿ ಅಡಚಣೆ ಹಾಗೂ ಸಮಾಜದ ಗೌರವಾನ್ವಿತರಿಂದ ಪ್ರತಿರೋಧ ಬಂದರೂ ಅವೆಲ್ಲವನ್ನೂ ಧಿಕ್ಕರಿಸಿ ತನ್ನ ಪಾಡಿಗೆ ತನ್ನ ಕೆಲಸವನ್ನು ಅಷ್ಟೇ ಉತ್ಸಾಹ, ಶ್ರದ್ಧೆ, ಆಸಕ್ತಿಯಿಂದ ಮಾಡಿ ಅದುಮಿಟ್ಟ ಚೆಂಡು, ಪುಟಿದು ಮೇಲೇಳುವಂತೆ ಜೀವನದಲ್ಲಿ ಪ್ರಮುಖ ಸ್ಥಾನಪಡೆದ ವಿಜ್ಞಾನಿ ಸಹಾ. ಅಲಹಾಬಾದ್‌ನಲ್ಲಿಯೂ ವಾತಾವರಣ ಕಲುಷಿತಗೊಂಡಾಗ ಆ ಸ್ಥಳವನ್ನೂ ಧಿಕ್ಕರಿಸಲು ಹಿಂದೆಗೆಯಲಿಲ್ಲ. ಅಲಹಾಬಾದ್‌ನಲ್ಲಿಯೇ ನೆಲೆಸಲು ತೀರ್ಮಾನಿಸಿ ಮನೆಯೊಂದನ್ನು ಕಟ್ಟಿಕೊಂಡು ಅಪಾರ ಅಭಿಮಾನಿಗಳ ಬಳಗ ಅಲ್ಲಿದ್ದರೂ ಅಲ್ಲಿಯೂ ಪರಿಸ್ಥಿತಿ ತನಗೆ ಸರಿಹೋಗದಿದ್ದಾಗ ಅದನ್ನು ತ್ಯಜಿಸಿ ಮತ್ತೆ ಕಲ್ಕತ್ತಾಗೆ ಹಿಂದಿರುಗಿ ಅಲ್ಲಿಯೇ ಬೈಜಿಕ ಸಂಶೋಧನಾ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ಆ ಕಾಲಕ್ಕಾಗಲೇ ನೊಬೆಲ್

ಪ್ರಶಸ್ತಿಯನ್ನು ಪಡೆದು ಪ್ರಖ್ಯಾತರಾಗಿದ್ದ ವಿಶ್ವದ ವಿಜ್ಞಾನ ಲೋಕದಲ್ಲಿ ವಿಶಿಷ್ಟಸ್ಥಾನ ಹೊಂದಿದ್ದ ರಾಮನ್‌ರನ್ನು ತಮಗೆ ಸರಿಕಾಣದಿದ್ದಾಗ ಹಿಂದೆ ಮುಂದೆ ನೋಡದೆ ಉಗ್ರವಾಗಿಯೇ ಟೀಕಿಸಿದರು. ಆದರೂ ಅವರ ಜಗಳ ವೈಯಕ್ತಿಕ ಮಟ್ಟದ ಕೀಳುದರ್ಜೆಯ ಜಗಳವಾಗಿರಲಿಲ್ಲ. ಈ ದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಹೇಗೆ ಅಭಿವೃದ್ಧಿಪಡಿಸಬೇಕು ಮತ್ತು ಅವುಗಳ ಬಳಕೆ ಹೇಗೆ ಮಾಡಬೇಕೆಂಬ ತೀವ್ರ ಭಿನ್ನಾಭಿಪ್ರಾಯವಿದ್ದುದರಿಂದ ರಾಮನ್‌ರಂತಹವರನ್ನೂ ಯಾವುದೇ ಕೀಳರಿಮೆಯಿಲ್ಲದೆ ಟೀಕಿಸಿದರು.

ಸ್ವತಂತ್ರ ಭಾರತದಲ್ಲಿ ಬೈಜಿಕ ಶಕ್ತಿಯ ಅಭಿವೃದ್ಧಿಗಾಗಿ "ಪರಮಾಣುಶಕ್ತಿ ಆಯೋಗ" ಹೋಮಿಜಹಾಂಗೀರ್ ಬಾಬರ ಅಧ್ಯಕ್ಷತೆಯಲ್ಲಿ ರಚಿತಗೊಂಡು ನೆಹರು ಅವರ ಸಲಹೆಯಂತೆ ಈ ಕ್ಷೇತ್ರದಲ್ಲಿ ಬೇರೆಯವರ ಅಭಿಪ್ರಾಯಗಳನ್ನು ಕಡೆಗಣಿಸಿದಾಗ ಬಾಬಾರ ಧೋರಣೆಗಳನ್ನು ಸಕಾರಣವಾಗಿ ವಿರೋಧಿಸಲು ಹಿಂದೆ ಮುಂದೆ ನೋಡಲಿಲ್ಲ. ಬಾಬಾರ ಅತ್ಯುನ್ನತ ಸ್ಥಾನವಾಗಲೀ ಸರ್ಕಾರದ ಮುಕ್ತ ಬೆಂಬಲವಾಗಲಿ ಸಹಾರನ್ನು ತಮ್ಮ ಟೀಕೆಗಳಿಂದ ಹಿಂದೆ ಸರಿಯುವಂತೆ ಮಾಡಲಾಗಲಿಲ್ಲ.

ಸ್ವಾತಂತ್ರ ಚಳುವಳಿಯ ನಿರ್ವಿವಾದಾತ್ಮಕ ನಾಯಕ ಗಾಂಧೀಜಿಯವರ ಸಿದ್ಧಾಂತವನ್ನು ಇಡೀ ದೇಶದ ಜನ ಹೊಗಳು ತ್ತಿದ್ದಾರೇನೋ ಎನ್ನುವ ಪರಿಸ್ಥಿತಿಯಿದ್ದಾಗ ಅವರ "ಚರಕ ಮತ್ತು ಎತ್ತಿನಗಾಡಿ" ಸಿದ್ಧಾಂತವನ್ನು "ಮರಳಿ ಹಳ್ಳಿಗೆ" ಕಲ್ಪನೆಗಳನ್ನು ವಿರೋಧಿಸುವ ಎದೆಗಾರಿಕೆ ಸಹಾರಂತವರಿಗೆ ಮಾತ್ರ ಸಾಧ್ಯ. ತಮ್ಮ ವಿರೋಧದ ಪರಿಣಾಮವೇನಾಗುತ್ತದೆ ಎಂಬುದರ ಬಗ್ಗೆ ಅವರಿಗೆ ಸ್ವಲ್ಪವೂ ಕಾಳಜಿಯಿಲ್ಲ. ತಮಗೆ ಸರಿಕಾಣದ್ದನ್ನೂ, ಬೇರೆಯವರು ಮಾಡುತ್ತಿರುವುದು ಸರಿಯಲ್ಲವೆಂದು ಕಂಡು ಬಂದದ್ದನ್ನು ಅವರು ಎಷ್ಟೇ ದೊಡ್ಡವರಾದರೂ ಟೀಕಿಸದೆ ಬಿಡುತ್ತಿರಲಿಲ್ಲ. ತಮ್ಮ ಪತ್ರಿಕೆ "ಸೈನ್ಸ್ ಆಫ್ ಕಲ್ಚರ್"ನಲ್ಲಿ ಗಾಂಧೀಜಿಯವರ ಆರ್ಥಿಕ ಅಭಿವೃದ್ಧಿಯ ಸಿದ್ಧಾಂತಗಳನ್ನು ಅತ್ಯಂತ ಉಗ್ರವಾಗಿ ಹಲವಾರು ಲೇಖನಗಳ ಮೂಲಕ

ಟೀಕಿಸಿದರು. ಬೃಹತ್ ಕೈಗಾರಿಕೀಕರಣದಿಂದ ಮಾತ್ರ ದೇಶದ ಪ್ರಗತಿ ಸಾಧ್ಯವೆಂದು ಪ್ರತಿಪಾದಿಸಿದರು. ಈ ಬೃಹತ್ ಕೈಗಾರಿಕೀಕರಣಕ್ಕಾಗಿ ಇಂಧನ ಮತ್ತು ವಿದ್ಯುಚ್ಛಕ್ತಿಯ ಉತ್ಪಾದನೆಯ ಕಡೆಗೆ ಆದ್ಯತೆಯ ಗಮನ ಕೊಡಲು ಕರೆ ನೀಡಿದರು. "ಎಣ್ಣೆ ಮತ್ತು ಸಾಮ್ರಾಜ್ಯಶಾಹಿ" ಎಂಬ ಲೇಖನದಲ್ಲಿ ಈ ಕ್ಷೇತ್ರದಲ್ಲಿ ಸ್ವಾವಲಂಬನೆಯ ಅಗತ್ಯವೆಷ್ಟಿದೆ ಎಂಬುದನ್ನು ಬಲವಾಗಿ ಪ್ರತಿಪಾದಿಸಿದರು.


ಭೂಮಿಯ ಮೇಲಿನ ಒತ್ತಡವನ್ನು 'ನಗರೀಕರಣವನ್ನು ಕಡಿಮೆ ಮಾಡಲು ಕೃಷಿ ಉತ್ಪಾದನಾ ಸಾಮರ್ಥ್ಯವನ್ನು ಹಾಗೂ ಕೃಷಿ ಆಧಾರಿತ ಕೈಗಾರಿಕೀಕರಣವನ್ನು ಹೆಚ್ಚಿಸಲು ಒತ್ತಾಯಿಸಿದರು. ಆದಕ್ಕಾಗಿ ವಿವಿಧೋದ್ದೇಶ ನದಿ, ಕಣಿವೆ ಯೋಜನೆಗಳಿಗಾಗಿ ಒತ್ತಾಯ ಮಾಡಿದರು. ಹೀಗೆ ಗಾಂಧಿಜೀಯವರ ಸ್ವಾವಲಂಬನೆಯ ಕಲ್ಪನೆಗಿಂತ ವಿಭಿನ್ನವಾದ ಸ್ವಾವಲಂಬನಾ ಸಿದ್ಧಾಂತವನ್ನು ಸಹಾ ಪ್ರತಿಪಾದಿಸಿದರು. ಬೇರಾವುದೇ ದೇಶದ ಉತ್ತಮ ಕೆಲಸಗಳು ಒಳ್ಳೆಯ ಫಲಿತಾಂಶ ನೀಡಿರುವುದನ್ನು ಕಂಡಾಗ ಅದನ್ನು ಸ್ವಾಗತಿಸಲು ಅದನ್ನು ತಮ್ಮ ದೇಶದಲ್ಲೂ ಅಳವಡಿಸಿಕೊಳ್ಳಲು ಅವರೆಂದೂ ಹಿಂದೆ ಮುಂದೆ ನೋಡದಿರುವುದು ಮಾತ್ರವಲ್ಲದೇ ಅದರ ಅಳವಡಿಕೆಯಾಗಬೇಕೆಂದು ಒತ್ತಾಯ ಮಾಡುತ್ತಿದ್ದರು. ರಷ್ಯಾದೇಶದ ಪಂಚವಾರ್ಷಿಕ ಯೋಜನೆಗಳ ಸಾಧನೆ ಸಹಾರ ಮೇಲೆ ತುಂಬಾ ಗಾಢವಾದ ಪರಿಣಾಮ ಬೀರಿದ್ದವು. ಅದರಿಂದಾಗಿ ಸಹಾ "ರಷ್ಯನ್ನರಂತೆ ಯೋಜನೆ" ಎಂಬ ಘೋಷಣೆಯನ್ನು ಕೊಡಲು ಹಿಂದೆ ಮುಂದೆ ನೋಡಲಿಲ್ಲ. ಅದೇ ರೀತಿ ಅಮೆರಿಕಾ ಟೆನ್ನಿಸಿಯಾ ನದೀ ಕಣಿವೆ ಯೋಜನೆಯಿಂದ ಅವರು ತುಂಬಾ ಪ್ರಭಾವಿತರಾಗಿ "ಟೆನ್ನಿಸಿಯಾದಂತೆ ನದಿ ಕಣಿವೆ ಯೋಜನೆಗಳು" ಎಂಬ ಘೋಷಣೆಯನ್ನು ನೀಡಿದರು. ಹೀಗೆ ವಿಜ್ಞಾನದ ವಿಶ್ವಮಾನ್ಯತೆಯನ್ನು ಅಡಚಣೆಯಲ್ಲಿ ಗೌರವಿಸಿದವರು ಸಹಾ. ವಿವಿಧ ರಾಷ್ಟ್ರಗಳು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ದಾಪುಗಾಲನ್ನು ಹಾಕಿ ಮುಂದುವರಿಯುತ್ತಿದ್ದುದನ್ನು ಕಣ್ಣಾರೆ ಕಂಡು ಬಂದ ಸಹಾ ನಮ್ಮ ದೇಶದಲ್ಲೂ ಶೀಘ್ರವಾಗಿ ಅವುಗಳ ಅಭಿವೃದ್ಧಿಯಾಗಬೇಕೆಂದು

ಹಂಬಲಿಸುತ್ತಿದ್ದರು. ಅದಕ್ಕಾಗಿ ಅವರು ಸ್ವಲ್ಪವೂ. ಕಾಯಲು, ನಿಧಾನಿಸಲು ಸಿದ್ಧರಿರಲಿಲ್ಲ. ಈ ಕ್ಷೇತ್ರದಲ್ಲಿ ಶೀಘ್ರ ಪ್ರಗತಿಯಾಗದಿದ್ದರೆ ಅವರ ಸಹನೆ ಕಟ್ಟೆಯೊಡೆಯುತ್ತಿತ್ತು. "ಇಲ್ಲಿ ಅಸಂಬದ್ಧ ತಾಳ್ಮೆರಹಿತ (No Nonsense Impatient) ಮನೋಭಾವ" ಅವರದು. ಅತ್ಯಂತ ಆಧುನಿಕ ವಿಜ್ಞಾನ ಕ್ಷೇತ್ರಗಳಲ್ಲಿ ಭಾರತ ಸಾಧ್ಯವಾದಷ್ಟು ಶೀಘ್ರವಾಗಿ ಕೆಲಸ ಪ್ರಾರಂಭಿಸಿ ಅತಿ ಕಡಿಮೆ ಅವಧಿಯಲ್ಲಿ ಅತಿ ಹೆಚ್ಚಿನ ಪ್ರಗತಿ ಸಾಧಿಸ ಬೇಕೆಂದು ಅವರು ಹಂಬಲಿಸುತ್ತಿದ್ದರು. ಬಾಬಾರ ಮಾರ್ಗದರ್ಶನದಲ್ಲಿ ಪರಮಾಣು ಸಂಶೋಧನಾ ಕ್ಷೇತ್ರದಲ್ಲಿ ತಾವು ನಿರೀಕ್ಷಿಸಿದ ವೇಗದಲ್ಲಿ ಪ್ರಗತಿಯಾಗದಿದ್ದಾಗ ಅದನ್ನು ಸಂಸತ್ತಿನಲ್ಲೇ ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಗಾಂಧೀಜಿಯ ಆರ್ಥಿಕ ಅಭಿವೃದ್ಧಿಯ ನೀತಿಯನ್ನು ವಿರೋಧಿಸಿ ನೆಹರೂರವರ ಮಿಶ್ರ ಆರ್ಥಿಕ ನೀತಿಯನ್ನು ಬೆಂಬಲಿಸುತ್ತಿದ್ದರೂ ಅವರೆಂದೂ ನೆಹರೂರವರ ಅಂಧಾಭಿಮಾನಿಯಾಗಿರಲಿಲ್ಲ. ನೆಹರೂರವರ ಗೊಂದಲಮಯ ನೀತಿಗಳನ್ನು ಅತ್ಯಂತ ಉಗ್ರವಾಗಿಯೇ ಟೀಕಿಸು ತ್ತಿದ್ದರು. ಇಂತಹ ಟೀಕೆಗಳಿಗೆ ಸಲ್ಲಬೇಕಾದ ಮಾನ್ಯತೆ ದೊರಕಲೆಂದೇ ಸಹಾ ಸಂಸತ್ ಸದಸ್ಯರಾಗಲೂ ತೀರ್ಮಾನಿಸಿದರು. ಅದಕ್ಕಾಗಿ ಅವರು ಎಡ ಪಕ್ಷಗಳ ಬೆಂಬಲ ಪಡೆದು ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣೆಗೆ ನಿಲ್ಲಲು ಹಿಂದೆಗೆಯಲಿಲ್ಲ. ವಿಜ್ಞಾನಿಗಳೆನಿಸಿಕೊಂಡು ದಂತಗೋಪುರ ಗಳಲ್ಲಿ ತಮ್ಮನ್ನು ಅಡಗಿಸಿಕೊಂಡು ಇಡೀ ಜಗತ್ತಿಗೆ ಉಪದೇಶ ಕೊಡುವ ಸ್ವಭಾವ ಸಹಾರದಾಗಿರಲಿಲ್ಲ. ಮಾನವ ಕಲ್ಯಾಣವನ್ನು ಬಯಸುತ್ತಿದ್ದ ವಿಜ್ಞಾನಿ ಜನರೊಂದಿಗೆ ಬೀದಿಗಿಳಿಯಲು ಹಿಂದೆ ಮುಂದೆ ನೋಡಲಿಲ್ಲ. ವಿಜ್ಞಾನಿಗಳಿಗೂ ರಾಜಕೀಯಕ್ಕೂ ಸಂಬಂಧವಿಲ್ಲ ಎಂಬ ನಿಲುವಿಗೆ ಸಹಾರದು ತೀವ್ರವಿರೋಧ. ವಿಜ್ಞಾನ ತಂತ್ರಜ್ಞಾನಗಳಿರುವುದು ಮಾನವನ ಕಲ್ಯಾಣಕ್ಕಾಗಿ. ಅದನ್ನು ವಿಜ್ಞಾನಿಗಳು ಪ್ರಯೋಗಾಲಯಗಳ ದಂತಗೋಪುರಗಳಲ್ಲಿ ಕುಳಿತು ಪಠಣ ಮಾಡುವುದರಿಂದ ಅದು ಸಾಧ್ಯವಾಗುವುದಿಲ್ಲ.

ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಬಲ ಅಸ್ತ್ರಗಳು ಯಾರೋ ಕೆಲವು ಉಳ್ಳವರ ಸ್ವತ್ತಾಗಬಾರದು. ಅವರ ಐಶಾರಾಮದ ಭೋಗವಸ್ತುಗಳನ್ನು ಕರುಣಿಸುವ ಅಲ್ಲಾವುದ್ದೀನನ ಅದ್ಭುತ ದೀಪವಾಗಬಾರದು. ವಿಜ್ಞಾನ ತಂತ್ರಜ್ಞಾನಗಳು ಉಳ್ಳವರ ತೊತ್ತಿನಾಳುಗಳಾಗಿ ಸೇವೆ ಸಲ್ಲಿಸುವುದು ಹೋಗಿ ಅವು ಇಡೀ ಜನಸಮೂಹವನ್ನು ಹಸಿವು ಅಜ್ಞಾನ, ಅಂಧಕಾರ, ಅನಾರೋಗ್ಯ, ಬಡತನ, ನಿರುದ್ಯೋಗ ಮುಂತಾದ ಪೀಡೆಗಳಿಂದ ಬಿಡುಗಡೆ ಮಾಡಬಲ್ಲ ಪ್ರಬಲ ಅಸ್ತ್ರಗಳೂ ಆಯುಧಗಳೂ ಆಗಬೇಕು. ಹೀಗಾಗಲು ಎಲ್ಲಾ ಜನರು ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ತಮ್ಮ ಪ್ರಬಲ ಅಸ್ತ್ರಗಳನ್ನಾಗಿ ಮಾಡಿಕೊಳ್ಳಬೇಕೆಂದು ಪ್ರತಿಪಾದಿಸಿದರು. ಈ ಸಿದ್ಧಾಂತವನ್ನು ಕಾರ್ಯರೂಪಕ್ಕಿಳಿಸಲು ಅವರು ಸಮಾಜದ ಅತ್ಯಂತ ಪ್ರಸಿದ್ಧರು ಉನ್ನತ ಸ್ಥಾನ ಅಧಿಕಾರಗಳಲ್ಲಿದ್ದವರೊಂದಿಗೆ ಜಗಳವಾಡಲು ಅವರ ವಿರೋಧ ಕಟ್ಟಿಕೊಳ್ಳಲು ಹಿಂದೆಗೆಯಲಿಲ್ಲ. ಸಹಾರ ಈ ನಡವಳಿಕೆ ಹೊರಗಿನಿಂದ ಮೇಲ್ನೋಟಕ್ಕೆ ನೋಡುವವರಿಗೆ ಒಬ್ಬ ಜಗಳಗಂಟಿ ಮನುಷ್ಯನೆಂಬಂತೆ ಕಂಡರೂ ಅವರ ಜಗಳಗಳ ಹಿನ್ನೆಲೆಯಲ್ಲಿ ಮಹಾನ್ ಉದ್ದೇಶ ಅಡಗಿರುತ್ತಿತ್ತು. ಬಹುಸಂಖ್ಯಾತ ಬಡಜನರ ಸ್ವರ್ಗಕ್ಕಾಗಿ ಹಂಬಲಿಸಿ ಆ ಸ್ವರ್ಗವನ್ನು ಸಕಾರಗೊಳಿಸಲು ಅತ್ಯಂತ ಛಲದಿಂದ ಕಾದಾಡಿದ ವಿಶ್ವಾಮಿತ್ರ ಚೈತನ್ಯ "ಮೇಘನಾದ ಸಹಾ" ಇಂತಹ ಆದರ್ಶದ ಕನಸನ್ನು ನನಸಾಗಿಸಲು ತಮ್ಮ ಜೀವನದ ಕೊನೆಯುಸಿರಿನವರೆಗೂ ಶ್ರಮಿಸಿದರು. ಈ ಪ್ರಯತ್ನದ ಅಂಗವಾಗಿ ೧೯೫೬ ಫೆಬ್ರವರಿ ೧೬ ರಂದು ಡಾ|| ಜೆ.ಸಿ. ಘೋಷ್‌ರನ್ನು ಯೋಜನಾ ಆಯೋಗದ ಕಛೇರಿಯಲ್ಲಿ ಭೇಟಿಯಾಗಲು ತೆರಳುತ್ತಿದ್ದಾಗ ಹೃದಯಘಾತಕ್ಕೆ ತುತ್ತಾಗಿ ಬೀದಿಯಲ್ಲೇ ಸತ್ತವರು ಸಹಾ. ಇವರ ಸಾವಿನೊಂದಿಗೆ ಭಾರತ ಜನವಿಜ್ಞಾನ ಚಳುವಳಿಯ ಹರಿಕಾರನೊಬ್ಬನನ್ನು ಕಳೆದುಕೊಂಡಿತು. ಇಂತಹ ಮಹಾನ್ ವಿಜ್ಞಾನಿಗೆ ನಾವು ಸಲ್ಲಿಸುವ ಗೌರವ ಅವರ ದಾರಿಯಲ್ಲೇ ಅವರು ಮುಗಿಸಲಾಗದ ಪ್ರಯಾಣವನ್ನು ಮುಂದುವರಿಸುವುದೇ ಆಗಿದೆ.

●


ಸಾಮಾಜಿಕ ಚಿಂತನ ಮಾಲೆ